ಅಧ್ಯಕ್ಷರು:- ಪ್ರಸ್ತಾವ ಏನೆಂದರೆ:
'' 1997ನೇ ಸಾಲಿನ ಕರ್ನಾಟಕ ಪಂಚಾಯಿತ್‌ರಾಜ್ (ತಿದ್ದುಪಡಿ)

ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕಾರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ನಿಯಮ 69

ಅಲ್ಪ ಕಾಲ್ವಾಧಿ ಚರ್ಚೆಗೆ ಉತ್ತರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಇನ್ನೂ 2-3 ಜನ ಮಾನ್ಯ ಸದಸ್ಯರು ಮಾತಾನಾಡಬೇಕಾಗಿದೆ. ನಾನೂ ಮತ್ತು ಮಾನ್ಯ ಯಡಿಯೂರಪ್ಪನವರು ಮಾತ್ರ ಮಾತನಾಡಿದ್ದೇವೆ. ದಯವಿಟ್ಟು ಆ 2-3 ಸದಸ್ಯ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಲ್ಲಕರೆಡ್ಡಿ:-(ಯಾದ್ಗೀರ್):- ಮಾನ್ಯ ಅಧ್ಯಕ್ಷರೆ, 69ನೇ ನಿಯಮದ ಅಡಿಯಲ್ಲಿ ನಾವು ಚರ್ಚೆಗೆ ತೆಗೆದುಕೊಂಡಿರುವ ಕೃಷ್ಣಾ ಮೇಲ್ದಂಡೆಯೋಜನೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾನ್ಯ ವಿರೋಧಪಕ್ಷದ ಧುರೀಣರಾದ ಮಾನ್ಯ ಯಡಿಯೂರಪ್ಪನವರು ಹಾಗೂ ಕಾಂಗ್ರೆಸ್ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಬಹಳ ಸುದೀರ್ಘವಾಗಿ ಮಾತಾನಾಡಿದ್ದಾರೆ. ಆದರೆ ನನ್ನ ಮತಕ್ಷೇತ್ರದಲ್ಲಿ ಈ ಅಚ್ಚುಕಟ್ಟು ಪ್ರದೇಶ ಬರುವುದರಿಂದ ಅಲ್ಲಿರತಕ್ಕ ಜನರು ಈ ಯೋಜನೆಯ ಬಗ್ಗೆ, ಈ ನೀರಾವರಿ ಆಡಳಿತ ಬಗ್ಗೆ ಏನು ಹೇಳಿಕೊಳ್ಳುತ್ತಿದ್ದಾರೆಂಬುದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. 1975-76ರ ಬಚಾವತ್ ತೀರ್ಪಿನ ಪ್ರಕಾರ ನೀರಿನ ಹಂಚಿಕೆ ಏನಿದೆ ಇದೇ ಒಂದು ರೀತಿಯ ವಿಪರ್ಯಾಸ. ತಮಗೆ ಗೊತ್ತಿರುವಂತೆ ಕೃಷ್ಣಾನದಿ ನಮ್ಮ ಕರ್ನಾಟಕದಲ್ಲಿ 480 ಕಿ.ಮೀ. ದೂರ ಹರಿಯುತ್ತಿದೆ, ಆಂಧ್ರದಲ್ಲಿ ಕೇವಲ 116 ಕಿ.ಮಿ. ಮತ್ತು ಮಹಾರಾಷ್ಟ್ರದಲ್ಲಿ 360 ಕಿ.ಮೀ ದೂರ ಹರಿಯುತ್ತಿದೆ. ಆದರೆ ಈ 3 ರಾಜ್ಯಗಳಲ್ಲಿ ಹರಿಯುತ್ತಿರುವ ನದಿಯ ನೀರಿನ ಬಳಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, 116 ಕಿ.ಮೀ. ದೂರ ಹರಿಯುತ್ತಿರುವ ಆಂಧ್ರದಲ್ಲಿ 811 ಟಿ.ಎಂ.ಸಿ.ಎಫ್.ಟಿ. ನೀರು ಹಂಚಿಕೆಯಾಗಿದೆ. ನಮ್ಮ ಕರ್ನಾಟಕಕ್ಕೆ 734 ಟಿಎಂಸಿಎಫ್ ಮತ್ತು ಮಹಾರಾಷ್ಟ್ರಕ್ಕೆ 588 ಟಿಎಂಸಿಎಫ್‌ಟಿ ನೀರು ಹಂಚಿಕೆಯಾಗಿದೆ. ಇದಕ್ಕೆ ಕಾರಣವನ್ನು ವಿಶ್ಲೇಷಣೆ ಮಾಡಿದ್ದೇ ಆದರೆ ಬಚಾವತ್ ಯಾವ ಪ್ರಕಾರ ಇತ್ತು ರಾಜ್ಯಗಳಿಗೆ ಎಂಬುದು ಅಥವಾ ಆಗಿನ ಕಾಲದಲ್ಲಿ ಸರಿಯಾದ ವಾಸ್ತಾವಾಂಶವನ್ನು ಟ್ರಿಬ್ಯುನಲ್ ಮುಂದೆ, ನ್ಯಾಯಾಂಗದ ಮುಂದೆ ಇಡದ ಕಾರಣ ಕರ್ನಾಟಕಕ್ಕೆ ಬಹಳ ದೊಡ್ಡ ಅನ್ಯಾಯವಾಯಿತು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹೈದರಬಾದ್ ಕರ್ನಾಟಕದ ಕಡೆ ಒಂದು ನಾಣ್ಣುಡಿ ಇದೆ.

ಯಾವನು ಎಚ್ಚೆತ್ತಿರುತ್ತಾನೆ ಅವನು ಬದುಕುತ್ತಾನೆ, ಬಾಳುತ್ತಾನೆ,

ಯಾರು ಮಲಗಿರುತ್ತಾರೆ ಅವರು ಮೃತರಾಗುತ್ತಾರೆ. '' ಎಂದು.

ಇಷ್ಟೆಲ್ಲ ನೀರಿನ ಸಂಪತ್ತು ನಮ್ಮ ಪ್ರದೇಶದಲ್ಲಿ ಹೋದರೂ ಕೂಡ, ಯಾವುದೇ ಮುಂಜಾಗರೂಕತೆ ಸಹಿಸದೆ, ನಾವು ವಿನಾಕಾರಣ ಆಂಧ್ರ ಪ್ರದೇಶಕ್ಕೆ ನೀರಿನ ಸಂಪತ್ತನ್ನು ಕಾನೂನು ಮುಖಾಂತರ ಕೊಡುತ್ತಿದ್ದೇವೆ. 1956-57ರಲ್ಲಿ ನಾನು ಹೈದರಾಬಾದಿನಲ್ಲಿ ಪಿಯುಸಿ. ಅಭ್ಯಾಸ ಮಾಡುತ್ತಿದ್ದಾಗ ನಮ್ಮ ಹಾಸ್ಟೆಲ್ ಮುಂದೆ ಒಂದು ದೊಡ್ಡ ಆಫೀಸ್ ಇತ್ತು. ''ನಾಗಾರ್ಜುನ ಸಾಗರ ಡ್ಯಾಂ ಪ್ರಾಜೆಕ್ಟ್ ಆಫೀಸ್ '' ಎಂದು ನಾವು ಕೃಷ್ಣ ನೀರಾವರಿ ಯೋಜನೆ ಬಗ್ಗೆ ಅದರಲ್ಲೂ ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ 1974-75-76ರಲ್ಲಿ ತೀರ್ಪು ಕೊಡುತ್ತಿದ್ದರು ಆಗ ಅಷ್ಟೇ ನಾವು ಜಾಗೃತರಾಗಿ ಕಾನೂನು ಚೌಕಟ್ಟಿನಲ್ಲಿ ನಾವು ವಾದ ಮಾಡಿ, ಈ ಪರಿಸ್ಥಿತಿಗೆ ಈಡಾಗಿದ್ದೇವೆ. ಆದರೆ ಆಂಧ್ರ ಪ್ರದೇಶದವರು 1956-57 ರಿಂದಲೇ ದೀರ್ಘಾಲೋಚನೆ ಮಾಡಿಧ ಕಾಂಕ್ರೀಟ್ ಪ್ರೊಪೋಸಲ್ ತಯಾರು ಮಾಡಿ, ಹಣ ಒದಗಿಸಿ ಅಣೆಕಟ್ಟು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸನ್ನದ್ಧರಾದರು. 1962ರಲ್ಲಿ ಯಾವಾಗ್ಗೆ ಎಲ್. ರಾವ್ ಅವರು ಕೇಂದ್ರದ ನೀರಾವರಿ ಮಂತ್ರಿಯಾದರು, ಆ ಅವರು ಆಂಧ್ರಪ್ರದೇಶಕ್ಕೆ ಕೇಂದ್ರ ನೀರಾವರಿ ಇಲಾಖೆಯಿಂದ ಅಧಿಕೃತವಾಗಿ ಮಂಜೂರಾತಿ ದೊರೆಯದೆ ಇದ್ದರೂ ಕೂಡ, ಅವರು ನೀರಾವರಿ ಮಂತ್ರಿಯಾಗಿದ್ದಾರೆಂಬ ಕಾರಣದಿಂದ ಆಂಧ್ರ ಪ್ರದೇಶದವರು ನಾಗಾರ್ಜುನ ಸಾಗರ ಡ್ಯಾಮನ್ನು ಬಹಳ ತ್ವರಿತ ಗತಿಯಲ್ಲಿ ಸಂಪೂರ್ಣ ಮಾಡಿ, ಎಷ್ಟು ಹೆಚ್ಚು ಪ್ರಮಾಣದಲ್ಲಿ ನೀರಿನ ಶೇಖರಣೆ ಮಾಡಬೇಕೋ ಅಷ್ಟು ಹೆಚ್ಚು ಪ್ರಮಾಣದಲ್ಲಿ ನೀರಿನ ಶೇಖರಣೆ ಮಾಡಿ ಯಾವಾಗ ಬಚಾವತ್ ಅವಾರ್ಡ್ ತೀರ್ಪು ಕೊಟ್ಟಿತು. ಆಗ ಆಯಿತು. ಇಷ್ಟು ದೊಡ್ಡ ಪ್ರಮಾಣದಲ್ಲಿ ದೇಶದ ಸಂಪತ್ತನ್ನು ಖರ್ಚು ಮಾಡಿ ತಯಾರು ಮಾಡಿದಂಥ ಅಣೆಕಟ್ಟು ಕಟ್ಟಿ ನೀರು ಶೇಖರಣೆಯಾಗಿದೆ, ಅದನ್ನು ಸದುಪಯೋಗ ಮಾಡಿಕೊಳ್ಳಬೇಕಾದರೆ ಹಣ ಖರ್ಚು ಮಾಡಿದ್ದು ಮತ್ತು ಜಲಾಶಯಗಳಲ್ಲಿ ನೀರನ್ನು ಶೇಖರಣೆ ಮಾಡಿದ್ದು ಏನಿದೆ, ಅದು ಉಪಯೋಗ ಆಗಲೇಬೇಕೆಂಬ ಕಾರಣದಿಂದ ಅನ್ಯಾಯವಾಗಿ ಬಚಾವತ್ ನ್ಯಾಯಪೀಠ ಆಂಧ್ರ ಪ್ರದೇಶಕ್ಕೆ 811 ಟಿ.ಎಂ.ಸಿ. ನೀರನ್ನು ಕೊಟ್ಟಿತು. ಇಲ್ಲಿ ಕೇವಲ 116 ಕಿಲೋಮೀಟರ್ ನದಿ ಹರಿಯುತ್ತಿದೆ. ಇನ್ನು ಬಚಾವತ್ ತೀರ್ಪು ಬಂದಮೇಲಾದರೂ ಕೂಡ ಕೆಲಸವನ್ನು ಎಷ್ಟು ತ್ವರಿತಗತಿಯಲ್ಲಿ ಮಾಡಿದ್ದೇವೆಂಬುದನ್ನು ಜನರ ಸಮ್ಮುಖದಲ್ಲಿದೆ, ಸದನದ ಸಮ್ಮುಖದಲ್ಲಿದೆ. ಈ ಪ್ರಶ್ನೆ ಅನೇಕ ವರ್ಷಗಳಿಂದ ಇದೆ. ನಾನು 1978ರಿಂದ ಇಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಮೊದಲು ಮೇಲ್ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ಪ್ರಶ್ನೋತ್ತರ ರೂಪದಿಂದ, ಗಮನ ಸೆಳೆಯುವ ಸೂಚನೆ ಮೂಲಕ, ಕೆಲವು ಸಾರಿ ಅಡ್ಜರ್ನ್‌ಮೆಂಟ್ ಮೋಷನ್ ಮುಖಾಂತರ, ಡಿಮ್ಯಾಂಡ್ ಬಂದಾಗ ಮತ್ತು ಬಜೆಟ್ ಮೇಲೆ ಮಾತನಾಡುವ ಕಾಲಕ್ಕೆ, ಗವರ್ನರ್ಸ್ ಅಡ್ರೆಸ್ ಮೇಲೆ ಮಾತನಾಡತಕ್ಕ ಕಾಲಕ್ಕೆ ಅನೇಕ ಸಲ ಚರ್ಚೆ ಮಾಡಿದ್ದೇವೆ. ಒಂದು ಸಾರಿ ಅಲ್ಲ ಎರಡು ಸಾರಿ ಅಲ್ಲ, ನೂರಾರು ಸಲ ಚರ್ಚೆಗೆ ಬಂದಿದೆ. ಇವತ್ತು ಯಾವುದೇ ಪಕ್ಷ ಇರಬಹುದು, ನಾವು ಈ ವಿಷಯದಲ್ಲಿ ಪಕ್ಷಾತೀತವಾಗಿ ವಿಚಾರ ಮಾಡಬೇಕಾಗಿದೆ. ಆಗಿನ ಕಾಲಕ್ಕೆ ಸರ್ಕಾರದವರು ಹೆಚ್ಚು ಸಮರ್ಥರಾಗಿ ಉತ್ತರ ಕೊಟ್ಟಿದ್ದಾರೆಂದು ಅನ್ನಿಸುತ್ತದೆ. ಈ ಸಲ ಆತ್ಮ ಸಮರ್ಪಣೆಯಿಂದ ಕೆಲಸ ಮಾಡಿ ನಮ್ಮ ಕೆಲಸವನ್ನು ಪೂರೈಸುತ್ತೇವೆಂದು ತಿಳಿದುಕೊಂಡು ಆ ಭಾಗದ ಜನರನ್ನು ನೆಚ್ಚಿಕೊಂಡು ಇನ್ನೇನು ಈ ನೀರಾವರಿ ಕಾರ್ಯಕ್ರಮ ಫಲಕಾರಿಯಾಗುತ್ತದೆ ಎಂದು ಧರಣಿ ಮಾಡುತ್ತಿದ್ದರು. ಆದರೆ ಇದುವರೆಗೆ

ಆದದ್ದು ನಮ್ಮ ದೃಷ್ಟಿಯಲ್ಲಿ, ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತು ಆ ಪ್ರಮಾಣದಲ್ಲಿ ಆಗಿಲ್ಲ. ಕೇವಲ 40 ಪರ್ಸೆಂಟ್ ಕೆಲಸ ಆಗಿದೆ. ಆದರೆ ನಮ್ಮ ಮುಂದಿರತಕ್ಕ ವರ್ಷಗಳು ಕೇವಲ 4 ವರ್ಷಗಳು. ಆ 4 ವರ್ಷಗಳು ಆದಮೇಲೆ ಈ ಬಚಾವತ್ ಅವಾರ್ಡ್ ಪ್ರಕಾರ ಬಿ.ಫಾರ್ಮುಲ ಜಾರಿಗೆ ಬರುತ್ತದೆ. ಬಿ.ಫಾರ್ಮುಲದಲ್ಲಿ ಸರ್ಪ್ಲಸ್ ನೀರು ಎಂದು ಏನಿದೆ, ನಾವು ಆ ನೀರನ್ನು ಉಪಯೋಗ ಮಾಡಿಕೊಂಡಿಲ್ಲ. ಮಾನ್ಯ ಮಂತ್ರಿಗಳು ಹೇಳಿದರು, ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ಸ್ವಲ್ಪ ಗುಣಾತ್ಮಕ ಬದಲಾವಣೆಯಾಗುತ್ತಿದೆ. ಎಲೆಕ್ಷನ್ ಗಿಂತ ಮೊದಲು, ಎಲೆಕ್ಷನ್ ಆಗಿ ಅಧಿಕಾರಕ್ಕೆ ಬಂದ 2-3 ತಿಂಗಳ ನಂತರ ಒಂದು ರೀತಿಯ ಹೇಳಿಕೆ ಕೊಡುತ್ತಿದ್ದರು. ಏನು ಹೇಳುತ್ತಿದ್ದರು ಅಂದರೆ ನಮ್ಮ ಪಾಲಿಗೆ ಬಚಾವತ್ ತೀರ್ಪಿನ ಪ್ರಕಾರ ಬಂದ ನೀರನ್ನು ನಾವು ಉಪಯೋಗ ಮಾಡಿಯೇ ತೀರುತ್ತೇವೆ. ಆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ರೊಕ್ಕದ ಕೊರತೆ ಬರಲಾರದು ಎಂದು ಹೇಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಸದನದ ಒಳಗೆ ಮತ್ತು ಸದನದ ಹೊರಗೆ ಸ್ವಲ್ಪ ಚಾತುರ್ಯದಿಂದ ಉತ್ತರ ಕೊಡುತ್ತಿದ್ದಾರೆ. ಏನು ಕೊಡುತ್ತಿದ್ದಾರೆ ಎಂದರೆ ಮೊದಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ನೀರು ಬಳಸುತ್ತೇವೆ, ನೀರು ಉಪಯೋಗ ಮಾಡುತ್ತೇವೆಂದು ಹೇಳಿದ್ದರು. ಆದರೆ ಆಗ ಏನು ಹೇಳುತ್ತಿದ್ದಾರೆಂದರೆ, ಎರಡು ಸಾವಿರ ಇಸವಿಯೊಳಗೆ ನೀರು ಬಳಸುವ ನಮ್ಮ ಹಕ್ಕನ್ನು ಉಳಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಎರಡರಲ್ಲೂ ಸ್ವಲ್ಪ ವ್ಯತ್ಯಾಸ ಇದೆ. ಆದರೆ ಅವರು ಏತಕ್ಕೆ ಈ ರೀತಿ ಅಧರ್ಮದಿಂದ ಮಾತನಾಡುತ್ತಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ರಾಜಕೀಯ ಇಚ್ಛಾಶಕ್ತಿ ಇದ್ದಾಗ, ಇನ್ನೂ 4 ವರ್ಷ ನಮ್ಮ ಮುಂದೆ ಇರುವಾಗ ಈಗಾಗಲೇ ಸಾಕಷ್ಟು ಇನ್‌ಫ್ರಾಸ್ಟ್ರಕ್ಚರ್ ತಯಾರಾಗಿದೆ. ಕೇವಲ ಹಣ ಒದಗಿಸಿಕೊಡುವುದು ಮತ್ತು ಕೆಲಸವನ್ನು ಜಾಗತ್ರೆಯಾಗಿ ಸಾಗಿಸುವುದು, ಇವೆರಡೇ ನಮ್ಮ ಮುಂದೆ ಉಳಿದಿರತಕ್ಕದ್ದು. ಈ ನಮ್ಮ ಸದನದ ನಮ್ಮ ಪಕ್ಷದ ಧುರೀಣರಾದ ಶ್ರೀ ಖರ್ಗೆಯವರು ಹಣದ ಶೇಖರಣೆ ಬಗ್ಗೆ ಸಾಕಷ್ಟು ಉತ್ಸಾಹದಿಂದ ಮಾತನಾಡಿದರು ಅದರ ಬಗ್ಗೆ ನಾನು ಮಾತನಾಡುವುದಕ್ಕೆ ತಯಾರಿಲ್ಲ. ಹಣ ಹಣ ಹಣ ಬೇಕು. ಆದರೆ ಹಿಂದಿನ ಬಜೆಟರಿ ಪ್ರಾವಿಷನ್ ನೋಡುತ್ತಾ ಕುಳಿತರೆ ಯಾವ ವರ್ಷ ಎಷ್ಟು ಹಣ ಅಲಾಟ್ ಮಾಡಿದ್ದಾರೆ, ಅದು ಸರಿಯಾಗಿ ಉಪ ಯೋಗವಾಗುತ್ತಿಲ್ಲ. ಕೇವಲ ಒಂದೇ ಒಂದು ವರ್ಷ ಎಷ್ಟು ಹಣ ಅಲಾಟ್ ಮಾಡಿದ್ದಾರೆ ಅದಕ್ಕಿಂತ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಕೆಲಸ ಮಾಡಿದ್ದಾರೆಯೇ ವಿನಹ ಸುಮಾರು 1978 ರಿಂದ ಈ ಕೆಲಸ ಬಹಳ ವೇಗದಿಂದ ನಡೆದಿದೆ. 1978 ರಿಂದ ಇಲ್ಲಿಯವರೆಗೆ ಎಷ್ಟು ಅಲಾಟ್ ಮಾಡಿರುತ್ತಾರೆ, ಅಷ್ಟು ಹಣ ಕೂಡ ಉಪಯೋಗ ಮಾಡಿರುವುದಿಲ್ಲ. ಇದಕ್ಕೆ ಕಾರಣ ಏನು? ಉತ್ತರ ಕೊಡ ಅದಕ್ಕೆ ನಾವು ಏನೆಂದು ನಿರ್ಣಯ ಕೊಡಬೇಕು? ಅಲಾಟ್ ಮಾಡದಷ್ಟು ಹಣ ಕೂಡ ಉಪಯೋಗ ಮಾಡುತ್ತಿಲ್ಲ ಅಂದರೆ, ಇದಕ್ಕೆ ದೋಷ ಏನು? ದೋಷ ಎಲ್ಲಿದೆ ಇವತ್ತು ಒಂದು ಸಾವಿರ ಕೋಟಿ, ಎರಡು ಸಾವಿರ ಕೋಟಿ, ಮೂರು ಸಾವಿರ ಕೋಟಿ ಎಂದು ಮಾಡುತ್ತಿದ್ದೀರಲ್ಲ ಅದರಿಂದ ಏನು ಉಪಯೋಗ? ಕಾರ್ಯಕ್ರಮಗಳು ಇಲ್ಲಿ ಏತಕ್ಕೆ ವೇಗದಿಂದ ನಡೆಯುತ್ತಿಲ್ಲ? ಅಲ್ಲಿ 3-4 ದೋಷಗಳು ಉಂಟು ಇನ್ನೊಂದು ತೊಡಕು ಎಲ್ಲಿ ಬಂತು ಎಂದರೆ ವಿಶ್ವ ಬ್ಯಾಂಕಿನ ಸಹಾಯ. ವಿಶ್ವ ಬ್ಯಾಂಕ್‌ನವರು ಹಣಕೊಡಬೇಕಾದರೆ, ಅನೇಕ ಷರತ್ತುಗಳನ್ನು ಹಾಕುತ್ತಾರೆ. ಆ ಷರತ್ತು ಪ್ರಕಾರ ನಡೆಯಲಿಲ್ಲವೆಂದರೆ ಹಣ ಕೊಡುವುದಿಲ್ಲ ಷರತ್ತುಗಳನ್ನು ಫುಲ್‌ಸಿಮೆಂಟ್ ಮಾಡಬೇಕಾದರೆ ಬಹಳ ಪೇಚಾಡಬೇಕಾಗುತ್ತದೆ. ಇಷ್ಟೆಲ್ಲ ಪೇಚಾಡಿ

ಹಣ ಉಪಯೋಗ ಮಾಡಿದ್ದು ಎಷ್ಟು ಅಂದರೆ ಮೊದಲ ಹಂತದಲ್ಲಿ ಕೇವಲ 119 ಕೋಟಿ ರೂಪಾಯಿಗಳು. 119 ಕೋಟಿ ಸುಮಾರು ಹತ್ತು ವರ್ಷಗಳಲ್ಲಿ ನಮ್ಮ ಬಜೆಟರಿ ಪ್ರಾವಿಷನ್‌ನಿಂದ ಮಾಡುವುದಕ್ಕೆ ಸಾಧ್ಯವಿರಲಿಲ್ಲವೇನು ನಮ್ಮಲ್ಲಿ? ಈ ವಿಳಂಬಕ್ಕೆ ಕಾರಣವೇನೆಂದರೆ, ನಾವು ಹೇಳುತ್ತೇವೆ ವಿಶ್ವ ಬ್ಯಾಂಕಿನವರು ಆ ಷರತ್ತು ಹಾಕಿದ್ದಾರೆ ಈ ಷರತ್ತು ಹಾಕಿದ್ದಾರೆ ಅಲ್ಲಿ ನೆಗೋಶಿಯೇಷನ್ ತೆಗೆದುಕೊಳ್ಳಬೇಕು ಇಲ್ಲಿ ನೆಗೋಶಿಯೇಷನ್ ತೆಗೆದುಕೊಳ್ಳಬೇಕೆಂದು ಇಪ್ಪತ್ತಾರು ನೆಪಗಳನ್ನು ಕಾಲಹರಣ ಮಾಡುತ್ತೇವೆಯೇ ಹೊರತು ಯಾವ ಮಟ್ಟದಲ್ಲಿ ನಾವು ಕೆಲಸ ಮಾಡಬೇಕು ಯಾವ ವೇಗದಲ್ಲಿ ಕೆಲಸ ಮಾಡಬೇಕು ಆ ವೇಗದಲ್ಲಿ ಕೆಲಸ ಮಾಡುತ್ತಿಲ್ಲ. ಆಡಳಿತ ಮಾಡತಕ್ಕವರು ಯಾರೇ ಇರಬಹುದು, ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಅದರಲ್ಲಿ ಸುದೈವದಿಂದಲೋ ದುರ್ದೈವದಿಂದಲೋ ನಮ್ಮ ಇಂದಿನ ಮುಖ್ಯ ಮಂತ್ರಿಗಳು ಇಷ್ಟು ಪಾಲನ್ನು ಅವರು ಹೊರಬೇಕಾಗುತ್ತದೆ. 1983 ರಿಂದ 1988 ನೇ ಇಸವಿಯವರೆಗೆ ಅವರು ನೀರಾವರಿ ಮಂತ್ರಿಗಳಾಗಿದ್ದರು ಮತ್ತು ಸಂಪುಟದ ಹಿರಿಯ ಸದಸ್ಯರಾಗಿದ್ದರು ಪ್ರಭಾವಿ ವ್ಯಕ್ತಿಗಳಾಗಿದ್ದರು. ಕೆಲವು ಸಲ ಅವರು ಕೃಷ್ಣ ಬೇಸಿನ್ ಬಗ್ಗೆ ಯಾರೂ ನನಗೆ ಹೇಳಬೇಕಾಗಿಲ್ಲ, ನನಗೆ ಸಾಕಷ್ಟು ಮಾಹಿತಿ ಇದೆ. ಅದರಲ್ಲಿ ಸಾಕಷ್ಟು ನಾನು ಪ್ರಭುತ್ವ ಹೊಂದಿದ್ದೇನೆಂದು ಹೇಳುತ್ತಿರುತ್ತಾರೆ. ಅದನ್ನು ನೋಡಿ ನಮಗೆ ಒಂದೊಂದು ಸಲ ವಿಶ್ವಾಸ ಮೂಡುತ್ತದೆ. ಆದರೆ ಗ್ರೌಂಡ್ ಏನಿದೆ ಇದರಲ್ಲಿ ಎಂದು ನಮಗೆ ಕಂಡುಬರುತ್ತಿಲ್ಲ. ಆದರೆ ಹಣ ಉಪಯೋಗ ಮಾಡತಕ್ಕ ವ್ಯವಸ್ಥೆ ಕೆಳಗಿನ ಮಟ್ಟದಲ್ಲಿ ಚೆನ್ನಾಗಿ ಇದೆಯೇ ಇಲ್ಲವೇ? ಮೊದಲನೆಯದು ಭೂಸ್ವಾಧೀನ ಮಾಡಿಕೊಳ್ಳುವುದು. ಸುಮಾರು ಒಂದು ಲಕ್ಷ 20 ಸಾವಿರ ಹೆಕ್ಟೇರ್‌ನಷ್ಟು ಭೂಮಿಯನ್ನು ಆ ಭಾಗದಲ್ಲಿ ಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಭೂಮಿ ಸ್ವಾಧೀನ ಮಾಡಿಕೊಳ್ಳದೆ ಕೆಲಸ ಆಗುವುದಿಲ್ಲ. ಇದರಲ್ಲಿ ಸರ್ಕಾರದ ಭೂಮಿ ಇರುವುದು ಕೇವಲ 6 ಸಾವಿರ ಹೆಕ್ಟೇರ್. ಸರ್ಕಾರ ಇದುವರೆಗೆ ಕೇವಲ 37 ಸಾವಿರ ಹೆಕ್ಟೇರ್ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿದೆ. ಇದು ಇನ್ನೂ ನಡೆಯುತ್ತಿದೆ. ನಮ್ಮ ಅವಧಿ ಉಳಿದಿರುವುದು ಇನ್ನು ಕೇವಲ 4 ವರ್ಷ. ಇನ್ನೂ 77 ಸಾವಿರ ಹೆಕ್ಟೇರ್ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಅಂದ ಮೇಲೆ ನಾವು ಮಾಡತಕ್ಕ ಕೆಲಸದ ಗಾತ್ರ ಎಷ್ಟು ಪ್ರಮಾಣದಲ್ಲಿದೆ? ನಾವು ಯಾವ ಲೋಕದಲ್ಲಿದ್ದೇವೆಂಬುದು ಚೆನ್ನಾಗಿ ಇದರಿಂದ ಅರ್ಥವಾಗುತ್ತದೆ. ಇನ್ನು ರಿಹ್ಯಾಬಿಲಿಟೇಷನ್, ವಿಶ್ವ ಬ್ಯಾಂಕಿನ ಸಹಾಯ ಪಡೆಯುತ್ತೇವೆ ಅಂದ ಮೇಲೆ ರೀಹ್ಯಾಬಿಲಿಟೇಷನ್‌ಗೆ ಬಹಳ ಆದ್ಯತೆ ಕೊಡುತ್ತೇವೆ. ಯಾವುದೇ ಒಂದು ಕಾರ್ಯ ಜನರ ಕಲ್ಯಾಣಕ್ಕೆ ಆಗಿರುತ್ತದೆ. ಜನರ ಕಲ್ಯಾಣಕ್ಕೆ ಆಗಿರತಕ್ಕ ಯೋಜನೆಯಿಂದ ಇರತಕ್ಕ ರಿಹ್ಯಾಬಿಲಿಟೇಷನ್ ಸಲುವಾಗಿ ಪುನರ್‌ವಸತಿ ಸಲುವಾಗಿ ಪುನರ್‌ನಿರ್ಮಾಣ ಸಲುವಾಗಿ ಆದ್ಯತೆ ಕೊಡುತ್ತೇವೆ. ವಿಶ್ವ ಬ್ಯಾಂಕ್ ನೆರವಿಗೆ ಏತಕ್ಕೆ ಹೋಗುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ಇವರು 2ನೇ ಸ್ಟೇಜಿಗೆ ವಿಶ್ವಬ್ಯಾಂಕ್ ನೆರವಿಗೆ ಹೋಗಿದ್ದಾರೆ. ಅದರಿಂದ ಸಿಗುವುದೇನು? ಸನ್ಮಾನ್ಯ ಮುಖ್ಯ ಮಂತ್ರಿಗಳು 220 ಅಥವಾ 230 ಕೋಟಿ ರೂಪಾಯಿ ಸಿಗುತ್ತದೆಂದು ಹೇಳಿದರು. ಈ 220-230 ಕೋಟಿ ಸಲುವಾಗಿ ನಾವು ಅಲ್ಲಿ ಎಷ್ಟು ಕಷ್ಟಪಡಬೇಕು? ಎಷ್ಟು ಫಾಲೋ ಮಾಡಬೇಕಾಗುತ್ತದೆ ನಾವು? ಎಷ್ಟು ಕಿರಿಕಿರಿ ಇದೆ ಇದರಲ್ಲಿ? ಇದೇ ವರ್ಷ ಬಜೆಟ್‌ನಲ್ಲಿ ತಾವು ಸಾವಿರಾರು ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಯು.ಕೆ.ಪಿ.ಗೆ ಬಜೆಟರಿ ಪ್ರಾವಿಷನ್ ಏತಕ್ಕೆ

ಹೆಚ್ಚಿಗೆ ಮಾಡಿಲ್ಲ? ಈ ಸಾರಿ ಕೇವಲ 250 ಕೋಟಿ ರೂಪಾಯಿ ಅಲಾಟ್ ಮಾಡಿದ್ದೀರಿ. ಈಗ ಕೃಷ್ಣಾ ಜಲಭಾಗ್ಯ ನಿಗಮದಲ್ಲೂ ಕೂಡ ಶೇಖರಣೆ ಮಾಡುತ್ತಾ ಇದ್ದೀರಿ. ಅದು ವೇಗದಿಂದ ನಡೆಯುತ್ತಾ ಇದೆ. ಆದರೆ ಅದರಿಂದ ಆ ಭಾಗದ ಜನರಿಗೆ, ಕೃಷ್ಣಾ ಬೇಸಿನ್ ಜನರಿಗೆ ಹೊರೆ ಬೀಳುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಕಾವೇರಿ ಬೇಸಿನ್‌ನವರಿಗೆ ಜಲಭಾಗ್ಯ ನಿಗಮ ಇಲ್ಲ. ಡಿಬೆಂಚರ್‍ಸ್ ಇಲ್ಲ. ಬಾಂಡ್ ಇಲ್ಲ. ಯಾರು ಡಿಬೆಂಚರ್ ಬಾಂಡ್ ತೆಗೆದುಕೊಳ್ಳುತ್ತಿದ್ದಾರೆ ಅವರಿಗೆ ನೀವು ಇಂಟರೆಸ್ಟ್ ಕೊಡಬೇಕು. ಇಂಟರೆಸ್ಟ್ ಸರ್ಕಾರದವರು ಕೊಡುತ್ತಾರೋ? ಜನರ ಮೇಲೆಯೇ ವಾಟರ್ ರೇಟ್ ಮೂಲಕ ಹಾಕಬೇಕು. ಜನರೇ ಆ ಭಾರವನ್ನು ಹೊರಬೇಕಾಗುತ್ತದೆ. ಒಂದು ಕಡೆ ಈ ರೀತಿ ಇನ್ನೊಂದು ಕಡೆ ಆ ರೀತಿ. ಇವತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾದರೆ ಒಂದು ಸ್ಟೇಟ್‌ಮೆಂಟ್ ಕೊಡಬೇಕಾಗುತ್ತದೆ, ಎಲ್ಲಾ ಬೇಸಿನ್ ರೈತರಿಗೆ ಒಂದೇ ವಾಟರ್ ರೇಟ್ ಕೊಡುತ್ತೇವೆ ಎಂದು ಆಶ್ವಾಸನೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಇದು ಅನಾವಶ್ಯಕ ಇತ್ತು. ಪ್ರತಿವರ್ಷ ಅಲ್ಲಿಂದ ಇಲ್ಲಿಯವರೆಗೆ ಸುಮಾರು 1 ವರ್ಷ 3 ತಿಂಗಳಾಯಿತು. ಆ ಭಾಗದಲ್ಲಿ ಕನಿಷ್ಠ ಪಕ್ಷ ನನಗೆ ಗೊತ್ತಿದ್ದಂತೆ ಇವರು ಹಿರಿಯ ಧುರೀಣರಿದ್ದಾರೆ, ಸಾಕಷ್ಟು ಕಾಳಜಿಯಿಂದ ಕಳಕಳಿಯಿಂದ ತಮ್ಮ ವಿಷಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ನಾಲ್ಕೈದು ಜಿಲ್ಲೆಗಳು ಉದ್ಧಾರವಾಗುತ್ತದೆಂಬ ಕಾರಣದಿಂದ ಬಹಳ ಹೆಚ್ಚಿನ ಪ್ರಮಾಣದಲ್ಲಿ ಅವರ ಪಕ್ಷಕ್ಕೆ ಬೆಂಬಲ ಸಿಕ್ಕಿತು ಈ ಸಲ. ಆದರೆ ಜನರು ಏನು ಮಾತನಾಡುತ್ತಿದ್ದಾರೆ ಇವತ್ತು? ಅವರು 1983-84ನೇ ಇಸವಿಯನ್ನು ನೆನೆಪಿಸಿಕೊಳ್ಳುತ್ತಿದ್ದಾರೆ. 1983-84ರಲ್ಲಿ ಈಗಿನ ಸನ್ಮಾನ್ಯ ಮುಖ್ಯ ಮಂತ್ರಿಗಳು ನೀರಾವರಿ ಮಂತ್ರಿಯಾಗಿದ್ದಾಗ ಎರಡು ವರ್ಷ 1983-84ರಲ್ಲಿ ಕೆಲಸ ಕುಂಠಿತವಾಯಿತು. ಕಾರಣ ಏನೆಂದರೆ ಆರ್ಬಿಟ್ರೇಷನ್. ನಾನು ಆಗ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಡೆಪ್ಯುಟಿ ಚೇರ್‌ಮನ್ ಇದ್ದೆ. ನನ್ನನ್ನು ಕೂಡ ಮೀಟಿಂಗ್‌ಗೆ ಕರೆದಿದ್ದರು. ಕಾನ್‌ಫರೆನ್ಸ್ ಹಾಲ್‌ನಲ್ಲಿ ಆ ಮೀಟಿಂಗ್ ಇತ್ತು. ಆ ಕಾಲಕ್ಕೆ ನಮ್ಮ ಆ ಭಾಗದ ಧುರೀಣರಾದ ಬಾಪೂಗೌಡರಿಗೂ ಮತ್ತು ದೇವೆಗೌಡರಿಗೂ ಬಹಳ ಮಾತಿನ ಚಕಮಕಿಯಾಯಿತು. ಸ್ವಾಮಿ, ನೀವು ನೀರಾವರಿ ಮಂತ್ರಿಗಳಾದ ಮೇಲೆ ಕೆಲಸವೆಲ್ಲಾ ಸ್ಥಗಿತವಾಗಿವೆ. ಏತಕ್ಕೆ ಸ್ಥಗಿತ ಆಯಿತು ಎಂದು ಪ್ರಶ್ನೆ ಮಾಡಿದಾಗ ಆರ್ಬಿಟ್ರೇಷನ್ ಕೇಸ್‌ಗಳು ಬಹಳ ಇವೆ, ಸುಮಾರು 17-18 ಆರ್ಬಿಟ್ರೇಷನ್ ಕ್ಲೇಮ್ಸ್ ಇವೆ, ಅದು ಸೆಟಲ್ ಆಗುವವರೆಗೂ ನಾನು ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಅವರು ಉತ್ತರ ಕೊಟ್ಟರು. ಅದಕ್ಕೆ ಭಯಂಕರ ರೇಗಾಡಿದರು ಅವರು. ನನಗನ್ನಿಸಿತು ಬಾಪೂಗೌಡರು ಏನೋ ಮಾಡಲಿಕ್ಕೆ ಹೋಗಿ ಏನೋ ಮಾಡಿದರಲ್ಲಪ್ಪ, ಇಷ್ಟೆಲ್ಲಾ ರೇಗಾಡಿಬಿಟ್ಟು ಮಾತನಾಡಿದರೆ ಮಂತ್ರಿಗಳು ಕೋಪಗೊಂಡು ಏನಾದರೂ ತೊಂದರೆಯಾಗುತ್ತದೇನೋ ಅಂತ ತಿಳಿದುಕೊಂಡಿದ್ದೆ. ಆದರೆ ಅದು ಆಗಲಿಲ್ಲ. ಸುಮಾರು ಎರಡು ತಿಂಗಳಾದ ಮೇಲೆ ಗುಲ್ಬರ್ಗಕ್ಕೆ ಸನ್ಮಾನ್ಯ ದೇವೇಗೌಡರು ಬಂದಾಗ ಅವರು ತಮ್ಮ ಮನೆಗೆ ಟೀಗೆ ಕರೆದಿದ್ದರು. ಅಲ್ಲಿ ನನಗೂ ಕೂಡ ಕರೆದಿದ್ದರು. ಇಬ್ಬರೂ ಬಹಳ ಸಂತೋಷದಿಂದ ಅಲ್ಲಿ ಮಾತನಾಡಿ ಪುನಃ ಇವರ ಸಾಮರಸ್ಯ ಏರ್ಪಟ್ಟು ಕೆಲಸ ನಡೆಯುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ ಕೆಲಸ ಮಾತ್ರ ಎರಡು ವರ್ಷ ಯಾವ ವೇಗದಲ್ಲಿ, ಕಾಂಗ್ರೆಸ್ ಗೌರ್ನಮೆಂಟ್ ಇದ್ದಾಗ ಅಥವಾ ಹಿಂದಿನ ಗೌರ್ನಮೆಂಟ್, ನಾನು ಕಾಂಗ್ರೆಸ್ ಅಂತ ಹೇಳುವುದಕ್ಕೆ ತಯಾರಿಲ್ಲ. 1978ರಿಂದ 1983ರವರೆಗೆ ಏನು ಭೌತಿಕ ಪ್ರಗತಿಯಾಗಿತ್ತು, ಏನು ಭೌತಿಕ ಸಾಧನೆಯಾಗಿತ್ತು ಆ ಕಂಪ್ಯಾರೆಟೀವ್ ಫಿಗರ್ ಮುಂದೆ

ಕುಳಿತು ನೀವು ನೋಡಿ, ಪರೀಕ್ಷೆ ಮಾಡಿ, ಅಷ್ಟಾಗಿಲ್ಲ. 1982ನೇ ನವೆಂಬರ್‌ನಲ್ಲಿ ರೈತರಿಗೆ ಎಡಭಾಗದ ಕೆನಾಲ್‌ನಿಂದ ನೀರು ಬಿಟ್ಟರು ಆ ಪ್ರಮಾಣದಲ್ಲಿ ಆಯಿತು. ಆಗ ಸಾಕಷ್ಟು ಡಿಲೇ ಆಗಿದ್ದರೂ ಕೂಡ ನೀರು ಬಿಡುವುದಕ್ಕೆ ಸಾಧ್ಯವಾಯಿತು. ಹಿಂದೆ ಅದು ಆರ್ಬಿಟ್ರೇಷನ್, ಕೋರ್ಟು, ಅನೇಕ ಕಾರಣದಿಂದ ಈ ಕೆಲಸಗಳನ್ನು ನಾವು ತ್ವರಿತಗತಿಯಿಂದ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ನಾವು ವಿಶ್ವಬ್ಯಾಂಕಿಗೆ ಸಹಾಯಕ್ಕಾಗಿ ಅರ್ಜಿ ಹಾಕಿದ್ದೇವೆ. ಈಗ ರೀಹ್ಯಾಬಲಿಟೇಷನ್‌ದ್ದೇ ದೊಡ್ಡ ಸಮಸ್ಯೆಯಾಗಿದೆ. ರಿಹ್ಯಾಬಿಲಿಟೇಷನ್ ಕಾರ್ಯಕ್ರಮ ಪೂರ್ತಿಯಾಗಬೇಕಾದರೆ ಸುಮಾರು 1200 ಕೋಟಿ ರೂಪಾಯಿ ಬೇಕಾಗುತ್ತದೆ, ಎಲ್ಲಿಂದ ತರುತ್ತೀರಿ? ಮತ್ತೆ ಸಮರೋಪಾದಿಯಲ್ಲಿ ಕೆಲಸ ಆಗಬೇಕು. ಪ್ರತಿ ಸಲ ನಾವು ಸಮರೊಪಾಯದಲ್ಲಿ ಕ್ಷಿಪ್ರಸದೃಶವಾಗಿ ಎಂದು ಏನೇನೋ ನಾವು ಮಾತನಾಡುತ್ತಿದ್ದೇವೆ. ಆದರೆ ಕೆಲಸ ಮಾತ್ರ ಏನೂ ಆಗುತ್ತಿಲ್ಲ. ಅಲ್ಲಿ ಭೂಸ್ವಾಧೀನ ಮಾಡತಕ್ಕ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಏನಿರುತ್ತಾರೆ, ಫಿಗರ್ ನಿಮಗೆ ಕೊಡಬೇಕಾದರೆ ರಿಹ್ಯಾಬಲಿಟೇಷನ್ ಆಫೀಸರ್ಸ್ 6 ಮಂದಿಯಲ್ಲಿ 5 ಹುದ್ದೆ ಖಾಲಿ ಇದೆ. ಈಗ ಜಾಮ್‌ದಾರ್ ಅಂತ ಒಳ್ಳೆ ಅಧಿಕಾರಿಯನ್ನು ಹಾಕಿದ್ದೀರಿ, ಕೆಲಸ ಬೇಗ ಮಾಡುತ್ತಿರಬಹುದು, ಅದು ಬೇರೆ ವಿಷಯ. ರಿಹ್ಯಾಬಲಿಟೇಷನ್ ಆಫೀಸರ್ಸ್ 6ರಲ್ಲಿ 5 ಜನ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಕೇವಲ ಒಬ್ಬ ಮಾತ್ರ ಇದ್ದಾನೆ. ಗೆಜೆಟೆಡ್ ಮ್ಯಾನೇಜರ್ಸ್ ಎರಡು ಮಂದಿ ಕೊರತೆ ಇದೆ. ಅಕ್ವಿಸಿಷನ್ ಆಫೀಸ್‌ನಲ್ಲಿ 27 ಹುದ್ದೆಗಳಲ್ಲಿ 11 ಹುದ್ದೆಗಳು ಖಾಲಿ ಇವೆ. ಲ್ಯಾಂಡ್ ಸರ್ವೇಯರ್ಸ್‌ನಲ್ಲಿ 32 ಹುದ್ದೆಗಳಲ್ಲಿ 20 ಹುದ್ದೆಗಳು ಖಾಲಿ ಇವೆ. ಮತ್ತು ಟೈಪಿಸ್ಟ್‌ಗಳು 27 ಹುದ್ದೆಗಳಲ್ಲಿ 12 ಖಾಲಿ ಇವೆ. ಯಾವಾಗಲಾದರೂ ಆ ಆಫೀಸಿಗೆ ಭೇಟಿ ಮಾಡಿದ ಯಾರೂ ಇರುವುದಿಲ್ಲ. ನಾನೇ ಎರಡು ಸಲ ಹೋಗಿದ್ದೇನೆ. ನನ್ನ ಮತಕ್ಷೇತ್ರದ ಕೆಲವು ರೈತರ ಸಮಸ್ಯೆ ಬಗ್ಗೆ ಹೋದಾಗ ಯಾರೂ ಇರಲಿಲ್ಲ. ಯಾವಾಗಲೂ ಖಾಲಿ ಇರುತ್ತದೆ. ಅಂದಮೇಲೆ ಲ್ಯಾಂಡ್ ಅಕ್ವೀಸಿಷನ ಡಿಲೇ. ರಿಹ್ಯಾಬಲಿಟೇಷನ್ನೂ ಡಿಲೇ. ಹಾಗಾದಮೇಲೆ ವಿಶ್ವಬ್ಯಾಂಕ್ ನೆರವು ಸಮಯಕ್ಕೆ ಸರಿಯಾಗಿ ಬರಬೇಕೆಂದರೆ ಹೇಗೆ ಬರುತ್ತದೆ? ನಮ್ಮಲ್ಲಂತೂ ಹಣ ಇಲ್ಲ. ಅಲ್ಲಿ ಬ್ಯಾಂಕ್ ಹಣ ಕೊಡುತ್ತದೆ ಅಂತ ತಿಳಿದುಕೊಂಡು ನಾವು ಹಣ ಒದಗಿಸಿಕೊಡಬೇಕಾ? ಈಗಂತೂ ಜಲನಿಗಮ ಬಂದು ಬಿಟ್ಟಿದೆ. ಈಗ ಪ್ರತಿಯೊಂದಕ್ಕೂ ಜಲನಿಗಮ, ಜಲನಿಗಮ. ಅದಕ್ಕಾಗಿ ಇತ್ತೀಚಿನ ದಿನಗಳಲ್ಲಿ ನಮ್ಮ ಮುಖ್ಯ ಮಂತ್ರಿಗಳು ಬಹಳ ಚಾತುರ್ಯದಿಂದ ಉತ್ತರ ಕೊಡುತ್ತಾರೆ. ಏನು? ನೀರಿನ ನಮ್ಮ ಹಕ್ಕನ್ನು ಕಾಯ್ದುಕೊಳ್ಳುತ್ತೇವೆ. ಹಕ್ಕು ಯಾವರೀತಿಯಾದರೂ ಕಾಯಬಹುದು. ನೀರು ಶೇಖರಣೆ ಮಾಡಿಯೂ ಕಾಯ್ದುಕೊಳ್ಳಬಹುದು. ಉಪಯೋಗ ಮಾಡಿಯೂ ಕಾಯ್ದುಕೊಳ್ಳಬಹುದು, ಉಪಯೋಗ ಮಾಡದೇನೂ ಕಾಯ್ದುಕೊಳ್ಳಬಹುದು. ಬಹುಶಃ ನಾವು ರಂಗಯ್ಯನಾಯ್ಡು ಅವರ ಮರ್ಸಿಯಲ್ಲಿದ್ದೇವೆ. ಮೊದಲು ಕೆ.ಎಲ್.ರಾವ್ ಇದ್ದರು. ಈಗ ಕೇಂದ್ರದಲ್ಲಿ ರಂಗಯ್ಯನಾಯ್ಡು ಅವರು ಜಲ ಸಂಪನ್ಮೂಲ ಸಚಿವರಾಗಿದ್ದಾರೆ. ಬಹಳ ಆಯಕಟ್ಟಿನ ಸ್ಥಳದಿಂದ ಬರುತ್ತಾರೆ ಅವರು. ರಂಗಯ್ಯನಾಯ್ಡು ಈಗಾಗಲೇ ನವೆಂಬರ್ ತಿಂಗಳಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ. ಅಧಿಕಾರಿಗಳು ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿರಬಹುದು. 1995ರ ನವೆಂಬರ್‌ನಲ್ಲಿ ಒಂದು ಪತ್ರ ಬರೆದಿದ್ದಾರೆ. ಅದೇನು? ಈಗಾಗಲೇ ಎರಡು ವರ್ಷ ಆಗಿದೆ, ಇನ್ನು 4 ವರ್ಷ ಉಳಿದಿವೆ. ಸರ್‌ಪ್ಲಸ್ ನೀರಿನ

ಬಟಾವಣೆಗೆ ಬಚಾವತ್ ಫಾರ್ಮುಲಾ ಪ್ರಕಾರ ಒಂದು ಯೋಜನೆ ಹಾಕಿಕೊಳ್ಳಬೇಕಾಗುತ್ತದೆ. ಅದರಲ್ಲಿ ಕೃಷ್ಣಾ ವ್ಯಾಲಿ ಅಥಾರಿಟಿ ಅಂತ ನಿರ್ಮಾಣ ಮಾಡಬೇಕಾಗುತ್ತದೆ. ಆ ಅಥಾರಿಟಿ ಮುಖಾಂತರ ನಾವು ನೀರು ಪುನರ್ ವಿಂಗಡಣೆ ಅಥವಾ ಬಟಾವಣೆ ನಾವು ಮಾಡಬೇಕಾಗುತ್ತದೆ. ಅದಕ್ಕಾಗಿ ನೀವು ನಿಮ್ಮ ಒಪ್ಪಿಗೆಯನ್ನು ಸೂಚಿಸಬೇಕು ಎಂದು ಅವರು ಪತ್ರ ಬರೆದಿದ್ದಾರೆ. ಅವರು ಮೊನ್ನೆ ಒಂದು ಸ್ಟೇಟ್‌ಮೆಂಟನ್ನೂ ಕೊಟ್ಟಿದ್ದಾರೆ. ನಾನು ಪತ್ರ ಬರೆದು ಎರಡು ಮೂರು ತಿಂಗಳಾಯಿತು, ಯಾರೂ ಉತ್ತರವನ್ನೇ ಕೊಡಲಿಲ್ಲ ಎಂದು ಅವರು ಬರೆದಿದ್ದಾರೆ. ಏಕೆಂದರೆ ಯಾವುದೇಒಂದು ಅಥಾರಿಟಿ ಜಾರಿ ಆಗಬೇಕಾದರೆ ಅದಕ್ಕೆ ಸಂಬಂಧಪಟ್ಟ ರಾಜ್ಯಗಳು ಒಪ್ಪಬೇಕಾಗುತ್ತದೆ. ಒಂದು ವೇಳೆ ಕೇಂದ್ರ ಸರ್ಕಾರ ಮನವೊಲಿಸಿದರೂ ಸಂಬಂಧಪಟ್ಟ ರಾಜ್ಯಗಳು ಒಪ್ಪಲಿಲ್ಲ ಅಂತ ಅಂದರೆ, ಪಾರ್ಲಿಮೆಂಟಿನಲ್ಲಿ ಆಕ್ಟ್ ಡಟ ಕಾನ್‌ಸ್ಟಿಟ್ಯೂಟ್ ಮಾಡಬೇಕಾಗುತ್ತದೆ, ಅದನ್ನು ಅವರು ಕಾನ್‌ಸ್ಟಿಟ್ಯೂಟ್ ಮಾಡುತ್ತಾರೆ. ಆಗ ಏನಾಗುತ್ತದೆ ಅಧ್ಯಕ್ಷರೆ? ಯಾವ ರೀತಿ ಕೆ.ಎಲ್.ರಾವ್ ಅವರು ಅಲ್ಲಿದ್ದಾಗ, ಕರ್ನಾಟಕದಲ್ಲಿ ನಾವು ನಿದ್ದೆ ಮಾಡುತ್ತಿದ್ದೆವು, ಅವರು ಜಾಗರೂಕರಾಗಿ ನಾಗಾರ್ಜುನ ಸಾಗರ ಪ್ರಾಜೆಕ್ಟ್ ಮುಗಿಸಿ ಕ್ರಸ್ಟ್ ಗೇಟ್ ಹೆಚ್ಚು ಮಾಡಿ ವಿಫುಲವಾದ ನೀರನ್ನು ಸಂಗ್ರಹ ಮಾಡಿ ಅಕಂಪ್ಲಿ ಮಾಡಿದರು. ಬಚಾವತ್ ಅವಾರ್ಡ್ ಮುಂದೆ ಮತ್ತೊಮ್ಮೆ ಅದೇ ರಿಪೀಟ್ ಆಗುತ್ತದೆ. ಚರಿತ್ರೆ ಪುನರಾವರ್ತನೆಯಾಗುತ್ತದೆ. 2000ನೇ ಇಸವಿ ನಂತರ ಮತ್ತೊಂದು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಆಗುತ್ತದೆ. ಮುಂದೆ ಇನ್ನೊಂದು ಫೇಟ್ ಅಕಂಪ್ಲಿ ಆಗುತ್ತದೆ. ಈ ಸಲ ಫೇಟ್ ಅಕಂಪ್ಲಿ ಏನು? ತೆಲುಗು ಗಂಗಾ ಪ್ರಾಜೆಕ್ಟ್? ಈಗ ಮುಗಿಸಿಬಿಟ್ಟಿದ್ದಾರೆ ಅವರು. ಅವರು ಏನೇನು ಕೆಲಸ ಮಾಡಬೇಕೋ ಅದನ್ನೆಲ್ಲಾ ಎರಡು ವರ್ಷದೊಳಗೆ ಮುಗಿಸಿಬಿಟ್ಟಿದ್ದಾರೆ. ಎಲ್ಲೋ ಅಲ್ಪಸ್ವಲ್ಪ ಕೆಲಸ ಇರಬಹುದು. ಚಿಕ್ಕ ಪುಟ್ಟ ಕೆಲಸಗಳು ಇರಬಹುದು. ಆದರೆ ನಾಗಾರ್ಜುನ ಸಾಗರದ್ದು ಮುಖ್ಯವಾದ ಕೆಲಸಗಳು 95 ಪರ್ಸೆಂಟ್ ಎಲ್ಲಾ ಮುಗಿದು ಹೋಗಿವೆ, ಏನೇನೂ ಉಳಿದುಕೊಂಡಿಲ್ಲ. ಆದರೆ ಈಗ ತೆಲುಗು ಗಂಗಾ ಪ್ರಾಜೆಕ್ಟ್ ತೆಗೆದುಕೊಂಡಿದ್ದಾರೆ. ತೆಲುಗು ಗಂಗಾಗೆ ವಿಫುಲವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಮೊದಲು ತೆಲುಗು ಗಂಗಾ ಸ್ಕಿಮ್ ಇದ್ದದ್ದು ಕೇವಲ ಮದ್ರಾಸ್ ಸಿಟಿಗೆ ಕುಡಿಯುವ ನೀರು ಕೊಡುವುದಕ್ಕೆ. ಮದ್ರಾಸ್ ಸಿಟಿಗೆ ನೀರು ಎಷ್ಟು ಕೊಡಬೇಕಾಗಬಹುದು. ನಮ್ಮ ಬೆಂಗಳೂರಿನಂಥ ಪಟ್ಟಣಕ್ಕೆ ನಿಮಗೆ ಒಂದು ಅಂದಾಜು ಕೊಡಬೇಕಾದರೆ ಐದು ಟಿ.ಎಂ.ಸಿ. ನೀರು ಬೇಕು. ಮದ್ರಾಸಿನಂಥ ಹೊಡ್ಡ ಪಟ್ಟಣಕ್ಕೆ ಕೇವಲ 5 ಟಿ.ಎಂ.ಸಿ. ಬೇಕಾಗಬಹುದು. ಅಥವಾ ಆರು ಟಿ.ಎಂ.ಸಿ. ಹೌದೇ? 6 ಟಿ.ಎಂ.ಸಿ. ಕೃಷ್ಣಾ ನೀರನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಬೇಕಾದರೆ ಆಕ್ವಿಡಕ್ಟ್ ಎಷ್ಟು ಬೇಕಾಗುತ್ತದೆ ಅಧ್ಯಕ್ಷರೆ? ಅಕ್ವಿಡಕ್ಟ್ ಡಯಾಮೀಟರ್ ಎಷ್ಟು ಬೇಕಾಗುತ್ತದೆ? ಕಮಿಟಿ ಅದನ್ನು ರೆವ್ಯೂ ಮಾಡಿತ್ತು. ಅದನ್ನು ಬಿಟ್ಟಿದ್ದಾರೆ ಅವರು. ಮೂರು ಮೀಟರೋ ಆರು ಮೀಟರೋ ಹತ್ತು ಮೀಟರೋ ಇತ್ತು ಅಂತ ಇಟ್ಕೊಳ್ಳಿ. ಅವರು 25 ಮೀಟರ್ ಅಕ್ವಿಡಕ್ಟ್ ತಯಾರು ಮಾಡುತ್ತಿದ್ದಾರೆ. ಏಕೆ? ಏಕೆಂದರೆ ಮದ್ರಾಸಿಗೆ ಹೋಗಬೇಕಲ್ಲ ಅದು. ಮದ್ರಾಸಿಗೆ ಹೋಗುವ ದಾರಿಯಲ್ಲಿ ಅವರ ಆಯಕಟ್ಟು ಪ್ರದೇಶಕ್ಕೆ ನೀರು ಕೊಡಬೇಕೆಂಬ ಉದ್ದೇಶದಿಂದ ದೊಡ್ಡದೊಂದು ಕೆನಾಲ್ ತೆಗೆದಿದ್ದಾರೆ. ಮತ್ತು ಹೆಚ್ಚಿನ ನೀರನ್ನು ಈಗಾಗಲೇ ಅವರು ಬಳಸತಕ್ಕ ಯೋಜನೆ ಹಾಕಿ ಕಾರ್ಯಕ್ರಮವನ್ನು ಕಂಪ್ಲೀಟ್ ಮಾಡುತ್ತಿದ್ದಾರೆ.

ಮತ್ತೆ ಅವರಿಗೆ ಸಪೋರ್ಟ್ ಕೊಡುವುದಕ್ಕೆ ಮೇಲೆ ಸೆಂಟ್ರಲ್ ಗೌರ್ನಮೆಂಟ್ ಇದೆ. ನೀರಾವರಿ ಸಚಿವರಿದ್ದಾರೆ. ಅದಕ್ಕೆ ನಾವೂ ಕೂಡ ಬಹಳ ತ್ವರಿತಗತಿಯಲ್ಲಿ ವೇಗದಿಂದ ಇದರ ಬಗ್ಗೆ ಆಲೋಚನೆ ಮಾಡಿ ನಮ್ಮ ನೀರಾವರಿ ಕಾರ್ಯಕ್ರಮಗಳನ್ನು ವರ್ಷಕ್ಕೆ ಏನು ನಿಗದಿ ಮಾಡಿಕೊಂಡಿದ್ದೇವೋ ಅದನ್ನು ಸಂಪೂರ್ಣವಾಗಿ ಖಂಡಿತವಾಗಿ ಪೂರ್ತಿ ಮಾಡಲೇಬೇಕು. ಈಗ ನಾನು ಹೆಚ್ಚು ಮತನಾಡಲಿಕ್ಕೆ ಹೋಗುವುದಿಲ್ಲ. ನಾನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಲು ಇಚ್ಛೆ ಮಾಡುತ್ತೇನೆ. ನನ್ನ ಸಲಹೆ ಏನೆಂದರೆ, ಅನೇಕ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ಬರುತ್ತವೆ. ಮುಳವಾಡ, ಹಿಪ್ಪರಗಿ ಹೀಗೆ ಅನೇಕ ಯೋಜನೆಗಳು ಬರುತ್ತವೆ. ದೊಡ್ಡ ದೊಡ್ಡ ಯೋಜನೆಗಳಿಗೆ ನಾನು ಹೋಗುವುದಿಲ್ಲ. ಕನಿಷ್ಟಪಕ್ಷ ನಾನೇನು ಸೂಚನೆ ಮಾಡುತ್ತೇನೆಂದರೆ, ನಮ್ಮಲ್ಲಿ ಏನು ಹಣ ಸಂಗ್ರಹಣೆ ಇದೆ, ಅದರ ಪ್ರಕಾರ ಬ್ಯಾರೇಜಸ್ ನಿರ್ಮಾಣ ಮಾಡಬೇಕು. ಯಾವರೀತಿ ಮಹಾರಾಷ್ಟ್ರದಲ್ಲಿ ಭೀಮಾ ನದಿಗೆ ಬ್ಯಾರೇಜಸ್ ನಿರ್ಮಾಣ ಮಾಡಿದ್ದಾರೆ, ಈ ಬ್ಯಾರೇಜಸ್ ನಿರ್ಮಾಣ ಮಾಡುವುದರಿಂದ ಅಲ್ಲಿ ಲ್ಯಾಂಡ್ ಅಕ್ವಿಜಿಶನ್ ಪ್ರಾಬ್ಲಮ್ ಬರುವುದಿಲ್ಲ. ನೀರು ಸಂಗ್ರಹ ಮಾಡಬಹುದು. ಆ ಬ್ಯಾರೇಜ್ ಆಯಾಕಟ್ಟಿನಲ್ಲಿ ಬರತಕ್ಕ ರೈತರು, ಈಗಾಗಲೇ ಕೃಷ್ಣಾದಲ್ಲಿ ಮಾಡುತ್ತಿದ್ದಾರೆ, ಜಮಖಂಡಿನಲ್ಲಿ ನಾವು ನೋಡುತ್ತಿದ್ದೇವೆ. ರೈತರೇ ತಾವು ಕಾಂಟ್ರಿಬ್ಯುಷನ್ ಮಾಡಿ ಜಮಖಂಡಿಯಲ್ಲಿ ಚಿಕ್ಕಪಡಸಲಗಿಯಲ್ಲಿ ಒಂದು ಬ್ಯಾರೇಜ್ ನಿರ್ಮಾಣ ಮಾಡಿ ದ್ದಾರೆ. ನದಿಯ ಎರಡೂ ಕಡೆ ಸಮೃದ್ಧವಾಗಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆ ರೀತಿ ಪ್ರತಿ 10 ಕಿಲೋಮೀಟರ್ ಅಂತರದಲ್ಲಿ ಸೀದಾ ಬ್ಯಾರೇಜನ್ನು ಸರ್ಕಾರ ಕಟ್ಟತಕ್ಕ ಯೋಜನೆಯನ್ನು ಮಾಡಬೇಕು. ಎರಡನೆಯದಾಗಿ, ರಾಜ್ಯಮಟ್ಟದಲ್ಲಿ ರಿವ್ಯೂ ಕಮಿಟಿ ಅಂತ ಏನಿದೆ, ಪ್ರತಿ ತಿಂಗಳು ಅದನ್ನು ರಿವ್ಯೂ ಮಾಡಬೇಕು. ಯು.ಕೆ.ಪಿ. ಭಾಗದಲ್ಲಿ ಪ್ರತಿ ತಿಂಗಳು ಕೆಲಸ ಏನೇನು ಪ್ರೊಗ್ರೆಸ್ ಇದೆ ಅದನ್ನು ರಿವ್ಯೂ ಮಾಡತಕ್ಕ ಒಂದು ಅಪೆಕ್ಸ್ ಬಾಡಿ ಮಾಡಬೇಕು. ಮಾನ್ಯ ಮೊಯಿಲಿಯವರು ಮುಖ್ಯ ಮಂತ್ರಿಯಾಗಿದ್ದಾಗ ಒಂದು ಅಪೆಕ್ಸ್ ಬಾಡಿಯೆಂದು ಕಾನ್ಸ್‌ಟಿಟ್ಯೂಟ್ ಮಾಡಿದ್ದರು ಅದೇನು ಕೆಲಸ ಮಾಡಲಿಲ್ಲ. ಆಮೇಲೆ ಬೇರೆ ಸರ್ಕಾರ ಬಂತು. ಈಗ ಅದನ್ನು ರಿವೈವ್ ಮಾಡಿ ಒಂದು ಅಪೆಕ್ಸ್ ಬಾಡಿಯೆಂದು ಮಾಡಿ, ತಿಂಗಳಿಗೊಮ್ಮೆ ಪ್ರೊಗ್ರೆಸ್ ರಿಪೋರ್ಟ್ ತರಿಸಿಕೊಂಡು ಅದನ್ನು ರಿವ್ಯೂ ಮಾಡಬೇಕು. ಮೂರನೆಯದಾಗಿ ನಿವೃತ್ತಿ ಹಂತದಲ್ಲಿರತಕ್ಕ ಅಧಿಕಾರಿಗಳನ್ನು ಯು.ಕೆ.ಪಿ.ಗೆ ಪೋಸ್ಟ್ ಮಾಡುತ್ತಿದ್ದಾರೆ. ಟಾಪ್ ಆಫೀಸರ್ಸ್ ಚೀಫ್ ಇಂಜಿನಿಯರ್ಸ್, ಅದನ್ನು ಬಿಟ್ಟು ಕನಿಷ್ಟ ಪಕ್ಷ ಒಂದು ಐದು ವರ್ಷ ಸೇವಾವಧಿಯುಳ್ಳಂತಹ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟ್ ಮಾಡಬೇಕು. ಈಗ ಏನಾಗಿದೆ ಅಂದರೆ ರಿಟೈರ್ಡ್‌ಗೆ ಹತ್ತಿರ ಬಂದರವರನ್ನು ಅಲ್ಲಿಗೆ ಹಾಕಿರುತ್ತಾರೆ ಅವರ ಫ್ಯಾಮಿಲಿಯೆಲ್ಲ ಬೆಂಗಳೂರು ಅಥವಾ ಹುಬ್ಬಳ್ಳಿ ಧಾರವಾಡದಲ್ಲಿರುತ್ತದೆ. ಅವರು ವಾರದಲ್ಲಿ ಮೂರು ದಿವಸ ಹೆಡ್‌ಕ್ವಾರ್ಟರ್‌ನಲ್ಲಿರುತ್ತಾರೆ ನಾಲ್ಕೈದು ದಿವಸ ಬೆಂಗಳೂರಿನಲ್ಲಿರುತ್ತಾರೆ ಹುಬ್ಬಳ್ಳಿ ಧಾರವಾಡ ಅಥವಾ ಬೇರೆ ಎಲ್ಲಿಯಾದರೂ ಇರುತ್ತಾರೆ. ಅವರಿಗೆ ಕೆಲಸದ ಕಡೆಗೆ ಕಾನ್ಸಂಟ್ರೇಷನ್ ಇಲ್ಲ. ಈಗಾಗಲೇ ಸ್ಟಾಫ್ ಕೊರತೆ ಆ ಭಾಗದಲ್ಲಿ ಎಷ್ಟಿದೆಯೆಂದರೆ, ನಾನೇನು ಮಾಡುವುದು ಸರಿಯಾದ ಪ್ರಮಾಣದಲ್ಲಿ ಸ್ಟಾಫ್ ಇಲ್ಲ ನಮಗೆ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಿಮಗೆ ಸ್ಟಾಫ್‌ನ ಕೊರತೆ ಎಷ್ಟಿದೆಯೆಂದಾಗ ಅವರು ನನಗೆ ವಿವರ ಕೊಟ್ಟಿದ್ದಾರೆ. ಯು.ಕೆ.ಪಿ. ಯೋಜನೆ

ಅಷ್ಟೆ ನಾನು ಹೇಳುತ್ತಿದ್ದೇನೆ. ಕೃಷ್ಣಾ ಬೇಸಿನ್ ನಾನು ಹೇಳುತ್ತಿಲ್ಲ. ಯು.ಕೆ.ಪಿ. ಯೋಜನೆಯಲ್ಲಿ 4095 ಹುದ್ದೆಗಳಿವೆ. ತಾಂತ್ರಿಕ ಮತ್ತು ತಾಂತ್ರಿಕೇತರ ಎಲ್ಲಾ ಕೂಡಿ. ಅದರಲ್ಲಿ 3021 ಹುದ್ದೆಗಳನ್ನು ತುಂಬಿದ್ದಾರೆ. ಅದರಲ್ಲಿ 1074 ಹುದ್ದೆಗಳನ್ನು ಇನ್ನು ತುಂಬಬೇಕಾಗಿದೆ. ನಾಲ್ಕನೆಯ ಒಂದು ಭಾಗ ವೇಕೆನ್ಸಿ, ಫುಲ್ ಸ್ಟಾಫ್ ಇದ್ದರೆ ಕೆಲಸ ಮಂದಗತಿಯಲ್ಲಿ ನಡೆದಿದೆ. ಇಂತಹ ಒಂದು ಪ್ರಸಂಗ ಇದ್ದಾಗ ಇನ್ನು ನಾಲ್ಕನೆಯ ಒಂದು ಭಾಗ ವೇಕೆನ್ಸಿ ಇದ್ದಾಗ ಸಮರ್ಪಕ ರೀತಿಯಲ್ಲಿ ಯಾವ ಕೆಲಸ ನಡೆಯುತ್ತದೆಂದು ತಾವೇ ಅಂದಾಜು ಮಾಡಬೇಕು. ಅದರಲ್ಲಿ ಬ್ರೇಕ್‌ಅಪ್ ಫಿಗರ್ಸ್ ನಾನು ಕೊಡುತ್ತಿದ್ದೇನೆ. ಸೂಪರ್‌ಇಂಟೆಂಡಿಂಗ್ ಇಂಜಿನಿಯರ್ ಒಂದು ಹುದ್ದೆ ಕೊರತೆಯಿದೆ, ಅದು ಇನ್ನು ಭರ್ತಿಯಾಗಿಲ್ಲ. 6 ಎಕ್ಸಿಕ್ಯುಟಿವ್ ಎಂಜಿನಿಯರ್ಸ್ ಇಲ್ಲ. ಮತ್ತು 34 ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇಲ್ಲ. ಈ ಹುದ್ದೆಗಳು ಸೂಪರ್‌ವಿಷನ್ ಮಾಡುವುದಕ್ಕೆ ಬಹಳ ಮುಖ್ಯ. ಕಾರ್ಯ ವಿವಿಧ ದಿಕ್ಕಿನಲ್ಲಿ ನಡೆಯಬೇಕಾದರೆ ಅಸಿಸ್ಟೆಂಟ್ ಇಂಜಿನಿಯರ್ಸ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಬಹಳ ಮುಖ್ಯ. ಅಲ್ಲಿ 95 ಅಸಿಸ್ಟೆಂಟ್ ಇಂಜಿನಿಯರ್‌ಗಳ ಕೊರತೆಯಿದೆ. 19 ಜೂನಿಯರ್ ಇಂಜಿನಿಯರ್‌ಗಳ ತೊಂದರೆಯಿದೆ. 39 ಡ್ರಾಫ್ಟ್ಸಮನ್‌ಗಳ ಕೊರತೆ ಇದೆ. ಡ್ರಾಫ್ಟ್ಸಮೆನ್ ಕೊರತೆ ಇದ್ದಾಗ ಬ್ಲೂಪ್ರಿಂಟ್ ಮಾಡುವವರು ಯಾರು? ಪ್ಲಾನ್ ತಯಾರು ಮಾಡುವವರು ಯಾರು? ಮ್ಯಾಪ್ ತಯಾರು ಮಾಡುವವರು ಯಾರು? ಕೆಲಸ ಯಾವ ರೀತಿ ಸಾಗಬೇಕು? ಪ್ರಾಜೆಕ್ಟ್ ಕಂಪ್ಲೀಟ್ ಆಗಬೇಕಾದರೆ ಇನ್ನು ನಾಲ್ಕೈದು ವರ್ಷಗಳು ಮಾತ್ರ ಇದೆ. ಯಾವ ಪ್ರಮಾಣದಲ್ಲಿ ಕೆಲಸ ನಡೆಯುತ್ತಿದೆ ಆದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಲಕ್ಷ್ಯ ಕೊಡಬೇಕು. ಕೊನೆಯದಾಗಿ ನಾನು ಮುಖ್ಯವಾದ ಸಲಹೆ ಕೊಡುತ್ತಿದ್ದೇನೆ. ಈಗ ಮುಖ್ಯ ಮಂತ್ರಿಗಳೇ ನೀರಾವರಿ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಮಯ ಕೊಡಲಿಕ್ಕೆ ಆಗುತ್ತಿಲ್ಲ. ಈ ನೀರಾವರಿ ಇಲಾಖೆಗೆ ಒಬ್ಬ ಸ್ವತಂತ್ರ ಮಂತ್ರಿ ಮಾಡಿ ಇದರ ಜವಾಬ್ದಾರಿಯನ್ನು ವಹಿಸಬೇಕು. ಅವರನ್ನು ಅಲ್ಲೇ ಹೆಡ್‌ಕ್ವಾರ್ಟರ್‌ನಲ್ಲಿ ವಾಸ್ತವ್ಯ ಮಾಡಬೇಕೆಂದು ಹೇಳಬೇಕು. ನಾಗಾರ್ಜುನ ಸಾಗರದಲ್ಲಿ ಒಬ್ಬ ಮಂತ್ರಿ ಅಲ್ಲೇ ಇದ್ದರು. ಆಂಧ್ರ ಪ್ರದೇಶದವರು ನಾಗಾರ್ಜುನ ಸಾಗರದಲ್ಲಿ ಹಾಗೆ ಮಾಡಿದ್ದರು. ಅವರು ಅಲ್ಲೇ ವಾಸ್ತವ್ಯ ಮಾಡತಕ್ಕದ್ದು. ಕಾವೇರಿ ಬೇಸಿನ್‌ಗೊಬ್ಬರು ಕೃಷ್ಣಾ ಬೇಸಿನ್‌ಗೊಬ್ಬರು ಹೀಗೆ ಇಬ್ಬರು ಮಂತ್ರಿಗಳನ್ನು ಬೇಕಾದರೆ ಮಾಡಿ. ಮಾನ್ಯ ಮೊಯಿಲಿಯವರು ಈ ದಿಸೆಯಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದರು. ನಮ್ಮ ಬಿ.ಎಸ್.ಪಾಟೀಲ್ ಅವರನ್ನು ಕೃಷ್ಣಾ ಬೇಸಿನ್‌ಗೆ ಮಂತ್ರಿಗಳನ್ನಾಗಿ ಮಾಡಿದ್ದರು. ಅವರಿಗೆ ಆ ಇನ್‌ಚಾರ್ಜ್ ಕೊಟ್ಟಿದ್ದರು. ಮಾನ್ಯ ಆತ್ಮಾನಂದರವರಿಗೆ ಕಾವೇರಿ ಬೇಸಿನ್‌ಗೆ ಮಂತ್ರಿ ಮಾಡಿದ್ದರು ಎಂದು ಕಾಣುತ್ತದೆ. ಸ್ವತಂತ್ರ ಉಸ್ತುವಾರಿ ಇಲ್ಲದಿದ್ದರೂ ಕೂಡ ಆ ದಿಸೆಯಲ್ಲಿ ಸ್ವಲ್ಪ ಒಂದು ಸಣ್ಣ ಹೆಜ್ಜೆಯನ್ನಿಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಉದಾರ ಮನಸ್ಸು ಮಾಡಿ ಒಬ್ಬರಿಗೆ ಸ್ವತಂತ್ರವಾಗಿ ಖಾತೆಯನ್ನು ನಿರ್ವಹಿಸಲು ಜವಾಬ್ದಾರಿಯನ್ನು ಕೊಟ್ಟು ಅವರಿಗೆ ಉಸ್ತುವಾರಿಯನ್ನು ಕೊಟ್ಟು ಆ ಭಾಗದಲ್ಲೇ ಹೆಚ್ಚು ಸಮಯ ಕೆಲಸ ಮಾಡತಕ್ಕ ಒಬ್ಬರು ಸಚಿವರನ್ನು ನೇಮಿಸಿ, ಈ ಕೆಲಸವನ್ನು ನಾಲ್ಕು ವರ್ಷಗಳಲ್ಲಿ ಪೂರ್ತಿ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಹೇಳಿ, ತಮ್ಮಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ

ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಸವಿಸ್ತಾರವಾಗಿ ನಡೆಯಬೇಕೆಂದರೆ ನಾಳೆಯೂ ಕೂಡೋಣ.

ಪ್ರಕಟಣೆ

ಉಪಾಧ್ಯಕ್ಷರು:- ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ದಿನಾಂಕ 11-3-96ರಂದು ಕರ್ನಾಟಕ ವಿಧಾನ ಪರಿಷತ್ತು ಮೈಸೂರು ವೈಯಕ್ತಿಕ ಮತ್ತು ಸಂಕೀರ್ಣ ಇನಾಂ ರದ್ದಿಯಾತಿ ತಿದ್ದುಪಡಿ ವಿಧೇಯಕ 1996ನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಗಿದೆಯೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ, ಇನ್ನೊಂದು ಇಬ್ಬರು ಶಾಸಕರು ಮಾತನಾಡಲಿಕ್ಕೆ ಅವಕಾಶ ಕೊಡಬಹುದು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿರುವುದರಿಂದ ಕೇವಲ ಐದ್ಕೆದು ನಿಮಿಷ ಮಾತನಾಡಿದರೆ ಒಂದಿಬ್ಬರು ಸದಸ್ಯರು ಮಾತನಾಡಲಿಕ್ಕೆ ಅನುಕೂಲವಾಗುತ್ತದೆ. ಈಗ ಜಗದೀಶ ಪಾಟೀಲ್‌ರವರು ಮಾತನಾಡಲಿ. ಆದಷ್ಟು ಬೇಗ ಮುಗಿಸಬೇಕು. ಸಲಹೆಗಳನ್ನು ಕೊಡಿರಿ ಭಾಷಣ ಮಾಡುವುದು ಬೇಡ.

ಶ್ರೀ ಜಗದೀಶ್ ಪಾಟೀಲ್(ಬೀಳಗಿ):- ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಹಿರಿಯರಾದ ಮಲಕರೆಡ್ಡಿಯವರು ಸವಿಸ್ತಾರವಾಗಿ ಮಾತನಾಡಿದ್ದಾರೆ. ನಾನು ಯಾವುದೇ ವಿಚಾರವನ್ನು ವಿಶ್ಲೇಷಣೆ ಮಾಡದೆ ನೇರವಾಗಿ ನಮ್ಮಲ್ಲಿರತಕ್ಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಮುಖ್ಯ ಮಂತ್ರಿಗಳು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯ ಪೂರ್ತಿ ಆಗುವವರೆಗೆ 505 ಮೀಟರ್‌ಗಿಂತ ಹೆಚ್ಚಿಗೆ ಆಲಮಟ್ಟಿ ಜಲಾಶಯವನ್ನು ಎತ್ತರಿಸುವುದಿಲ್ಲವೆಂದು ಏನು ಭರವಸೆಯನ್ನು ಕೊಟ್ಟಿದ್ದಾರೆ ಅದಕ್ಕೆ ಪ್ರಥಮವಾಗಿ ಮುಳುಗಡೆ ಭಾಗದ ಜನರ ಸಲುವಾಗಿ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಎರಡನೆಯದಾಗಿ ಅಲ್ಲಿಗೆ ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಕಳೆದ ಒಂದು ವರ್ಷದಿಂದ ಮುಳುಗಡೆ ಭಾಗದ ಜನರ ಪುನರ್ವಸತಿ ಸಲುವಾಗಿ ಈ ಸದನದಲ್ಲಿ ಮೂರ್‍ನಾಲ್ಕು ಸಾರಿ ಮಾತನಾಡಿದರೂ ಸಹಿತ ಯಾವುದೇ ಒಂದು ಸಮಸ್ಯೆಯೂ ಇದುವರೆಗೆ ಇತ್ಯರ್ಥವಾಗಿಲ್ಲ. ಅದರಲ್ಲೂ ವಿಶೇಷವಾಗಿ ಆಲಮಟ್ಟಿ ಯೋಜನೆಯ ಸಲುವಾಗಿ ಈಗಾಗಲೇ 15 ಕೋಟಿ ರೂಪಾಯಿ ಖರ್ಚು ಮಾಡಿದರೂ ಸಹಿತ, ನಮ್ಮ ಜಿಲ್ಲೆಗೆ ಒಂದು ಎಕರೆ ನೀರಾವರಿಯೂ ಆಗಿಲ್ಲ. ಇವತ್ತು ನಮಗೆ ಮುಳುಗಡೆಯಾಗುವುದೂ ತಪ್ಪಿಲ್ಲ. ಈ ದಿಸೆಯೊಳಗೆ ವಿಶ್ಲೇಷಣೆ ಮಾಡುವುದಾದರೆ, ಮುಳುಗಡೆಯಾಗುವಂತಹ ಜನರ ಪುನರ್ವಸತಿ ಕಾರ್ಯ ಪ್ರಾರಂಭವಾಗಿಲ್ಲ. ಈಗಾಗಲೇ 8-10 ಹಳ್ಳಿಗಳು ಮುಳುಗಡೆಯಾಗಿವೆ ಆ ಜನರ ಪುನರ್ವಸತಿ ಕಾರ್ಯ ಆಗಿಲ್ಲ. ಮುಂದಿನ ಉಪ ಜೀವನಕ್ಕೆ ಏನು ಮಾಡಬೇಕೆಂಬ ಬಗ್ಗೆ ಅವರದ್ದು ಗಂಭೀರವಾದ

ಸಮಸ್ಯೆಯಾಗಿ ಪರಿವರ್ತನೆಯಾಗಿದೆ. ಏಕೆಂದರೆ ಆರ್.ಆರ್.ಪ್ಯಾಕೇಜಸ್‌ನೊಳಗೆ ಅವರು ಉದ್ಯೋಗ ಏನಾದರೂ ಮಾಡುತ್ತಿದ್ದರೆ, ಅವರಿಗೆ ಸರ್ಕಾರಿ ಉದ್ಯೋಗ ಕೊಡಿಸಿದರೆ ಸಾಕಷ್ಟು ಅನುಕೂಲವಾಗುತ್ತದೆ. ಸರ್ಕಾರ ಈ ದಿಸೆಯೊಳಗೆ ತೀರ್ಮಾನ ತೆಗೆದುಕೊಳ್ಳಬೇಕು. ಸ್ವಲ್ಪ ಐದಾರು ತಿಂಗಳು ಕಾಲಾವಧಿಯನ್ನು ಕೊಟ್ಟು ಜನರು ಈ ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಮನೆ ಕಟ್ಟಿಕೊಳ್ಳಲಿಕ್ಕೆ ಹೇಳಿದರೆ ಅವರು ಹೇಗೆ ಮನೆ ಕಟ್ಟಿಕೊಳ್ಳಬೇಕು? ಒಂದೇ ಸಮಯದಲ್ಲಿ 10-20 ಹಳ್ಳಿಯವರು ಒಂದೇ ಸಾರಿ ಮನೆ ಕಟ್ಟಲಿಕ್ಕೆ ಶುರು ಮಾಡಿದರೆ ಪ್ರತಿಯೊಂದು ವಸ್ತುವಿನ ಮಾರ್ಕೆಟ್ ಬೆಲೆ ಹೆಚ್ಚಾಗುತ್ತದೆ. ಕಟ್ಟಿಗೆ, ಉಸುಕು, ಸಿಮೆಂಟ್, ಕಬ್ಬಿಣ ಇದಕ್ಕೆಲ್ಲ ಸರ್ಕಾರ ಒಂದು ನಿರ್ಣಯ ಕೈಗೊಂಡು ಸರ್ಕಾರ ತನ್ನದೇ ಆದಂತಹ ಒಂದು ಡಿಪೋನಲ್ಲಿ ಯೋಗ್ಯ ಬೆಲೆಯಲ್ಲಿ ಮನೆ ಕಟ್ಟಲಿಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಬೇಕೆಂದು ನನ್ನ ಬೇಡಿಕೆಯಿದೆ. ಮೂರನೆಯದು ಮನೆಗಳ ಸಲುವಾಗಿ ಸವಕಳಿಯಿಂದ ನೋಡಲಿಕ್ಕೆ ಹತ್ತಿದ್ದಾರೆ. ಸರ್ಕಾರಕ್ಕೆ ನಾವು ಯಾರೂ ಮನೆಗಳನ್ನು ಮಾರಾಟ ಮಾಡಲಿಕ್ಕೆ ಹತ್ತಿಲ್ಲ. ಇವತ್ತು ಮನೆಗಳು ಮುಳುಗಡೆಯಾಗಿ ಹೋಗುತ್ತಿವೆ, ಸವಕಳಿ ಮುರಿಯಬಾರದೆನ್ನುವ ಅಭಿಪ್ರಾಯ ನಮ್ಮದು ಸ್ಪಷ್ಟವಾಗಿದೆ. ಅದನ್ನು ನಾವು ನಿಮಗೆ ತಿಳಿಸಿದ್ದೇನೆ. ಅದರಲ್ಲೂ ಮೊನ್ನೆ ಜಾಗತಿಕ ಬ್ಯಾಂಕಿನವರು ಬಂದಾಗ ಸಹಿತ, ಈ ಸವಕಳಿ ಮುರಿಯಬಾರದು ಏಕೆ ಮುರಿಯುತ್ತಾರೆನ್ನುವ ಪ್ರಶ್ನೆಯನ್ನು ಅವರಿಗೆ ಕೇಳಿದ್ದಾರೆ. ಸರ್ಕಾರ ಈ ದಿಸೆಯಲ್ಲೂ ತೀರ್ಮಾನ ತೆಗೆದುಕೊಳ್ಳಬೇಕು. ಕ್ಯಾಟಗರಿ ಸಲುವಾಗಿ ಕಾರಿಸಿಫಿಕೇಷನ್ ಮಾಡಿದಾಗ ಬಹಳ ಅನ್ಯಾಯವಾಗುತ್ತಿದೆ. ಜನರ ಮನಸ್ಸಿನಲ್ಲಿ ಏನು ಬರುತ್ತಿದೆ ಅಂದರೆ ಮಾನವ ಹಕ್ಕುಗಳಿಗೆ ಚ್ಯುತಿಯಾಗುತ್ತಿದೆ. ಇದನ್ನು ಸರ್ಕಾರ ಮಾಡುತ್ತಿದೆಯೆನ್ನುವ ಭಾವನೆ ಬರಲಿಕ್ಕೆ ಹತ್ತಿದೆ. ಕ್ಯಾಟಗರಿವೈಸ್ ಮಾಡಬಾರದು ಮೊದಲಿನ ಹಾಗೆ ಆರ್ ಅಂಡ್ ಆರ್ ಪ್ಯಾಕೇಜಸ್‌ನೊಳಗೆ ಅಪ್ಲೈ ಮಾಡಬೇಕು. ಹೊಸ ಕ್ಯಾಟಗರಿಯನ್ನು ಅಪ್ಲೈ ಮಾಡಬಾರದು. 24 ಎಕರೆಗಿಂತ ಹೆಚ್ಚು ಜಮೀನು ಕಳೆದುಕೊಂಳ್ಳುವವರಿಗೆ ಯಾವುದೇ ಸರ್ಕಾರದ ಸೌಲಭ್ಯವಿಲ್ಲ. ಇದನ್ನು ರದ್ದು ಮಾಡಬೇಕು. ಪ್ರತಿಯೊಂದು ಕುಟುಂಬಕ್ಕೆ ಒಂದೊಂದು ಅವರವರ ಶಿಕ್ಷಣ ಮಟ್ಟಕ್ಕೆ ಅನುಸಾರವಾಗಿ ನೌಕರಿ ಕೊಡಬೇಕೆಂದು ಕೇಳಿದ್ದೆವು. ಈ ಬಗ್ಗೆ ನಾವು ಒಂದು ವರ್ಷದಿಂದ ಸರ್ಕಾರವನ್ನು ಕೇಳುತ್ತಿದ್ದೇವೆ. ಇದರ ಬಗ್ಗೆ ನಮ್ಮನ್ನು ಚರ್ಚೆಗೂ ಕರೆಯಲಿಲ್ಲ, ಮತ್ತು ಒಂದು ತೀರ್ಮಾನವನ್ನು ತೆಗೆದುಕೊಂಡಿಲ್ಲ. ಹೋದ ಸಲ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸದನ ಸಮಿತಿಯನ್ನು ನೇಮಿಸುತ್ತೇವೆ, ಚರ್ಚೆ ಮಾಡುತ್ತೇವೆ, ಮತ್ತು ಒಂದು ತೀರ್ಮಾನಕ್ಕೆ ಬರುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದರು. ಆದರೆ ಸದನ ಸಮಿತಿಯನ್ನೂ ಮಾಡಲಿಲ್ಲ. ಮತ್ತು ಯಾವುದೇ ಇತ್ಯರ್ಥವನ್ನು ಕೂಡ ಮಾಡಲಿಲ್ಲ. ನಾನು ಸ್ಪಷ್ಟವಾಗಿ ಸರ್ಕಾರವನ್ನು ಕೇಳುತ್ತೇನೆ. ಹೋದ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಆಗಸ್ಟ್ ತಿಂಗಳಲ್ಲಿ ಕನ್ಸೆಂಟ್ ಆವಾರ್ಡ್ ಕಮಿಟಿಯನ್ನು ಮಾಡುತ್ತೇವೆ, ನಿಮ್ಮ ಭೂಮಿ ಮತ್ತು ಮನೆ ಸಲುವಾಗಿ ಈ ಕಮಿಟಿಯನ್ನು ಮಾಡುತ್ತೇವೆ ಅದಕ್ಕೆ ಸರಕನ್ನು ಸದಸ್ಯರನ್ನಾಗಿ ಹಾಕಿಕೊಳ್ಳುತ್ತೇವೆ ಎಂದು ಹೇಳಿದ್ದರು. ಅದನ್ನು ಸಹಿತ ಇವತ್ತು ಮಾಡಿಲ್ಲ. ಶಾಸಕರನ್ನು ಬಿಟ್ಟೇ ಒಂದು ಸಮಿತಿಯನ್ನು ಮಾಡಿದ್ದಾರೆ. ಇದನ್ನೂ ಕೂಡ ಸರ್ಕಾರ ಕನ್ಸಿಡರ್ ಮಾಡಬೇಕು. ಜನರ ಸಮಸ್ಯೆಗಳಿಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ, ಅದರ ಪ್ರಕಾರ ಜನರು ತೀರ್ಮಾನ ತೆಗೆದುಕೊಳ್ಳುತ್ತಾರೆ.

ಪ್ರಮುಖವಾಗಿ ಈಗ ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ತಮ್ಮ ಉತ್ತರದಲ್ಲಿ 1997 ಡಿಸೆಂಬರ್ ಒಳಗೆ ಗೇಟ್ ಕೊಡಿಸಿ ನೀರು ಉಪಯೋಗಿಸಿಕೊಳ್ಳುವ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು. ಹಾಗೇನಾದರೂ ಮಾಡಿದ್ದಾದರೆ, ಅಂಗವಾಡಿ ಸೇತುವೆ ಮತ್ತು ಚಿಕ್ಕಪಡಸಲಗಿ ಎರಡೂ ಸಂಪೂರ್ಣವಾಗಿ ಮುಳುಗುತ್ತವೆ. ಅಂಗವಾಡಿ ಸೇತುವೆ 22 ಕೋಟಿ ರೂಪಾಯಿ ಯೋಜನೆಯಾಗಿದೆ. ಚಿಕ್ಕಪಡಸಲಗಿ ಸೇತುವೆ 25-26 ಕೋಟಿ ರೂಪಾಯಿ ಆಗುತ್ತದೆ. ಇವೆರಡೂ ಮುಳುಗುವುದರಿಂದ ನಮ್ಮ ಜಿಲ್ಲೆ ಸಂಪೂರ್ಣವಾಗಿ ಒಂದಕ್ಕೊಂದು ಡಿಸ್‌ಕನೆಕ್ಟ್ ಆಗಿ, ಅಂತರ ಜಾಸ್ತಿಯಾಗಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವ ಮಾತನ್ನು ಕೇಳುತ್ತಾ ಇವುಗಳಿಗೆ ಯಾವಾಗಿನಿಂದ ಕೆಲಸ ಪ್ರಾರಂಭ ಮಾಡುತ್ತೀರಿ. ಎಪ್ರಿಲ್ 10ನೇ ತಾರೀಖು ನಾವು ಸರ್ಕಾರಕ್ಕೆ ಒಂದು ಗಡುವನ್ನು ಕೊಟ್ಟಿದ್ದೇವೆ. ಏಪ್ರಿಲ್ 10ಕ್ಕೆ ಅನಗವಾಡಿ ಸೇತುವೆಯನ್ನು ಪ್ರಾರಂಭ ಮಾಡದಿದ್ದರೆ ಪಕ್ಷಾತೀತವಾಗಿ ತಾಲ್ಲೂಕಿನ ಮತ್ತು ಜಿಲ್ಲೆಯ ಎಲ್ಲಾ ಜನರು ಕೂಡಿ ಅಮರಣ ಉಪವಾಸ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಈ ನಮ್ಮ ಎಲ್ಲಾ ಸಮಸ್ಯೆಗಳಿಗೆ ಸರ್ಕಾರ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದ ಭರವಸೆಯನ್ನು ಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಪಾಟೀಲ್(ಬಾಗೇವಾಡಿ):- ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಜೆ.ಟಿ. ಪಾಟೀಲರು ಹೇಳಿದಂಥ ಬೇಡಿಕೆಗಳು ನಮ್ಮ ಒಂದು ಸಾಮೂಹಿಕ ಬೇಡಿಕೆಗಳಾಗಿವೆ. ಆದರೆ ಒಂದು ಮಾತನ್ನು ಹೇಳಬೇಕೆಂದರೆ, 25 ಎಕರೆಗಿಂತ ಹೆಚ್ಚು ಏನು ಅವರು ಭೂಮಿಯನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಯಾವ ಸವಲತ್ತು ಕೊಡುವುದಿಲ್ಲ ಎಂದು ಸರ್ಕಾರದ ನಿರ್ಣಯ ಇದೆ. ಇದು ಬಹಳ ಅನ್ಯಾಯವಾಗುತ್ತದೆ. ರೈತರು ಹಾಳಾಗಿ ಹೋಗಬೇಕಾ? ಆದ್ದರಿಂದ ದಯವಿಟ್ಟು 25 ಎಕರೆಗಿಂತ ಹೆಚ್ಚಿಗೆ ಜಮೀನು ಕಳೆದುಕೊಂಡರೂ ಸಹಿತ ಮನೆ ಕಟ್ಟಿಕೊಳ್ಳಲಿಕ್ಕೆ, ಫ್ಲಾಟ್ ಕೊಡಲು ಸರ್ಕಾರ ಹೆಚ್ಚಿಗೆ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ಪ್ರತಿಯೊಂದು ಕುಟುಂಬಕ್ಕೂ ಒಂದು ಸರ್ಕಾರಿ ನೌಕರಿಯನ್ನು ಕೊಡಬೇಕು ಎಂದು ಹೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಉತ್ತರ ಪ್ರಾರಂಭ ಮಾಡಲಿ.

ಶ್ರೀ ಮಂಜುನಾಥ ಸಿ.ಕುನ್ನೂರು(ಶಿಗ್ಗಾಂವ್):- ನಾನು ಎರಡು ನಿಮಿಷ ಮಾತನಾಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಇವತ್ತು ಎಷ್ಟು ಮಾತನಾಡಿದರೂ ಕೂಡ ಕಡಿಮೆಯೇ ಎನ್ನತಕ್ಕಂಥ ಮಾತನ್ನು ಮೊದಲನೆಯದಾಗಿ ಹೇಳುತ್ತಾ, 1964ರಲ್ಲಿ ಪ್ರಾರಂಭವಾದಂಥಾದ್ದು ಈ ಯೋಜನೆ. ಇಷ್ಟು ವರ್ಷಗಳು ಗತಿಸಿದರೂ ಕೂಡ ಈ ಒಂದು ಯೋಜನೆಯನ್ನು ನಾವು ರಾಜಕೀಯ ಇಚ್ಛಾಶಕ್ತಿಯಿಂದ ಮುಗಿಸದೇ ಹೋದರೆ, ನಾವು ಒಂದು ದೊಡ್ಡ ಪಾಪವನ್ನು ಉತ್ತರ ಕರ್ನಾಟಕದ ಜನತೆಗೆ ಮಾಡಿದಂತಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಪ್ರಪ್ರಥಮವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈಗಾಗಲೇ ಅನೇಕ ಹಿರಿಯರು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾವು ಸುಮಾರು ಇನ್ನೂ 4300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ದಿಸೆಯಲ್ಲಿ ಇವತ್ತು ತಾವು ಅನೇಕ ಬಾರಿ ಈ ಸದನಗಳಲ್ಲಿ ಈ

ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಚರ್ಚೆಯನ್ನು ಮಾಡುವುದರ ಜೊತೆಗೆ, ಇವತ್ತು ನಾವು ಎಲ್ಲಾ ಪಕ್ಷದವರೂ ಕೂಡ ಸೇರಿಕೊಂಡು ಹೆಚ್ಚಿನ ಮಟ್ಟದಲ್ಲಿ ಹಣವನ್ನು ಯಾವ್ಯಾವ ಬಾಬುಗಳಲ್ಲಿ ಕಡಿಮೆ ಮಾಡಿ, ಇದಕ್ಕೆ ಹೆಚ್ಚಿನ ಹಣ ಕೊಟ್ಟು ಒಟ್ಟಾರೆ ಈ ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಒಂದು ದೃಢ ನಿರ್ಧಾರವನ್ನು ಎಲ್ಲಿಯವರೆಗೆ ನಾವು ಮಾಡುವುದಿಲ್ಲವೋ, ಅಲ್ಲಿಯವರೆಗೆ ಈ ಯೋಜನೆಯನ್ನು ಕೂಡಲೇ ಮುಗಿಸಲಿಕ್ಕೆ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇವತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಜೊತೆಗೆ ಸುಮಾರು ಎಂಟು ಯೋಜನೆಗಳು ಇವೆ. ಆ ಯೋಜನೆಗಳನ್ನು ಕೂಡ ಇವತ್ತು ಹೆಚ್ಚು ತ್ವರಿತಗತಿಯಲ್ಲಿ ಮುಗಿಸಲು ಕೆಲಸ ಮಾಡಬೇಕಾಗಿದೆ. ಉದಾಹರಣೆಗೆ ನಮ್ಮ ಭಾಗದಲ್ಲಿ ತುಂಗಾ ಮೇಲ್ದಂಡೆ ಯೋಜನೆಯನ್ನು ಇವತ್ತು ಜಾರಿಗೆ ತರಬೇಕಾಗಿದೆ. ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಸುಮಾರು 20 ವರ್ಷಗಳಿಂದ ಈ ಶಾಸನ ಸಭೆಯಲ್ಲಿ ಎಲ್ಲರೂ ಮಾತನಾಡಿದ್ದೇವೆ. ಆದರೆ ಇದರ ಬಗ್ಗೆ ಸರ್ಕಾರದವರು ಒಂದು ಗಟ್ಟಿಯಾದಂಥ ನಿಲುವನ್ನು ತೆಗೆದುಕೊಂಡು ಸಾಕಷ್ಟು ಹಣ ಒದಗಿಸಿ ಈ ಯೋಜನೆಯ ಪ್ರಗತಿಗೆ ಪ್ರಯತ್ನ ಮಾಡತಕ್ಕಂಥಾದ್ದು ಅತಿ ಅವಶ್ಯಕತೆ ಇದೆ. ತುಂಗಾ ಮೇಲ್ದಂಡೆ ಯೋಜನೆಗೆ ಈವರೆಗೆ ಕೇವಲ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತು ಕಡಿಮೆ ಪಕ್ಷ ಈ ಯೋಜನೆ ಬೇಗನೆ ಮುಕ್ತಾಯವಾಗಿದ್ದರೆ, ಲಕ್ಷಾಂತರ ಎಕರೆ ನೀರಾವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅನೇಕ ರೈತ ಬಾಂಧವರಿಗೆ ಅನುಕೂಲವಾಗಬೇಕಾದರೆ ಕನಿಷ್ಟ 100 ಕೋಟಿ ರೂಪಾಯಿಗಳನ್ನಾದರೂ ಬಜೆಟ್‌ನಲ್ಲಿ ಇಟ್ಟು ಈ ಕೆಲಸವನ್ನು ಕೈಗೆತ್ತಿಕೊಂಡಿದ್ದೇ ಆದರೆ ಈ ಯೋಜನೆ ಪೂರ್ತಿಯಾಗಿ ಮುಕ್ತಾಯವಾಗುತ್ತದೆ ಎಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಈ ತುಂಗಾ ಮೇಲ್ದಂಡೆ ಯೋಜನೆ, ಇದಕ್ಕೆ ಕೇಂದ್ರ ಸರ್ಕಾರದ ವಾಟರ್ ಕಮೀಷನ್‌ನಿಂದ ಇನ್ನುವರೆಗೂ ಕೂಡ ಪರ್ಮಿಶನ್ ಸಿಕ್ಕಿಲ್ಲ. ಮತ್ತು ಈಗ ಯೋಜನೆಯನ್ನು, ಸುಮಾರು 32 ಟಿ.ಎಂ.ಸಿ. ನೀರು ಇರತಕ್ಕಂಥ ಒಂದು ಯೋಜನೆಯನ್ನು ಕೈಬಿಟ್ಟಿದ್ದಾರೆ. ಇದರಿಂದ ಸುಮಾರು 2 ಲಕ್ಷ 34 ಸಾವಿರ ಎಕರೆ ನೀರಾವರಿಯಾಗತಕ್ಕಂಥ ಒಂದು ಸಂದರ್ಭ ಇದೆ. ಈ ಒಂದು 32 ಟಿ.ಎಂ.ಸಿ. ನೀರನ್ನು ಹೆಚ್ಚು ಶೇಖರಣೆ ಮಾಡುವುದರಿಂದ 3 ಲಕ್ಷ 54 ಸಾವಿರ ಎಕರೆ ಪ್ರದೇಶದಲ್ಲಿ ಎರಡು ಬೆಳೆಗಳಿಗೆ ನಾವು ನೀರನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ಇದೇ ತಮ್ಮ ಸ್ಥಾನದಲ್ಲಿ ಮಾಜಿ ಸ್ಪೀಕರ್‌ರಾದಂಥ ಬಣಕಾರ್ ಅವರು ಇದ್ದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ಸರ್ವೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಮುಖ್ಯ ಮಂತ್ರಿಗಳಿಗೆ ಮತ್ತು ಅನೇಕರಿಗೆ ಈ ವಿಷಯ ಕುರಿತು ಹಿಂದೆ ಇದ್ದಂಥ ಎಲ್ಲಾ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಕೂಡ ವಿವರವಾಗಿ ಬರೆದು ಈ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಮೇಲಿಂದ ಮೇಲೆ ಮನವಿ ಮಾಡುತ್ತ ಬಂದಿದ್ದಾರೆ. ಆದರೂ ಇದರ ಬಗ್ಗೆ ಏನೂ ಪ್ರಯೋಜನ ಆಗಲಿಲ್ಲ. ಒಟ್ಟಾರೆ ಈ ವಿಷಯದಲ್ಲಿ ಹೆಚ್ಚಿಗೆ ಮಾತನಾಡುವುದಕ್ಕಿಂತ ಇವತ್ತು ಗಟ್ಟಿಯಾದ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಅಭಿಪ್ರಾಯವನ್ನು ಮಂಡಿಸಿ, ಜೊತೆಗೆ ಕಳೆದ ತಿಂಗಳು 23ನೇ ತಾರೀಖು 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಒಂದು ಪತ್ರಿಕಾ ವರದಿ ಕೂಡ ಪ್ರಕಟವಾಗಿದೆ. ನಮ್ಮ ರಾಜ್ಯದಿಂದ ಇವತ್ತು ಕೊಯ್ನಾ ಡ್ಯಾಮಿಗೆ 7.5 ಟಿ.ಎಂ.ಸಿ.

ನೀರನ್ನು ಕೊಟ್ಟಿದ್ದಾಗಿದೆ. ನೀರು ಮಾತ್ರ ಹರಿಯಿತು, ನಮಗೆ ವಿದ್ಯುಚ್ಛಕ್ತಿ ಬರಲಿಲ್ಲ. ಈ ಬಗ್ಗೆ ಕೊಟ್ಟಿರುವ ಪತ್ರಿಕಾ ಹೇಳಿಕೆ ಬಗ್ಗೆ ನಾವು ಕತ್ತಲಿನಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ತಮ್ಮ ಮೂಲಕ ಕೇಳಿಕೊಂಡು ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ನೀವು ಎರಡು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೇ, ನಾನು ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದರು. ತುಂಗಾ ಏತನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಬೇಕು ಮತ್ತು ಮಾಲತಿ ಯೋಜನೆಯನ್ನು ಸೇರಿಸಬೇಕು ಎನ್ನುವ ಮಾತನ್ನು ಹೇಳಿದರು. ನಾನು ಮಲೆನಾಡು ಭಾಗದಿಂದ ಬಂದಿದ್ದೇನೆ. ಮಲೆನಾಡನ್ನು ಈಗ ವಿದ್ಯುತ್ ಯೋಜನೆಗೋಸ್ಕರ ಸಾಕಷ್ಟು ಮುಳುಗಿಸಿಯಾಗಿದೆ. ಇನ್ನೇನು ಸ್ವಲ್ಪ ಭಾಗ ಇದೆ. ಎವರ್‌ಗ್ರೀನ್ ಫಾರೆಸ್ಟ್ ಭಾಗ ಇರತಕ್ಕಂಥ, ತೀರ್ಥಹಳ್ಳಿ ಭಾಗದ ಆಗುಂಬೆ ಏನಿದೆ, ಅದನ್ನು ನಮ್ಮ ದೇಶದ ಎರಡನೇ ಚಿರಾಪುಂಜಿ ಎಂದು ಹೇಳುತ್ತಾರೆ. ಮಾಲತಿ ಯೋಜನೆಯನ್ನು ಮಾಡುವುದರಿಂದ ಆ ಒಂದು ಭಾಗ ಇಡೀ ಮುಳುಗುತ್ತದೆ. ದಯಮಾಡಿ ಇದನ್ನು ಮಾಡಬಾರದು ಎನ್ನುವಂಥಾದ್ದು ಆ ಭಾಗದ ಜನರ ದೊಡ್ಡ ಪ್ರತಿಭಟನೆ ಇದೆ. ಮಾನ್ಯ ಮುಖ್ಯ ಮಂತ್ರಿಗಳ ಗಮನದಲ್ಲಿ ಇದು ಇದೆಯೆಂದು ನಾನು ಭಾವಿಸಿದ್ದೇನೆ. ಆ ಜನರ ಜೀವನ ಬದುಕಿನ ಹಕ್ಕಿಗಾಗಿ ಖಂಡಿತವಾಗಿಯೂ ಇದನ್ನು ಮಾಡುವುದಕ್ಕೆ ಬಿಡಲಿಕ್ಕಿಲ್ಲ. ತುಂಗಾ ಕ್ರೆಸ್ಟ್ ಗೇಟನ್ನು ಹಾಕುತ್ತಿದ್ದಾರೆ ಮತ್ತು ಈ ಯೋಜನೆ ಪ್ರಾರಂಭವಾಗಿದೆ. ಇದನ್ನು ಮಾಡುವಾಗಲೂ ಕೂಡ ನನ್ನ ಕ್ಷೇತ್ರದ ಅನೇಕ ಭಾಗಗಳು ಮುಳುಗಡೆಯಾಗುವಂಥ ವಿಚಾರ ಇದೆ. ಆದರೆ ನಾನು ಎಷ್ಟು ಹೇಳಿದರೂ ನನಗೆ ಇದಕ್ಕೆ ಸಂಬಂಧಪಟ್ಟಂಥ ಯಾವುದೇ ಇನ್‌ಫಾರ್ಮೇಶನ್‌ನ್ನು ಕೊಡದೆ, ಅಲ್ಲಿಯ ಜನರನ್ನು ಕತ್ತಲಲ್ಲಿಟ್ಟು ಆ ಭಾಗದ ಕೆಲಸ ನಡೆಯುತ್ತಿದೆ. ನಾನು ಈ ಪ್ರದೇಶದ ಒಬ್ಬ ಪ್ರತಿನಿಧಿಯಾಗಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ವಿನಂತಿ ಮಾಡುತ್ತೇನೆ. ದಯವಿಟ್ಟು ತಾವು ಅದಕ್ಕೆ ಎಷ್ಟು ಭಾಗ ಮುಳುಗಡೆಯಾಗುತ್ತದೆ, ಎಷ್ಟು ಮನೆಗಳು ಮುಳುಗಡೆಯಾಗುತ್ತವೆ, ಎಷ್ಟು ಜಮೀನು ಮುಳುಗುತ್ತದೆ ಎಂಬುದನ್ನು ಬಹಿರಂಗಪಡಿಸಬೇಕು. ಅಲ್ಲಿರತಕ್ಕಂಥ ಮನೆಗಳು ಮತ್ತು ಜಮೀನು ಮುಳುಗಡೆಯಾಗತಕ್ಕಂಥವರಿಗೆ ಯಾವ ರೀತಿಯ ಪರಿಹಾರ, ಪುನರ್‌ವಸತಿ ಯೋಜನೆಯನ್ನು ಸರ್ಕಾರ ಮಾಡುತ್ತದೆ ಎಂದು ಹೇಳಬೇಕು.

ಉಪಾಧ್ಯಕ್ಷರು:- ಕೃಷ್ಣಾ ಚರ್ಚೆಯಿಂದ ತುಂಗಾ ಭದ್ರಾಕ್ಕೆ ಬರುತ್ತಿದ್ದೀರಲ್ಲ?

ಶ್ರೀ ಅರಗ ಜ್ಞಾನೇಂದ್ರ:- ಇದು ಕೃಷ್ಣಾ ಕೊಳ್ಳದಲ್ಲಿ ಬರುವಂಥ ಯೋಜನೆ ಆಗಿದೆ.

ಉಪಾಧ್ಯಕ್ಷರು:- ನಾವು ಚರ್ಚೆ ಮಾಡುತ್ತಿರುವುದು ಕೃಷ್ಣಾ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ:- ಇದೂ ಕೃಷ್ಣಾದ ಒಂದು ಭಾಗ ಇದೆ. ತುಂಗಾ ಮೇಲ್ದಂಡೆ ಮತ್ತು ತುಂಗಾ ಲಿಫ್ಟ್ ಇರಿಗೇಷನ್ ಇದೆಲ್ಲ ಸೇರಿಯೇ ಕೃಷ್ಣಾ ಆಗುವಂಥಾದ್ದು. ದಯವಿಟ್ಟು ಇದನ್ನು ವಿಚಾರ ಮಾಡುವಾಗ ಮಲೆನಾಡು ಭಾಗದಲ್ಲಿಯ ಒಂದು ಸ್ಥಿತಿಯನ್ನು ಅವರು ಅವಲೋಕನ ಮಾಡಬೇಕು. ಸ್ವಲ್ಪ ಅಜಾಗ್ರತೆ ಮಾಡಿದರೂ ಕೂಡ ಆ ಜನರ ಬದುಕಿನ ಜೊತೆಯಲ್ಲಿ ಚೆಲ್ಲಾಡುವಂಥ

ಪ್ರಸಂಗ ನಿಜವಾಗಿಯೂ ಆಗುತ್ತದೆ. ತುಂಗಾ ನದಿಗೆ ಆಣೆಕಟ್ಟನ್ನು ಈಗಾಗಲೇ ಹಾಕಿದ್ದೇವೆ. ಅಲ್ಲಿ ಮುಳುಗಡೆಯಾಗಿ ಜಮೀನು ಮತ್ತು ಮನೆಗಳನ್ನು ಕಳೆದುಕೊಂಡಿದ್ದೇವೆ. ಮತ್ತೆ ನಮ್ಮ ಕಾಡನ್ನು ಕಳೆದುಕೊಂಡಿದ್ದೇವೆ. ಆದರೆ, ಅಲ್ಲಿ ತುಂಗಾ ಮತ್ತು ಮಾಲತಿ ನದಿ ಹರಿಯುತ್ತಾ ಇದ್ದರೂ ಕೂಡ, ಅಲ್ಲಿರತಕ್ಕಂಥ ತೀರ್ಥಹಳ್ಳಿ, ಕೊಪ್ಪಳ ಈ ಭಾಗದ ಜನರಿಗೆ ಯಾವುದೇ ರೀತಿಯ ಪ್ರಯೋಜನವೂ ಕೂಡ ಆಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು, ಈಗಾಗಲೇ ಕೆಲವೊಂದು ಚಿಕ್ಕ, ಚಿಕ್ಕ ಏತ ನೀರಾವರಿ ಯೋಜನೆಗಳನ್ನು ಮಾಡಿದ್ದಾರೆ. ಇದರ ಜೊತೆಗೆ ಇನ್ನಷ್ಟು ಮಾಡಿಕೊಟ್ಟರೆ, ಖಂಡಿತವಾಗಿಯೂ ಆ ಭಾಗದ ರೈತರಿಗೆ ಉಪಕಾರವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮೂರು ಏತ ನೀರಾವರಿ ಯೋಜನೆಗಳನ್ನು ಕಳೆದ ಸಾಲಿನಲ್ಲಿ ತಾವು ಮಂಜೂರ್ಮಾಡಿ ಕೊಟ್ಟಿದ್ದೀರಿ. ಆದಕ್ಕಾಗಿ, ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ, ಒಂದು ವರ್ಷವಾದರೂ ಕೂಡ, ಅಧಿಕಾರಿಗಳು ಈ ಏತನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಇವತ್ತಿಗೂ ಕೆಲಸ ಮಾಡಲಿಲ್ಲ. ಇವತ್ತು, ಅಧಿಕಾರಿಗಳನ್ನು ಕೇಳಿದರೆ ಹೇಳುತ್ತಾರೆ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ, ತುಂಗಾ ನದಿಯ ಆ ಭಾಗದಲ್ಲಿರತಕ್ಕ ನಿಮಗೆ ಲಭ್ಯವಾಗಿರತಕ್ಕ ನೀರು ಈಗಾಗಲೇ ಬಳಕೆಯಾಗಿದೆ. ಈಗ ನೀರನ್ನು ಎತ್ತತಕ್ಕಂಥ ಹಕ್ಕು ಬರುವುದಿಲ್ಲ ಎನ್ನುವಂಥ ಮಾತನ್ನು ಈಗಾಗಲೇ ಅಧಿಕಾರಿಗಳ ಮಟ್ಟದಲ್ಲಿ ಹೇಳುತ್ತಿದ್ದಾರೆ. ದಯಮಾಡಿ ಇದೊಂದು ದುರಂತವಾಗುತ್ತದೆ. ನಮಗೆ ಆ ಏತ ನೀರಾವರಿ ಯೋಜನೆಗಳನ್ನು ಮುಂದುವರಿಸಿ ಕೊಡಬೇಕು, ಒಂದು ವೇಳೆ ಮುಂದುವರಿಸಿಕೊಡದೇ ಹೋದರೆ, ನಮಗೆ ಅನ್ಯಾಯವಾಗುತ್ತದೆ. ಮತ್ತೆ ಮೇಲ್ದಂಡೆ ಯೋಜನೆಯಂತೂ ಸಾಧ್ಯವೇ ಇಲ್ಲ. ಕ್ರೆಸ್ಟ್ ಗೇಟ್ ಸುಲಲಿತವಾಗಿ ಆಗಬೇಕು ಮತ್ತು ಕ್ರೆಸ್ಟ್ ಗೇಟ್ ಹಾಕಬೇಕು. ಈ ಕೆಲಸವನ್ನು ಖಂಡಿತವಾಗಿಯೂ ಮಾಡಿ, ತೀರ್ಥಹಳ್ಳಿ ಮತ್ತು ಮಲೆನಾಡಿನ ಭಾಗಕ್ಕೆ ಸಹಾಯವನ್ನು ಮಾಡಿಕೊಡಬೇಕು. ಮಂದಗದ್ದೆ ಭಾಗದಲ್ಲಿ ಎಷ್ಟು ಮನೆಗಳು ಮತ್ತು ಜಮೀನು ಮುಳುಗಡೆಯಾಗುತ್ತದೆ? ಏಕೆಂದರೆ ಈಗಾಗಲೇ ರಸ್ತೆಗಳಿಲ್ಲಿ ಬೋರ್ಡ್‌ಗಳನ್ನು ಹಾಕಿದ್ದಾರೆ. ತುಂಗಾ ಕ್ರೆಸ್ಟ್ ಗೇಟ್‌ನಲ್ಲಿ ಮುಳುಗುವಂಥ ಪ್ರದೇಶ ಎಂದು ನಾವು ಕೇಳಿದರೆ, ಒಂದು ಇಂಚು ಜಮೀನೂ ಕೂಡ ಮುಳುಗುವುದಿಲ್ಲ, ಒಂದು ಸನೆಯೂ ಕೂಡ ಮುಳುಗುವುದಿಲ್ಲ ಈ ಮಾತನ್ನು ಹೇಳುತ್ತಾರೆ. ಏಕೆ ಕತ್ತಲಲ್ಲಿ ಇಡುತ್ತಾರೆನ್ನುವುದು ನನಗೆ ಗೊತ್ತಿಲ್ಲ. ದಯಮಾಡಿ, ಇದಕ್ಕೆ ಬೇಕಾಗಿರತಕ್ಕ ಮಾಹಿತಿಯನ್ನು ಬಹಿರಂಗಪಡಿಸಬೇಕು ಮತ್ತು ಈ ಸದನದ ಮೂಲಕ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಮೂರು ಏತನೀರಾವರಿ ಇವೆ. ಬಾಳೆಬಯಲು ಏತನೀರಾವರಿ, ಮೀನಗುಂದ ಏತನೀರಾವರಿ ಮತ್ತು ಬಸಳ್ಳಿ ಏತನೀರಾವರಿ ಯೋಜನೆಗಳ ಕಾಮಗಾರಿಗಳನ್ನು ಈ ವರ್ಷವೇ ಕೈಗೆತ್ತಿಕೊಂಡು, ಮುಗಿಸಬೇಕೆಂದು ತಮ್ಮ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಆ ಕ್ಷೇತ್ರದ ಜನತೆಯ ಪರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಂಡು, ಮಾತನಾಡಲು ಅವಕಾಶ ಮಾಡಿ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಸಭೆ ನಡೆಯುವುದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆಯನ್ನು ಒಂದು ಗಂಟೆ ಕಾಲ ಮಾಡಲು ಅವಕಾಶವಿದೆ. ಇದಕ್ಕೆ 4 ಜನರು ರುಜು ಮಾಡಿದ್ದಾರೆ, ತಾವು ಎಷ್ಟು ಜನರಿಗೆ ಅವಕಾಶ ಮಾಡಿಕೊಡುತ್ತೀರೋ ನನಗೆ ಗೊತ್ತಿಲ್ಲ. ಇದು ತಮಗೆ

ಸೇರಿದ್ದುದು. ಏಕೆಂದರೆ, ಈ ವಿಷಯದ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಎಲ್ಲರೂ ಭಾಗವಹಿಸಬೇಕೆಂದು ಹೇಳಿದರೆ, ನನ್ನದೇನೂ ಅಡ್ಡಿಯಿಲ್ಲ. ಇನ್ನೊಂದು ದಿನ ಕುಳಿತುಕೊಳ್ಳಬೇಕೆಂದೂ, ಕುಳಿತುಕೊಳ್ಳೋಣ. ನಾನು ಇದರ ಬಗ್ಗೆ ದೊಡ್ಡ ಆತಂಕ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ತಾವು ಹೇಗೆ ಹೇಳುತ್ತೀರೋ, ಆ ರೀತಿ ನಡೆದುಕೊಳ್ಳುತ್ತೇನೆ.

ಆಯನೂರು ಮಂಜುನಾಥ್(ಹೊಸನಗರ):- ಮಾನ್ಯ ಉಪಾಧ್ಯಕ್ಷರೇ, ತುಂಗಾ ಮೇಲ್ದಂಡೆ ಯೋಜನೆ ಆಗಬೇಕೆಂಬ ಒತ್ತಾಯವನ್ನು ಅನೇಕ ಸ್ನೇಹಿತರು ಮಾಡುತ್ತಿದ್ದಾರೆ. ತೀರ್ಥಹಳ್ಳಿಯ ಶಾಸಕರು ಮಾತನಾಡಿದ ಹಾಗೆ, ಆ ತುಂಗಾ ಮೇಲ್ದಂಡೆಯಲ್ಲಿ ಬರತಕ್ಕಂಥಾದ್ದು, ಹೊಸನಗರ ವಿಧಾನ ಸಭಾ ಕ್ಷೇತ್ರದ ಭಾಗಗಳು. ಹೊಸನಗರ ವಿಧಾನ ಸಭಾ ಕ್ಷೇತ್ರ, ಶಿವಮೊಗ್ಗ ತಾಲ್ಲೂಕಿನ ಎಲ್ಲಾ ಗ್ರಾಮೀಣ ಭಾಗಗಳಲ್ಲಿ ಸೇರುತ್ತದೆ. ಆದರೆ, ತುಂಗಾ ನದಿಯನ್ನು ಪಕ್ಕದಲ್ಲಿಟ್ಟುಕೊಂಡರೂ ಕೂಡ, ಶಿವಮೊಗ್ಗ ತಾಲ್ಲೂಕಿಗೆ ಒಂದೇ ಒಂದು ಹನಿ ನೀರಿನ ಸೌಲಭ್ಯ ಸಿಕ್ಕಿಲ್ಲ. ಆ ಕಾರಣಕ್ಕಾಗಿ ತುಂಗಾ ಏತ ನೀರಾವರಿಯಾಗಬೇಕು, ಎಂಬುದಾಗಿ ಕಳೆದ 20-25 ವರ್ಷಗಳಿಂದ ಆಗ್ರಹ ಒಮ್ಮೆ ಆಗಿ ಹೋಯಿತೆಂದಾಗ, ತುಂಗಾ ಏತ ನೀರಾವರಿಗೆ ಬೇಕಾದಂಥ 3 ಟಿ.ಎಂ.ಸಿ. ನೀರು ನಮಗೆ ಲಭ್ಯವಾಗುವುದಿಲ್ಲ. ಶಾಶ್ವತವಾಗಿ ಶಿವಮೊಗ್ಗ ತಾಲ್ಲೂಕಿನಲ್ಲಿರತಕ್ಕ ರೈತರು, ನೀರಿನಿಂದ ವಂಚಿತರಾಗುತ್ತಾರೆ. ಎರಡನೆಯ ಸಂಗತಿಯೇನೆಂದರೆ, ತುಂಗಾ ಮೇಲ್ದಂಡೆ ಯೊಜನೆಯನ್ನು ಕಣ್ಮುಂದೆ ಇಟ್ಟುಕೊಂಡರೂ ಕೂಡ, ನನ್ನ ಭಾಗದಲ್ಲಿ ಬರತಕ್ಕಂಥ ಶಿವಮೊಗ್ಗ ನಗರದ ಹೊಸ ಬಡಾವಣೆಗಳೇನಿವೆ, ಅಲ್ಲಿ ಸಿ.ಐ.ಟಿ.ಬಿ. ನಗರಾಭಿವೃದ್ಧಿ ಪ್ರಾಧಿಕಾರದಿಂದ ಲೇ ಔಟ್‌ಗಳನ್ನು ಮಾಡುವುದಕ್ಕೆ ಸರ್ಕಾರವೇ, ಮಂಜೂರಾತಿಯನ್ನು ಕೊಟ್ಟಿದೆ. ಆ ನಿವೇಶನಗಳ ಮಧ್ಯೆ ಇವತ್ತು ಈ ತುಂಗಾ ಮೇಲ್ದಂಡೆ ಯೋಜನೆಯ ಕಾಲುವೆಯನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಈ ಕಾರಣದಿಂದ 8 ಲೇ ಔಟ್‌ಗಳು, ಸರ್ಕಾರದಿಂದ ಅನುಮೋದನೆ ಪಡೆದುಕೊಂಡು, ಸರ್ಕಾರದಿಂದ ಮಂಜೂರಾತಿ ಪಡೆದುಕೊಂಡು, ಸರ್ಕಾರದ ಏಜೆನ್ಸಿ ಮೂಲಕವೇ, ರಚನೆಯಾದಂಥ ಈ 8 ಲೇ ಔಟ್‌ಗಳು ನಾಶವಾಗುತ್ತವೆ. ಜೊತೆಗೆ ಈಗಾಗಲೇ ಮನೆಗಳನ್ನು ಕಟ್ಟಿಕೊಂಡಂಥ ಜನ ಇದ್ದಾರೆ. ಆ ಮನೆಗಳನ್ನೂ ಕೂಡ ಹೊಡೆದು ಹಾಕುವಂಥ ಪರಿಸ್ಥಿತಿ ಬರುತ್ತದೆ. ಈ ತುಂಗಾ ಮೇಲ್ದಂಡೆಯಿಂದಾಗಿ ಶಿವಮೊಗ್ಗ ತಾಲ್ಲೂಕಿನೊಳಗೆ, ತಾಲ್ಲೂಕಿನ ರೈತರ ಜಮೀನುಗಳ ಮಧ್ಯೆ ಹರಿದುಕೊಂಡು ಹೋದರೂ ಕೂಡ, ಒಂದು ಹನಿ ನೀರೂ ಕೂಡ ನಮಗೆ ಲಾಭವಾಗುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಕೇವಲ 2 ಸಾವಿರ ಎಕರೆ ಉದ್ದಕ್ಕೆ ಸಿಕ್ಕಿತು. ಆದರೆ, 125 ಅಡಿ ಆಳ, 400 ಅಡಿ ಅಗಲ ಇರತಕ್ಕ ಈ ಕಾಲುವೆಗೆ, ನಮ್ಮ ರೈತರು ಭೂಭಾಗವನ್ನು ಬಿಟ್ಟು ಕೊಡುತ್ತಿದ್ದಾರೆ. ಆದರೆ, ನೀರು ಮಾತ್ರ ನಮಗೆ ಸಿಕ್ಕುತ್ತಾ ಇಲ್ಲ, ನಿತ್ಯ ಕಣ್ಣೀರು ಹಾಕತಕ್ಕಂಥ ನಮಗೆ, ತುಂಗಾ ಏತ ನೀರಾವರಿಯನ್ನು ಜಾರಿ ಮಾಡದೇ, ತುಂಗಾ ಏತ ನೀರಾವರಿಗೆ ನೀರನ್ನು ಕೊಡದೇ, ಮೇಲ್ದಂಡೆಯೊಳಗೆ ನೀರನ್ನು ತೆಗೆದುಕೊಂಡು ಹೋಗಬಾರದು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಬಹಳ ಯೋಚನೆ ಮಾಡಬೇಕು. ಅಲ್ಲಿನ ರೈತರ ಪರವಾಗಿ, ಶಿವಮೊಗ್ಗ ತಾಲ್ಲೂಕಿನ ಒಣ ಭೂಮಿಯ ಒಡೆಯರ ಬಗ್ಗೆ, ಅಲ್ಲಿ ತುಂಗಾ ನದಿ ಇದ್ದರೂ ಕೂಡ ನೀರಿಲ್ಲದೆ ಕಣ್ಣೀರು ಸುರಿಸತಕ್ಕ ರೈತರ ಪರವಾಗಿ, ಅತ್ಯಂತ ಕಾಳಜಿಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಉಪಾಧ್ಯಕ್ಷರೇ, ನಿಯಮ 69ರ ಕೆಳಗಡೆ 2 ಸಾವಿರ ಇಸವಿಯೊಳಗೆ ಕೃಷ್ಣಾ ನದಿಯ ನೀರಿನ ಬಳಕೆಯ ಬಗ್ಗೆ ಈ ಸದನದ ಗೌರವಾನ್ವಿತ ಸದಸ್ಯರುಗಳಾದಂಥ ಹೆಚ್.ಎನ್.ನಂಜೇಗೌಡರು, ರವೀಂದ್ರನಾಥರು, ಮಲ್ಲಿಕಾರ್ಜುನ ಖರ್ಗೆಯವರು, ಮಲಕರೆಡ್ಡಿಯವರು ಈ ಚರ್ಚೆಗೆ ತಾವು ಅನುವು ಮಾಡಿಕೊಡಬೇಕೆಂದು ಸೂಚನೆಯನ್ನು ಕೊಟ್ಟ ಹಿನ್ನಲೆಯಲ್ಲಿ ಈ ವಿಷಯ ಮೊನ್ನೆ ಮತ್ತು ಈ ದಿವಸ ಈ ಸಭೆಯಲ್ಲಿ ಚರ್ಚೆಯಾಗಿದೆ. ಈ ಚರ್ಚೆಯ ಕಾಲದಲ್ಲಿ ಅಧಿಕೃತ ವಿರೋಧ ಪಕ್ಷದ ಮುಖಂಡರಾದಂಥ ಶ್ರೀಮಾನ್ ಯಡಿಯೂರಪ್ಪನವರು ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇನ್ನೂ ಅನೇಕ ಜನ ಸನ್ಮಿತ್ರರು ಮಾತನಾಡಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೇ, ಕೃಷ್ಣಾ ಜಲಾನಯನದ ಪೂರ್ಣ ನೀರಿನ ಬಳಕೆ ಬಗ್ಗೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ನಾವು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದು ಕೇವಲ ಯಾವುದೋ ಭಾಗಕ್ಕೆ ಸೇರಿದಂಥ ನದಿ, ಅದು ಹೈದರಾಬಾದ್ ಕರ್ನಾಟಕ ಅಥವಾ ಗುಲ್ಬರ್ಗಾಕ್ಕೆ ಮಾತ್ರ ಸೀಮಿತವಾದಂಥ, ನದಿಯ ಜಲಾನಯನ ಪ್ರದೇಶ ಎಂದು ಭಾವಿಸಿಕೊಳ್ಳತಕ್ಕಂಥಾದ್ದು ಸರಿಯಲ್ಲವೆಂದು ಮೊದಲು ನಾನು ಕಳಕಳಿಯ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಕೃಷ್ಣಾ ಜಲಾನಯನ ಇವತ್ತು ಈ ರಾಜ್ಯದ 13 ಜಿಲ್ಲೆಗಳಲ್ಲಿ ಪಸರಿಸಿದೆ. ಶಿವಮೊಗ್ಗದಿಂದ ಹಿಡಿದು, ಚಿಕ್ಕಮಗಳೂರು, ತುಮಕೂರು, ಹಳೆಯ ಮೈಸೂರಿನ ಈ ಭಾಗದಲ್ಲಿ ಚಿತ್ರದುರ್ಗ ಈ ಎಲ್ಲಾ ಭಾಗಗಳಿಗೆ ಅನ್ವಯವಾಗತಕ್ಕಂಥ, ಒಂದು ಕೃಷ್ಣಾ ನದಿಯ ಜಲಾನಯನ ವಿಷಯದಲ್ಲಿ ಚರ್ಚೆ ಮಾಡುವಾಗ, ಕೇವಲ ಇದು ಯಾವುದೋ ಒಂದು ಭಾಗಕ್ಕೆ ಮಾತ್ರ, ಸೀಮಿತವಾಗಿದೆ ಅಥವಾ ಇದರ ಬಗ್ಗೆ ನಾವು ಹೆಚ್ಚಿನ ಆಸಕ್ತಿ ವಹಿಸಿಲ್ಲ, ವಹಿಸಿದ್ದೇವೆ. ಹೀಗೆ ಪರ ವಿರೋಧ ಈ ರೀತಿ ಮಾತನಾಡತಕ್ಕಂಥಾದ್ದು ಸರಿಯಲ್ಲವೆನ್ನುವ ಮಾತನ್ನು, ಪ್ರಥಮದಲ್ಲೇ ವಿನಂತಿ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದ, ಸ್ವಲ್ಪ ಹೆಚ್ಚು ಕಡಿಮೆ ಮೂರನೆಯ ಎರಡು ಭಾಗಕ್ಕಿಂತ ಹೆಚ್ಚು, ಭೂ ಪ್ರದೇಶ ಕೃಷ್ಣಾ ನದಿಯ ಜಲಾನಯನದ ಪ್ರದೇಶದಲ್ಲಿ ಬರುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಈ ಭಾಗದ ಎಲ್ಲಾ ರೈತರ ಏಳಿಗೆಗೋಸ್ಕರವಾಗಿ, ಯಾವುದೇ ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ನಾವು ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದೊಂದು ಕಾಲದಲ್ಲಿ, ಒಂದೊಂದು ರೀತಿ ಜರುಗಿದೆ. ಜರುಗಿರತಕ್ಕಂಥಾದ್ದರ ಬಗ್ಗೆ ವಿಶ್ಲೇಷಣೆ ಮಾಡತಕ್ಕಂಥಾದ್ದು ಸರಿಯೋ ತಪ್ಪೋ, ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. 1980ಕ್ಕಿಂತ ಪೂರ್ವದಲ್ಲೇ ವಾಟರ್ ಪ್ಲಾನ್ ಮಾಡಿದರು. ನಮಗೆ ಬರತಕ್ಕಂಥ 729 ಟಿ.ಎಂ.ಸಿ. ನೀರಿನಲ್ಲಿ ಎಷ್ಟು ನೀರನ್ನು, ಯಾವ ಜಿಲ್ಲೆಗಳಿಗೆ, ಹೇಗೆ ಉಪಯೋಗ ಮಾಡಿಕೊಳ್ಳಬೇಕೆಂಬುದರ ಬಗ್ಗೆ ನಿರ್ಣಯ ಮಾಡಿದ್ದಾರೆ. ಅದು ಒಂದು ಕಾಲ ಆಯಿತು. ಅದಾದ ಮೇಲೆ 1993ರಲ್ಲಿ ಮತ್ತೊಂದು ನಿರ್ಣಯವಾಗಿದೆ. ನೀವೆಲ್ಲಾ ಏನು ಹೇಳುತ್ತೀರಿ. ಅಪ್ಪರ್ ಭದ್ರಾ, ತುಂಗಾ ಭದ್ರಾ ಎಂದು ಏನು ಮಾತನಾಡುತ್ತೀರಿ. ಅದರ ಬಗ್ಗೆ ಮತ್ತೊಂದು ಪುನರ್ ವಿಮರ್ಶೆ ಮಾಡಿದ್ದಾರೆ. ವಾಟರ್ ಪ್ಲಾನ್ ಕೂಡ ಬದಲಾವಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಇಷ್ಟೇ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಸಿದ್ದವನಹಳ್ಳಿ ನಿಜಲಿಂಗಪ್ಪನವರ ಮನಸ್ಸಿನ ಭಾವನೆಗಳು, ಅವರ ಆಸೆ ಆಶೋತ್ತರಗಳು

ಇವತ್ತು ಭದ್ರಾ, ಅಪ್ಪರ್ ಭದ್ರಾ ಆಗಬೇಕು ಎಂದು ಅವರು ತಮ್ಮ ಜೀವನದ ಉದ್ದಕ್ಕೂ ಹೇಳಿಕೊಂಡು ಬರುತ್ತಿದ್ದಾರೆ, ನಾನು ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದೆ. ಅದಕ್ಕೆ ಇಟ್ಟಿದ್ದಂತಹ ನೀರನ್ನು ಬದಲಾವಣೆ ಮಾಡಿ ಮತ್ತೇ ವಾಟರ್ ಪ್ಲಾನ್ ಅನ್ನು ಚೇಂಜ್ ಮಾಡಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. 729 ಟಿ.ಎಂ.ಸಿ. ನೀರಲ್ಲಿ ಹಿಂದೆ 8 ಟಿ.ಎಂ.ಸಿ. ನೀರನ್ನು ಏನು ಇಟ್ಟಿದ್ದರು ಅದನ್ನು ಕೈ ಬಿಟ್ಟು, ಇನ್ನು ಮುಂದೆ ಕೋಲ್ಲಾವಡಂ ಮತ್ತು ಗೋದಾವರಿ ಡೈವರ್‌ಷನ್‌ನಲ್ಲಿ ಬರತಕ್ಕಂಥ ನೀರಿಗೆ ಹೋಲಿಕೆ ಮಾಡಿಕೊಂಡು ಅದರಲ್ಲಿ ಬೇಕಾದರೆ ಮಾಡಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. 1993ರಲ್ಲಿ ಬದಲಾವಣೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ನಮ್ಮ ಅಧಿಕಾರಿಗಳು ಹೇಳುತ್ತಾರೆ, ನಾನು ಏಕೆ ಈ ಮಾತನ್ನು ಪೂರ್ವದಲ್ಲಿಯೇ ಹೇಳುತ್ತೇನೆ ಅಂದರೆ, ಬೀದರ್ ಗುಲ್ಬರ್ಗಾ ಅಥವಾ ರಾಯಚೂರು ಬಳ್ಳಾರಿ ಇಷ್ಟಕ್ಕೆ ಮಾತ್ರ ಸೀಮಿತವಾಗಿದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸತಕ್ಕಂಥಾದ್ದು ರಾಜ್ಯದ ಹಿತದೃಷ್ಟಿಯಿಂದ ಸರಿಯಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಬರೀ ಗುಲ್ಬರ್ಗ ಬೀದರ್‌ಗೆ ಸಂಬಂಧಪಟ್ಟಿದ್ದು ಎಂದು ಯಾರೂ ಹೇಳಿಲ್ಲವಲ್ಲ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಬಂದಾಗ ಮಾತನಾಡುತ್ತಿದ್ದರು. ಏಕೆ ಖರ್ಗೆಯವರೇ ತಾವು ಹಿರಿಯರಾಗಿ ಈ ರೀತಿ ಮಾತನಾಡುತ್ತಿದ್ದೀರಿ. ಈಗಲೇ ಹೇಳಿದರು ನಿಮಗೆ ನಮ್ಮ ಭಾಗದ ಬಗ್ಗೆ ಆಲೋಚನೆ ಇಲ್ಲ, ನಾನು ಕುಳಿತುಕೊಂಡು ಈ ಕಿವಿಯಲ್ಲಿ ಕೇಳಿದ್ದೇನೆ. ಅದಕ್ಕೆ ಏಕೆ ಮಾತನಾಡಬೇಕು? ಮಾತನಾಡುವುದು ಬೇಡ. ನಾನು ಇಲ್ಲಿ ಕುಳಿತುಕೊಂಡು ಸೌಮ್ಯವಾಗಿ ಕೇಳುತ್ತೇನೆ. ಯಾರು ಏನು ಹೇಳಿದರೂ ಅದಕ್ಕೆ ನನ್ನ ವಿರೋಧ ಇಲ್ಲ. ಅವರು ಹೇಳಿದ ಮೇಲೆ ನಾನು ಹೇಳುವುದಕ್ಕೂ ನನಗೆ ಸಮಾಧಾನ ಇರಬೇಕಲ್ಲ. ಏಕೆಂದರೆ ಕೆಲವರು ಮಾತನಾಡುವಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸರ್ವ ಸ್ವತಂತ್ರರು ಇದ್ದಾರೆ. ನನ್ನ ಮುಂದೆ ಇರತಕ್ಕಂಥ ದಾಖಲಾತಿಗಳನ್ನು ನಾನು ಹೇಳಿದ ಹಾಗೆ ಇವತ್ತು ವಸ್ತುಸ್ಥಿತಿ ಏನು ಇದೆಯೋ ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ, ಈ ರಾಜ್ಯದ ಜನತೆಯ ಮುಂದೆ ಇಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ನಾನು ಇವತ್ತು ಯು.ಕೆ.ಪಿ. ಬಗ್ಗೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡತಕ್ಕಂಥಾದ್ದು ಅಷ್ಟೇ, ಅದಕ್ಕಿಂತ ಇನ್ನೂ ಹಿಂದೆ ಪ್ರಾರಂಭವಾಗಿರತಕ್ಕಂಥ ಯೋಜನೆಗಳು ದೊಡ್ಡ ಮತ್ತು ಮಧ್ಯಮ ಯೋಜನೆಗಳು ಕೃಷ್ಣಾ ಬೇಸಿನ್‌ನಲ್ಲಿಯೇ ಬರುತ್ತವೆ. ಘಟಪ್ರಭಾ ಇರಬಹುದು ಮಲಪ್ರಭಾ ಇರಬಹುದು, ಹಿಪ್ಪರಗಿ ಇರಬಹುದು ಬೆಣ್ಣೆತೊರಾ ಇರಬಹುದು, ಭದ್ರಾ ಈಗ ಹಾಲಿ ಇರತಕ್ಕಂಥ ರಿಜರ್‌ವಾಯರ್ ಇರಬಹುದು, ದೂದಗಂಗಾ ಇರಬಹುದು ಮಹದಾಯಿ ಇರಬಹುದು ರಾಮತಾಳ್ ಇರಬಹುದು, ಮಾರ್ಕಂಡೇಯ ಲಿಫ್ಟ್ ಇರಿಗೇಷನ್ ಇರಬಹುದು ಅಪ್ಪರ್ ಭದ್ರಾ ಇರಬಹುದು ಅಪ್ಪರ್ ತುಂಗಾ ಇರಬಹುದು, ಭೀಮಾ ಇರಬಹುದು ಅಮರ್ಜಾ ಇರಬಹುದು, ಲೋಯರ್ ಮುಲ್ಲಾಮಾಡಿ ಇರಬಹುದು, ಬಸಾಪುರ ಲಿಫ್ಟ್ ಇರಿಗೇಶನ್ ಇರಬಹುದು, ಹಿರಿಯ ಹಳ್ಳಿ ಪ್ರಾಜೆಕ್ಟ್ ಇರಬಹುದು ಮಸುಕಿನಾಲಾ ಇರಬಹುದು, ಇವೆಲ್ಲಾ ಇವತ್ತು ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಯೋಜನೆಗಳು. ಅದರ ಜೊತೆಯಲ್ಲಿ ಈ ಯು.ಕೆ.ಪಿ. ಒಂದು ಯೋಜನೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಯೋಜನೆ

ಎನ್ನತಕ್ಕಂಥ ಮಾತನ್ನು ನಾನು ಸೂಕ್ಷ್ಮವಾಗಿ ಈ ಸದನದ ಮೂಲಕ ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಯೋಜನೆಗಳನ್ನು ಕಾರ್ಯಗತ ಮಾಡಿ ಮುಗಿಸುವಂಥಾದ್ದಕ್ಕೆ ಇಲ್ಲಿಯವರೆಗೂ ನಾವು ಏನು ಮಾಡಿದ್ದೇವೆ ಎನ್ನತಕ್ಕಂಥಾದ್ದಕ್ಕೆ ನಾನು ಒಟ್ಟಾರೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ನಾವು ಇಲ್ಲಿಯವರೆಗೂ ಬಳಸಿಕೊಂಡಿರತಕ್ಕಂಥ ನೀರು, ಮುಂದೆ ನಾವು ಏನು ಮಾಡಬೇಕು ಎನ್ನತಕ್ಕಂಥಾದ್ದು ನಮ್ಮ ಮುಂದೆ ಇರತಕ್ಕಂಥಾ ಸವಾಲು. 729 ಟಿ.ಎಂ.ಸಿ. ನೀರಿನಲ್ಲಿ ನಾವು ಇಲ್ಲಿಯವರೆಗೂ 376 ಟಿ.ಎಂ.ಸಿ. ನೀರನ್ನು ಮಾತ್ರ ಬಳಕೆ ಮಾಡಿಕೊಂಡಿದ್ದೇವೆ. 729 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ, 534 ಟಿ.ಎಂ.ಸಿ. ನೀರನ್ನು ಸ್ಟೋರೇಜ್ ಮಾಡಬೇಕಾಗುತ್ತದೆ. ಅದರೊಳಗೆ ನಾವು 376 ಟಿ.ಎಂ.ಸಿ. ನೀರನ್ನು ಮಾತ್ರ ಸ್ಟೋರೇಜ್ ಮಾಡಿದ್ದೇವೆ. ಇನ್ನು ಉಳಿದಂಥ 158 ಟಿ.ಎಂ.ಸಿ. ನೀರನ್ನು ಸ್ಟೋರೇಜ್ ಮಾಡಬೇಕಾಗುತ್ತದೆ. ಇದಕ್ಕೆ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು 158 ಟಿ.ಎಂ.ಸಿ. ನೀರನ್ನು ಸ್ಟೋರೇಜ್ ಮಾಡಿದರೆ 729 ಟಿ.ಎಂ.ಸಿ. ನೀರಿನ ಪೂರ್ಣ ಹಕ್ಕನ್ನು ನಾವು ಕಾಯ್ದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥಾದನ್ನು ಈ ಸಂದರ್ಭದಲ್ಲಿ ನಾನು ಸೂಕ್ಷ್ಮವಾಗಿ ತಿಳಿಸಲು ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ನಾವು ಒಟ್ಟು ಎಲ್ಲಾ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಯೋಜನೆಗಳಿಗೆ ಸಂಬಂಧಪಟ್ಟಂತೆ ನಾವು ಖರ್ಚು ಮಾಡಬೇಕಾಗಿರತಕ್ಕಂಥ ಹಣ ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾನು ಏನು ಓದಿದ್ದೇನೆ ಅವುಗಳನ್ನು ಮುಗಿಸುವುದಕ್ಕೆ ಸುಮಾರು 7245 ಕೋಟಿ ರೂಪಾಯಿಗಳು ಬೇಕು ಎನ್ನತಕ್ಕಾಂಥಾದ್ದು ನಮ್ಮ ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿಯ ಒಂದು ಹಿನ್ನಲೆಯಲ್ಲಿ ನಾನು ಈ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ಯು.ಕೆ.ಪಿ. ಸ್ಟೇಜ್ ಒಂದು ಮತ್ತು ಯು.ಕೆ.ಪಿ. ಸ್ಟೇಜ್ 2 ಇವೆರಡನ್ನು ಪೂರ್ಣ ಮಾಡಲಿಕ್ಕೆ ಅಂದರೆ ಒಟ್ಟು 183 ಟಿ.ಎಂ.ಸಿ. ನೀರನ್ನು ಏನು ಅಪ್ಪರ್ ಕೃಷ್ಣಾ ಸ್ಟೇಜ್ 1 ಮತ್ತು ಸ್ಟೇಜ್ 2ರಲ್ಲಿ ಬಳಕೆ ಮಾಡಿಕೊಳ್ಳಬೇಕೋ ಆ ಎರಡೂ ಘಟ್ಟಗಳಲ್ಲಿ ಕೆಲಸವನ್ನು ಸಂಪೂರ್ಣವಾಗಿ ಪೂರೈಸುವುದಕ್ಕೆ 4612 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನತಕ್ಕಂಥ ಒಂದು ವರದಿಯನ್ನು ನಮ್ಮ ಇಲಾಖೆಯ ತಾಂತ್ರಿಕ ತಜ್ಞರು ನಮಗೆ ಕೊಟ್ಟಿದ್ದಾರೆ. ಇವತ್ತು ನಾವು ಯು.ಕೆ.ಪಿ.ಗೆ ಸೀಮಿತವಾಗಿ ಮಾತನಾಡುವುದಾದರೆ, 2634 ಕೋಟಿ ರೂಪಾಯಿಗಳು ಬೇಕು ಎನ್ನತಕ್ಕಂಥ ಮಾತನ್ನು ಅವರೇ ಹೇಳಿದ್ದಾರೆ. ಇನ್ನು ಗೋದಾವರಿ ಬೇಸಿನ್‌ನಲ್ಲಿ ಇರತಕ್ಕಂಥ ಕಾರಂಜ, ಚುರುಕಿನಾಲ ಮಾಂಜ್ರ ಇವುಗಳಿಗೆ 180 ಕೋಟಿ ರೂಪಾಯಿಗಳು ಬೇಕು ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳುತ್ತಾರೆ. ಕಾವೇರಿ ಬೇಸಿನ್‌ನಲ್ಲಿ ಇರತಕ್ಕಂಥ ಯೋಜನೆಗಳನ್ನು ಪೂರೈಸುವುದಕ್ಕೆ ಏನು ನಾವು ಮಾಕ್ಸಿಮಮ್ 24 ಲಕ್ಷ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತೇವೆಂದು ಲೆಕ್ಕ ಹೇಳಿದ್ದೇವೆಯೋ, ಇದಕ್ಕೆ 1515 ಕೋಟಿ ರೂಪಾಯಿಗಳ ಹಣ ಬೇಕು ಎನ್ನುವುದು ನಮ್ಮ ಅಧಿಕಾರಿಗಳ ಅಭಿಪ್ರಾಯ. ಒಟ್ಟು ನಮಗೆ ಬೇಕಾಗುವಂಥಾದ್ದು 7246 ಕೋಟಿ ಕೃಷ್ಣಾ ಬೇಸಿನ್‌ಗೆ, ಕಾವೇರಿ ಬೇಸಿನ್‌ಗೆ 1515 ಕೋಟಿ ಅಂದರೆ, ಒಟ್ಟು 9800 ಕೋಟಿ ಅಥವಾ 10 ಸಾವಿರ ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಮ್ಮ ಇಲಾಖಾ ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ. ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ನಾವು ಗಮನದಲ್ಲಿಟ್ಟುಕೊಂಡಾಗ ಯಾರು ಎಷ್ಟೇ ಮಾತನಾಡಿದರೂ ಇವತ್ತು ನಾನು ಕಾವೇರಿ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಇವತ್ತು ಬೇರೆ ಬೇರೆ ಘಟ್ಟಗಳಲ್ಲಿ ನಿರ್ಣಯಗಳು

ಆಗಬೇಕಾಗಿರುವುದರಿಂದ ಕಾವೇರಿ ನದಿಯ ನೀರಿನ ವಿಷಯದ ಬಗ್ಗೆ ಚರ್ಚೆ ಮಾಡಿ ಈ ಸದನದ ಕಾಲವನ್ನು ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಬರೀ ಕೃಷ್ಣಾ ಜಲಾನಯನ ಪ್ರದೇಶದಲ್ಲಿರತಕ್ಕಂಥ ಕಾಮಗಾರಿಗಳ ಬಗ್ಗೆ ಮಾತ್ರ ಈ ಸಂದರ್ಭದಲ್ಲಿ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಲು ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಸ್ಟೇಜ್ 1 ರಲ್ಲಿ ಫೇಜ್ 1 ಮುಗಿಸಿದ್ದೇವೆ. ಅದಕ್ಕೆ ಸುಮಾರು 700 ಕೋಟಿ ರೂಪಾಯಿಗಳು ಖರ್ಚು ಮಾಡತಕ್ಕಂಥ ಹಣ. ಅದರಲ್ಲಿ 693 ಕೋಟಿ ರೂಪಾಯಿ ಖರ್ಚಾಗಿದೆ. ಇನ್ನು ಖರ್ಚು ಮಾಡಬೇಕಾಗಿರುವುದು 7 ಕೋಟಿ ಮಾತ್ರ ಉಳಿದಿದೆ. ಅದರಲ್ಲಿ ನಾವು ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿರತಕ್ಕಂಥಾದ್ದು 1.09 ಲಕ್ಷ ಹೆಕ್ಟೇರ್‌ಗೆ ನೀರು ಕೊಡತಕ್ಕಂಥ ನಿರ್ಣಯ ಮಾಡಿದ್ದೇವೆ. ಸ್ಟೇಜ್ 1 ಫೇಜ್ 2 1572 ಕೋಟಿ ಎಸ್ಟಿಮೇಟ್ ಇದೆ. ಖರ್ಚು ಮಾಡಿರತಕ್ಕ 845 ಕೋಟಿ. ಇನ್ನು 627 ಕೋಟಿ ಹಣವನ್ನು ನಾವು ಫೇಜ್ 2ಕ್ಕೆ ಖರ್ಚು ಮಾಡಬೇಕಾಗುತ್ತದೆ. ಇದನ್ನು ನಾವು ಪೂರ್ಣ ಮಾಡಿದರೆ 1.45 ಲಕ್ಷ ಹೆಕ್ಟೇರ್‌ಗೆ ನೀರು ಕೊಡಲು ಸಾಧ್ಯವಾಗುತ್ತದೆ. ಇಲ್ಲಿಯವರೆಗೂ ನಾವು ಫೇಜ್ 2ರಲ್ಲಿ ಏನು ನೀರನ್ನು ಒದಗಿಸಿದ್ದೇವೆಯೋ 0.84 ಲಕ್ಷ ಹೆಕ್ಟೇರ್ ಅಂದರೆ ಒಂದು ಲಕ್ಷಕ್ಕೆ 0.15 ಕಡಿಮೆ ಇದೆ. ಅಂದರೆ 85 ಸಾವಿರ ಹೆಕ್ಟೇರ್‌ಗಳಿಗೆ ಫೇಜ್ 2ರಲ್ಲಿ ನೀರನ್ನು ಕೊಡಲಾಗಿದೆ. ಇನ್ನು 3ನೇ ಫೇಜ್‌ನಲ್ಲಿ 1533 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ಖರ್ಚು ಮಾಡಿರತಕ್ಕಂಥ ಹಣ 23 ಕೋಟಿ. ಇದರಲ್ಲಿ ಇನ್ನು ಉಳಿದಿರತಕ್ಕಂಥ 1510 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ. ಇದು ಸ್ಟೇಜ್ 1ಗೆ ಖರ್ಚು ಮಾಡಬೇಕಾಗಿರತಕ್ಕಂಥ ಬಾಕಿ ಹಣ 2144 ಕೋಟಿ. ಸ್ಟೇಜ್ 2ಕ್ಕೆ 2468 ಕೋಟಿ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಒಟ್ಟು 4612 ಕೋಟಿ ಹಣ ಯು.ಕೆ.ಪಿ. ಒಂದಕ್ಕೆ ಸ್ಟೇಜ್ 1 ಮತ್ತು ಸ್ಟೇಜ್ 2 ಮತ್ತು 3. ಇನ್ನು ಸ್ಟೇಜ್ 2ಕ್ಕೆ ಖರ್ಚು ಮಾಡಬೇಕಾಗಿರತಕ್ಕಂಥ ಹಣ 4012 ಕೋಟಿ ರೂಪಾಯಿಗಳು ಹಿಂದಿನ ಒಂದು ದರದ ಪ್ರಕಾರ ನಾವು ಖರ್ಚು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಈ ಒಂದು ಜಲಾನಯನ ಪ್ರದೇಶದಲ್ಲಿರುವ ಸಂಪೂರ್ಣ ನೀರನ್ನು ಬಳಕೆ ಮಾಡಿಕೊಳ್ಳಬೇಕಾದರೆ ಸುಮಾರು 724 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದು ಶಿವಮೊಗ್ಗ ಜಿಲ್ಲೆಯಲ್ಲಿ ಬರತಕ್ಕಂಥ ಯೋಜನೆಗಳು ಇರಬಹುದು ಚಿತ್ರದುರ್ಗ ಜಿಲ್ಲೆಯಲ್ಲಿ ಬರತಕ್ಕಂಥ ಅಥವಾ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರತಕ್ಕಂಥ ಯೋಜನೆಗಳು ಇರಬಹುದು, ಗುಲ್ಬರ್ಗ ಇರಬಹುದು ಬಿಜಾಪುರ ಇರಬಹುದು. ಮೂರನೆಯ ಎರಡು ಭಾಗ ಇವತ್ತು ಕರ್ನಾಟಕದ ಜಲಾನಯನ ಪ್ರದೇಶ ನಮ್ಮ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಈ ವಿಷಯದ ಬಗ್ಗೆ ಯಾರು ಎಷ್ಟು ಖರ್ಚು ಮಾಡಿದ್ದಾರೆ ಏನು ಎನ್ನತಕ್ಕಂಥದ್ದರ ಬದಲಾಗಿ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ, ಈ ಒಂದು ವರ್ಷದಲ್ಲಿ ಏನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅದನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಕೃಷ್ಣಾ ಜಲ ಭಾಗ್ಯ ನಿಗಮದಿಂದ 800 ಕೋಟಿ ರೂಪಾಯಿಗಳನ್ನು ಸಾಲ ಎತ್ತುತ್ತೇವೆಂದು ಹೇಳಿದ್ದೆವು. ಈ ಸಾಲ ಎತ್ತುವುದಕ್ಕೆ ಹಲವಾರು ಆತಂಕಗಳು ಮತ್ತು ಅಡ್ಡಿಗಳು ಎದುರಾದವು. 1995ರ ಫೆಬ್ರವರಿ ತಿಂಗಳಲ್ಲಿ ನಡೆದ ಕೃಷ್ಣ ಜಲ ಭಾಗ್ಯ ನಿಗಮದ ಪ್ರಥಮ ಸಭೆಯಲ್ಲಿ

800 ಕೋಟಿ ರೂಪಾಯಿಗಳನ್ನು ಜೋಡಿಸಬೇಕೆಂದು ಅರ್ಥ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಇನ್ನು ಉಳಿದ 200 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಲಾಗುತ್ತದೆಂದು ತಿಳಿಸಲಾಗಿತ್ತು. ಆದರೆ, ಕೃಷ್ಣ ಜಲ ಭಾಗ್ಯ ನಿಗಮದ ಮೂಲಕ 800 ಕೋಟಿ ರೂಪಾಯಿಗಳನ್ನು ಎತ್ತುವುದಕ್ಕೆ ಯಾವ ಯಾವ ನಿಯಮಗಳು ಅಡ್ಡಿ ಬರುತ್ತವೆ? ಮತ್ತು ಅವುಗಳನ್ನು ನಿವಾರಣೆ ಮಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆಂದು ಹಿರಿಯ ಅಧಿಕಾರಿಗಳು ಆ ಸಂದರ್ಭದಲ್ಲಿ ನನಗೆ ತಿಳಿಸಲಿಲ್ಲವೆನ್ನುವ ಬಗ್ಗೆ ವಸ್ತು ಸ್ಥಿತಿಯನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಎಲ್ಲಾ ಕಾನೂನುಗಳು ಮತ್ತು ನಿಯಮಗಳನ್ನು ಪಾಲನೆ ಮಾಡಿ ಮೊದಲ ಪ್ರೈವೇಟ್ ಪ್ಲೇಸ್‌ಮೆಂಟ್ ಮಾಡಿದ್ದುದು ಅಕ್ಟೋಬರ್ 1995ರಲ್ಲಿ. ಆದರಿಂದ ನಮಗೆ ಸಿಕ್ಕಿದ್ದುದು 183 ಕೋಟಿ ರೂಪಾಯಿಗಳು. ಆಮೇಲೆ, ರಿಲಿಜಿಯಸ್ ಇಂಡೋಮೆಂಟ್‌ನಿಂದ ಬಹಳ ಹಣ ಬಂತು ಎಂದು ಕೆಲವರು ವಾದ ಮಂಡಿಸಿದ್ದಾರೆ. ಅದರಿಂದ ಬಂದಿರತಕ್ಕಂಥಾದ್ದು ಕೇವಲ 2 ಪರ್‌ಸೆಂಟ್. ಅಂದರೆ 5 ಕೋಟಿ ರೂಪಾಯಿ ಮಾತ್ರವೆಂದು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದಾದಮೇಲೆ 150 ಕೋಟಿ ರೂಪಾಯಿಗಳನ್ನು ಪ್ರೈವೇಟ್ ಪ್ಲೇಸ್‌ಮೆಂಟ್‌ಗೆ ಇಟ್ಟಿದ್ದೆವು. ನಿಯಮಗಳ ಪ್ರಕಾರ 20 ಪರ್‌ಸೆಂಟ್ ಹಣವನ್ನು ಹೆಚ್ಚಿಗೆ ಇಟ್ಟುಕೊಂಡು, ಬಾಕಿ ಹಣವನ್ನು ವಾಪಸ್ ಕೊಡಬೇಕಾಗಿ ಬಂತು. ಅದಾದಮೇಲೆ ಪಬ್ಲಿಕ್ ಇಷ್ಯೂ ಮುಖಾಂತರ 250 ಕೋಟಿ ರೂಪಾಯಿಗಳನ್ನು ರೈಸ್ ಮಾಡಬೇಕು, ಅದರಿಂದ 20 ಪರ್‌ಸೆಂಟ್ ಹೆಚ್ಚು ಬರುತ್ತದೆ. 300 ಕೋಟಿ ರೂಪಾಯಿಯವರೆಗೆ ಹಣವನ್ನು ನಾವು ಗಳಿಕೆ ಮಾಡಿಕೊಳ್ಳಬಹುದೆಂದು ನಿರ್ಣಯ ತೆಗೆದುಕೊಂಡೆವು. ಇದಕ್ಕಾಗಿ ನಮ್ಮ ಅಧಿಕಾರಿಗಳು ನವೆಂಬರ್ 1995 ರಿಂದಲೇ ಅನುಮತಿ ಪಡೆದುಕೊಳ್ಳಲು ಪ್ರಯತ್ನ ಮಾಡಿದರು. ಆರ್.ಬಿ.ಐ.ನಿಂದ ನಮಗೆ ಅಪ್ರೂವಲ್ ಸಿಕ್ಕಿದ್ದು 22ನೇ ಫೆಬ್ರವರಿ 1996ರಲ್ಲಿ. ಸೆಬಿ ಯವರು ಕ್ಲಿಯರೆನ್ಸ್ ಕೊಟ್ಟಿದ್ದು 15 ಜನವರಿ 1996. ಮಾರ್ಚ್ 27ಕ್ಕೆ ಇಶ್ಯೂವನ್ನು ಬಿಡುಗಡೆ ಮಾಡುತ್ತೇವೆ. ಇದರಿಂದ ಸುಮಾರು 300 ಕೋಟಿ ರೂಪಾಯಿಗಳಷ್ಟು ಹಣವನ್ನು ಜೋಡಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಮೊದಲು 180 ಕೋಟಿ ರೂಪಾಯಿ ಮತ್ತು ಇದು 300 ಕೋಟಿ ರೂಪಾಯಿ ಸೇರಿ 480 ಕೋಟಿ ರೂಪಾಯಿಗಳಾಗುತ್ತವೆ. ಮತ್ತೆ 300 ಕೋಟಿ ರೂಪಾಯಿಗಳಿಗೆ 3ನೇ ಇನ್‌ಸ್ಟಾಲ್‌ಮೆಂಟ್ ಪ್ರೈವೇಟ್ ಪ್ಲೇಸ್‌ಮೆಂಟ್ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ. ಆ ಕೆಲಸಕ್ಕೆ ಮೇ ಅಥವಾ ಈ ಜೂನ್ ತಿಂಗಳಲ್ಲಿ ಕೈ ಹಾಕುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬ್ಯಾಂಕುಗಳ ಸ್ಕಾಂಡಲ್ ಆದ ಮೇಲೆ ನಿಯಮಗಳನ್ನು ಎಲ್ಲಾ ರೀತಿಯಿಂದಲೂ ಭದ್ರ ಮಾಡಿ, ಜನತೆಯು ಏನೆಂದು ಬಂಡವಾಳವನ್ನು ಹಾಕುತ್ತಾರೋ ಅದನ್ನು ಸರಿಯಾದ ರೀತಿಯಲ್ಲಿ ಕಾಯ್ದುಕೊಳ್ಳುವುದಕ್ಕೆ ಆರ್.ಬಿ.ಐ. ನವರು ಮತ್ತು ಸೆಬಿಯವರು ನಿಯಮಗಳನ್ನು ಮಾಡಿದ್ದಾರೆ. ನಾನು ಹೋದ ಸಾರಿ ಈ ಸದನದಲ್ಲಿ ಹೇಳಿದಂತೆ ಇನ್ನು ನಾಲ್ಕು ವರ್ಷಗಳಲ್ಲಿ ಕೃಷ್ಣಾ ನದಿಯಿಂದ 729 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ 7246 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಂದು ವರ್ಷಕ್ಕೆ 2 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಪೂರ್ಣ ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿ ವರ್ಷವೂ 2 ಸಾವಿರ ಕೋಟಿ ರೂಪಾಯಿಗಳನ್ನು ಕೂಡಿಸುವುದು ಖರ್ಚಿಗೆ ಎನ್ನುವುದೇ ಪ್ರಶ್ನೆ

ಇರತಕ್ಕಂಥಾದ್ದು. ಮಾತನ್ನು ಯಾವ ರೀತಿ ಬೇಕಾದರೂ ಖರ್ಚು ಮಾಡಬಹುದು, ಅದೇನು ದೊಡ್ಡ ವಿಷಯವಲ್ಲ. ಉಳಿದ 4 ವರ್ಷಗಳಲ್ಲಿ 8 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಹಣವನ್ನು ಯಾವ ರೀತಿ ಸಂಗ್ರಹಿಸಬೇಕು ಎನ್ನುವುದು ನಮ್ಮ ಮುಂದೆ ಇದೆ. ಈ ಹಣವನ್ನು ಪಬ್ಲಿಕ್ ಪ್ಲೇಸ್‌ಮೆಂಟ್ ಮತ್ತು ಪ್ರೈವೇಟ್ ಪ್ಲೇಸ್‌ಮೆಂಟ್ ಮೂಲಕ ಸಂಗ್ರಹಿಸುವುದಕ್ಕೆ ಆರ್.ಬಿ.ಐ.ನವರು, ಸೆಬಿ ಯವರು ಮತ್ತು ಗೌರ್ನಮೆಂಟ್ ಆಫ್ ಇಂಡಿಯಾದವರು ಅನುಮತಿ ಕೊಡುತ್ತಾರೆಯೇ ಎಂಬ ಬಗ್ಗೆ ವಿಚಾರ ಮಾಡಿದಾಗ, ಹಣವನ್ನು ಸಂಗ್ರಹ ಮಾಡುವುದಕ್ಕೆ ಪರ್ಮಿಷನ್ ಕೇಳುವ ಮೊದಲು ತೆಗೆದುಕೊಳ್ಳುವ ಸಾಲವನ್ನು ಮರುಪಾವತಿ ಮಾಡಲು ರಾಜ್ಯ ಸರ್ಕಾರಕ್ಕೆ ಶಕ್ತಿ ಇದೆಯೇ ಎಂಬ ಬಗ್ಗೆ ಕೇಳುತ್ತಾರೆ ಎನ್ನುವ ವಿಷಯ ಗೊತ್ತಾಯಿತು. ಬಾಂಡ್‌ಗಳ ಮೂಲಕ ಮತ್ತು ಷೇರುಗಳ ಮೂಲಕ ಹಣ ಸಂಗ್ರಹ ಮಾಡುವುದಕ್ಕೆ ರಾಜ್ಯ ಸರ್ಕಾರ ಪರ್ಮಿಷನ್ ಕೇಳಿದರೆ, ಸಂಗ್ರಹ ಮಾಡಿದ ಬಂಡವಾಳವನ್ನು ವಾಪಸ್ ಕೊಡತಕ್ಕಂಥ ಶಕ್ತಿ ರಾಜ್ಯ ಸರ್ಕಾರಕ್ಕೆ ಇದೆಯೇ? ಅದಕ್ಕಾಗಿ ಬಜೆಟ್‌ನಲ್ಲಿ ಇಂತಿಷ್ಟು ಹಣವನ್ನು ನಿಗದಿ ಮಾಡಲಾಗಿದೆಯೇ ಎಂಬುದನ್ನೆಲ್ಲಾ ನೋಡಿಕೊಂಡೇ ಅವರು ಅನುಮತಿ ಕೊಡುತ್ತಾರೆ. ಬಜೆಟ್‌ನಲ್ಲಿ ಒದಗಿಸಿರುವ 200 ಕೋಟಿ ರೂಪಾಯಿ ಜೊತೆಗೆ ಬಾಂಡ್‌ಗಳ ಮೂಲಕ ಎತ್ತುವ 800 ಕೋಟಿ ಸೇರಿ ಒಟ್ಟು 1 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿರುವುದು ಹಾಸ್ಯಾಸ್ಪದವಲ್ಲ. ಅದರ ತೀವ್ರತೆಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ 1 ವರ್ಷ 4 ತಿಂಗಳಿಂದ ಮುಖ್ಯ ಮಂತ್ರಿಯಾಗಿರುವ ದೇವೇಗೌಡ ಹೊಣೆಗಾರನೆಂದರೆ, ರಾಜ್ಯದ ಜನತೆ ನಂಬಲಿಕ್ಕೆ ಸಾಧ್ಯವಿಲ್ಲವೆಂದು ಮತ್ತು ಆ ಮಾತಿಗೆ ಜನಸಾಮಾನ್ಯರಲ್ಲಿ ಪುರಸ್ಕಾರ ಸಿಗುವುದಿಲ್ಲವೆಂದು ಅರ್ಥ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯಗಳ ಪುನರ್ ವಿಂಗಡಣಕ್ಕೆ 1956ರಲ್ಲಿ ಆಯಿತು. ಆ ಸಂದರ್ಭದಲ್ಲಿ ಘಟಪ್ರಭಾ ಮೊದಲ ಹಂತದ ಕೆಲಸ ಪ್ರಾರಂಭವಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಆ ಭಾಗದ ಬಹಳ ಜನ ಮುಖ್ಯ ಮಂತ್ರಿಗಳಾಗಿದ್ದರು. ಅದರ ಬಗ್ಗೆ ಎಲ್ಲಾ ವಿಷಯವನ್ನು ಸದನದಲ್ಲಿ ತೆರೆದಿಟ್ಟು ಯಾವ ಮನಸ್ಸನ್ನೂ ನೋಯಿಸುವುದಕ್ಕೆ ನಾನು ಸಿದ್ಧನಿಲ್ಲ. ಆದರೆ, ಒಂದು ಮಾತನ್ನು ಹೇಳುತ್ತೇನೆ, ಈ ಸರ್ಕಾರದ ಕಳಕಳಿ ಬಗ್ಗೆ, ಈ ಸರ್ಕಾರದ ಪ್ರಾಮಾಣಿಕ ಪ್ರಯತ್ನದ ಬಗ್ಗೆ ಯಾರಾದರೂ ಸಂಶಯ ವ್ಯಕ್ತಪಡಿಸಿದರೆ, ಅದು ಅವರಿಗೆ ಬಿಟ್ಟ ವಿಷಯ. ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವುದೇ ತರಹದ ಕಳಂಕವಿಲ್ಲ. ಈ ಯೋಜನೆಯಿಂದ 4 ವರ್ಷಗಳಲ್ಲಿ ನಮ್ಮ ರಾಜ್ಯದ ಹಕ್ಕಿನ ನೀರನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು 1 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿರ್ಣಯ ತೆಗೆದುಕೊಡೇವೆ ಹೊರತು, ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಈ ಸದನದಲ್ಲಿ ಯಾರೂ ಠರಾವು ಮಾಡಲಿಲ್ಲ, ನನ್ನ ಕಡೆಯವರೂ ಹೇಳಲಿಲ್ಲ, ಆ ಕಡೆಯವರೂ ಹೇಳಲಿಲ್ಲ. ಇದು ನನ್ನ ಸ್ವಯಂ ಪ್ರೇರಣೆಯಿಂದಲೇ ಹೇಳಿದಂಥ ಮಾತೆಂದನ್ನು ಸ್ಪಷ್ಟೀಕರಣ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಬಾಬಿಗಾಗಿ ಪಬ್ಲಿಕ್ ಪ್ಲೇಸ್‌ಮೆಂಟ್‌ಮೂಲಕವಾಗಲೀ, ಪ್ರೈವೇಟ್ ಪ್ಲೇಸ್‌ಮೆಂಟ್ ಮೂಲಕವಾಗಲೀ 800 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುವುದಕ್ಕೆ ಒಂದು ಪ್ಲೇಸ್‌ಮೆಂಟ್‌ನಿಂದ ಇನ್ನೊಂದು ಪ್ಲೇಸ್‌ಮೆಂಟ್‌ಗೆ ಹೋಗತಕ್ಕಂಥ ಮಧ್ಯದ ಕಾಲದಲ್ಲಿ ಯಾವ ಯಾವ ನಿಯಮಗಳಿವೆ ಆ ನಿಯಮಗಳಿಗೆ ತಕ್ಕಂತೆ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಈ ಹಣವನ್ನು ಎತ್ತತಕ್ಕಂಥ ಕಾಲದಲ್ಲಿ ಇಷ್ಟು ಹಣವನ್ನು

ಇಡುತ್ತೇವೆ, ನಮ್ಮ ಹಣಕಾಸಿನ ಶಕ್ತಿ ಏನು? ಪುನಃ ನಾವು ಅದನ್ನು ವಾಪಸ್ ಕೊಡತಕ್ಕ ವ್ಯವಸ್ಥೆ ಏನು? ಪ್ರತಿವರ್ಷವೂ ನಾವು ಅದನ್ನು ಕೊಡಬೇಕಾಗುತ್ತದೆ.

(6-00 ಪಿ ಎಂ) ಕೆಲವರು ಅದನ್ನು ಐದು ವರ್ಷಗಳಿಗೊಮ್ಮೆ ತೆಗೆದುಕೊಳ್ಳುವುದಾದರೆ ಅದರ ಬಡ್ಡಿಯನ್ನು ಮಾತ್ರ ಕೆಲವರು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇಂಥ ಎಲ್ಲಾ ವಿಷಯಗಳನ್ನು ನಾವು ಬಜೆಟ್‌ನಲ್ಲಿ ಇಡುವುದಕ್ಕೆ ಸಾಧ್ಯವೆ? ಇವೆಲ್ಲವನ್ನು ಕೂಲಂಕಷವಾಗಿ ನೋಡಿಕೊಂಡು ನಾವು ಲೆಕ್ಕ ಇಡಬೇಕು. ಇವೊತ್ತು ನಮಗೆ ರಿಸರ್ವ್ ಬ್ಯಾಂಕ್ ಮತ್ತು ಸೆಬಿಯಿಂದ ಕ್ಲಿಯರೆನ್ಸ್ ಸಿಕ್ಕುವುದಕ್ಕೆ ಸುಮಾರು ನಾಲ್ಕು ತಿಂಗಳು ವ್ಯತ್ಯಾಸವಾಯಿತು. ಇದಾದ ಮೇಲೆ ಅವಲಂಬನೆ ಮಾಡಿಕೊಂಡು ಕೆಲಸ ಮಾಡಬೇಕೇ ಹೊರತಾಗಿ, ಬೇರೆ ಯಾರ ಮೇಲೆಯು ಅವಲಂಬನೆ ಮಾಡಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ರಿಸರ್ವ್‌ಬ್ಯಾಂಕ್ ಜೊತೆಗೆ ಕರೆಸ್ಪಾಂಡೆನ್ಸ್ ಮಾಡತಕ್ಕಂಥ ಕಾಲದಲ್ಲಿ ನಮ್ಮ ಹಣಕಾಸಿನ ಇಲಾಖೆಯೇ ಆ ಕೆಲಸವನ್ನು ಮಾಡಬೇಕಾಗುತ್ತದೆ. ಅಷ್ಟೇ ಅಲ್ಲದೆ, ಕೂಡಿಸಿದ ಹಣವನ್ನು ಖರ್ಚು ಮಾಡತಕ್ಕಂಥ ಕಾಲದಲ್ಲಿಯೂ ಅಲ್ಲಿರತಕ್ಕಂಥ ಹಿರಿಯ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಬಜೆಟ್‌ನಲ್ಲಿ 200ಕೋಟಿ ಇಟ್ಟುಕೊಂಡು ಈ ಹಂತಕ್ಕೆ ಒಂದು ಯೋಜನೆಯನ್ನು ರೂಪಿಸುತ್ತೇವೆ. ಈ ನಾಲ್ಕು ತಿಂಗಳಲ್ಲಿ ಡಿಲೇ ಆಯಿತು ಎಂಬ ಮಾತನ್ನು ನಾನು ಹೇಳಿದೆ. ಆ ಹಿನ್ನಲೆಯಲ್ಲಿ ಒಂದು ತೀರ್ಮಾನಕ್ಕೆ ಬಂದರೆ, ನಮ್ಮ ಎಲ್ಲಾ ಹಿರಿಯ ಅಧಿಕಾರಿಗಳ ಸಭೆಯನ್ನು ಕರೆದು ಮಾರ್ಚ್ 31ರೊಳಗೆ 645 ಕೋಟಿ ರೂಪಾಯಿಗಳನ್ನು ನೀಡಿ ಖರ್ಚು ಮಾಡಿ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಇನ್ನು 365 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಬೇಕೆಂದು ಅವರು ಕೊಟ್ಟಂಥ ವರದಿಯ ಆಧಾರದ ಮೇಲೆ ಪ್ಲಾನ್ ಆಫ್ ಆಕ್ಷನ್ ಎಂದು ನಾವು ಹೇಳಿದ್ದೇವೆ. ಅವರು ಕೊಟ್ಟ ವರದಿಯ ಆಧಾರದ ಮೇಲೆಯೇ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ನಮ್ಮ ಎಲ್ಲಾ ಅಧಿಕಾರಿಗಳು ತಾಂತ್ರಿಕ ಅಧಿಕಾರಿಗಳು, ಹಣಕಾಸಿನ ಇಲಾಖಾ ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳು, ಮುಂತಾಗಿ ನಾವೆಲ್ಲರೂ ಕುಳಿತು ನಿರ್ಣಯವನ್ನು ತೆಗೆದುಕೊಂಡಂತಹ ಕಾಲದಲ್ಲಿ ಅವರು ಕೊಟ್ಟಂಥ ಒಂದು ಸೂಚನೆಯ ಪ್ರಕಾರ ನಾಲ್ಕು ತಿಂಗಳುಗಳ ಮೇಲೆ ಈ ಹಣವನ್ನು ಸಂಗ್ರಹಣೆ ಮಾಡತಕ್ಕ, ಥದ್ದರಲ್ಲಿ ವಿಳಂಬವಾಯಿತು. ಆ ಹಿನ್ನಲೆಯಲ್ಲಿ 645 ಕೋಟಿ ರೂಪಾಯಿಗಳನ್ನು ಮಾರ್ಚ್ 31ರೊಳಗಾಗಿ ಖರ್ಚು ಮಾಡುವುದು ಎಂದು ಮೊದಲನೇಯ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಹಣಕ್ಕೆ ತೊಂದರೆ ಇದೆ ಎಂದು ನಾವು ವಾದ ಮಾಡುವುದಕ್ಕೆ ಹೋಗುವುದಿಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಕಾರಣ? ಟೆಂಡರ್ ಕರೆಯಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡೆವು. ಇದಕ್ಕೆ ಹೊಣೆ ಎಂಬ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಾದ ಮಾಡುತ್ತಾರೆ. ಯಾವ ಅಧಿಕಾರಿ ಹೊಣೆ ಎಂಬ ಬಗ್ಗೆ ಚರ್ಚೆ ಮಾಡುವುದರಿಂದ ಯಾವುದೇ ಉಪಯೋಗವಾಗಲಾರದು, ನಮಗೆ ಕೆಲಸವಾಗಬೇಕು. ಆದ್ದರಿಂದ ನಾನು ಆ ವಿಷಯದಲ್ಲಿ ಹೆಚ್ಚು ವ್ಯಾಖ್ಯಾನ ಮಾಡಲು ಹೋಗುವುದಿಲ್ಲ. ಆದ್ದರಿಂದ ಕೊನೆಗೆ ಒಂದು ತೀರ್ಮಾನಕ್ಕೆ ನಾವು ಬಂದೆವು. ಈ ಟೆಂಡರ್ಸ್ ಷೆಡ್ಯೂಲ್ಸ್‌ನ್ನು ಅಪ್ರೂವ್ ಮಾಡಿಸಲು ಸುಮಾರು ಎರಡು ತಿಂಗಳುಗಳ ಕಾಲ ಬೇಕಾಗಿ ಬಂದಂಥ ಸಂದರ್ಭದಲ್ಲಿ ಅದಕ್ಕೆ ಸರಕಾರ ಪುನ: ಒಂದು ನಿರ್ಣಯವನ್ನು ಮಾಡಬೇಕಾಗಿ ಬಂತು. ಆ ನಿರ್ಣಯ ಏನೆಂದರೆ ಆ ಸ್ಥಳಕ್ಕೆ ಮತ್ತೊಬ್ಬ

ಅಧಿಕಾರಿಯನ್ನು ಬದಲಾವಣೆ ಮಾಡುವುದರ ಮುಖೇನ ಎಲ್ಲಿ ಸರಕಾರ ಈಗಾಗಲೇ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದೆಯೋ, ಆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರತಕ್ಕಂಥ ಜಾಗದಲ್ಲಿ ಟೆಂಡರ್‌ನ್ನು ಕರೆಯಬೇಕು. ಎಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿಲ್ಲವೋ ಅಂಥ ಕಡೆಯಲ್ಲಿ ಭೂಮಿಯನ್ನು ಬಿಡಿಸಿಕೊಳ್ಳತಕ್ಕಂಥಾದ್ದು, ನಾವು ಕಂಟೆಂಟ್ ಅವಾರ್ಡ್‌ನ್ನು ಮುಂದೆ ಮಾಡತಕ್ಕಂಥಾದ್ದಾರೂ ಪೊಸಿಶನ್ ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡತಕ್ಕಂಥಾದ್ದರ ಬಗ್ಗೆ ನಾವು ಷರತ್ತು ಹಾಕಿ, ಆ ಒಂದು ಷರತ್ತಿನ ಮೇಲೆ ನಾಲ್ಕು ಜನ ಹಿರಿಯ ಅಧಿಕಾರಿಗಳ ಒಂದು ಸಮಿತಿಯನ್ನು ಟೆಕ್ನಿಕಲ್ ಕಮಿಟಿ ಚೇರ್ಮನ್ ಇದ್ದಾರೆ. ನಮ್ಮ ಇನ್ನೊಬ್ಬ ಟೆಕ್ನಿಕಲ್ ಕಮಿಟಿಯ ಮೆಂಬರ್ ಕೂಡ ಒಬ್ಬರು ಇದ್ದಾರೆ. ಹಾಗೆಯೇ ಕೃಷ್ಣಾ ಜಲಭಾಗ್ಯ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್ ಕೂಡ ಇದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಲ್ಚಿಸುವುದೇನೆಂದರೆ, ಆ ಒಂದು ನಿರ್ಣಯವನ್ನು ಮಾಡುವಾಗಲೂ ಕೂಡ ಪತ್ರಿಕೆಗಳಲ್ಲಿ ಅಡ್ವರ್ಟೈಸ್ ಮಾಡಿದ್ದೇವೆ. ಪೀಸ್ ವರ್ಕ್‌ನಲ್ಲಿ ಕೊಟ್ಟಿದ್ದಲ್ಲ ನಾವು, ಪೀಸ್‌ವರ್ಕ್‌ನಲ್ಲಿ ಕೊಡಬೇಕೆಂದು ಮಾಡಿದ್ದರೂ ಈ ಎಲ್ಲಾ ಷರತ್ತುಗಳನ್ನು ಹಾಕಿದ್ದೇವೆ.

'Direct execution of canal work in UKP.'

ಇರುವ ರೀತಿಯಲ್ಲಿಯೇ ಎಲ್ಲಾ ಷರತ್ತುಗಳನ್ನು ಹಾಕಿದ್ದೇವೆ.

" Registration certificate: Certificate shall have the details of the work execution by them.

Certificate of the annual turnover till the year 1994-95.

List of machinery presently available with them for executing the proposed work.

List of on-going works....

The applications addresed to the Managing Director, Krishna Jala Bhagya Nigama, Almatti along with theablove details should be submitted by 18.11.95. Applications received after this will not be considered.

ಇಂಗ್ಲೀಷ್, ಕನ್ನಡ, ಎಲ್ಲಾ ಪತ್ರಿಕೆಗಳಲ್ಲಿಯೂ ನಾವು ಒಂದು ನೋಟಿಫಿಕೇಶನ್‌ನ್ನು ತೆಗೆದು, ನಾಲ್ಕು ಜನರು ಹಿರಿಯ ಅಧಿಕಾರಿಗಳು ಕುಳಿತು ಒಂದು ನಿರ್ಣಯವನ್ನು ಮಾಡಿದರು. 60, 63, 64, 65ಗಳನ್ನು ಕ್ವಾಲಿಫೈಡ್ ಟೆಂಡರ್ಸ್ ಎಂದು ಆ ಕಂಟ್ರಾಕ್ಟ‌ರ್ಸ್‌ನ ಲಿಸ್ಟ್‌ನ್ನು ಮೊದಲ ಹಂತದಲ್ಲಿ ಅಪ್ರೂವ್ ಮಾಡಿದರು. ಅಪ್ರೂವ್ ಮಾಡಿದ ಮೇಲೆ ನಾವು ಅವರಿಗೆ ಎರಡೂವರೆ ಕೋಟಿ ರೂಪಾಯಿವರೆಗೆ ಒಂದೊಂದು ಕಿ.ಮೀ. ವರ್ಕ್‌ನ್ನು ಕೊಡಬೇಕೆಂದು ನಿರ್ಣಯ ಮಾಡಿದೆವು.

ಇಶ್ಯೂ ಮಾಡಿದ್ದೇವೆ. ಯಾವ ಕಾರಣಕ್ಕೆ ಮಾಡುತ್ತಿದ್ದೇವೆ ಅಂದರೆ ಒಂದು ಕಡೆ ಭೂಮಿ ಇಲ್ಲ, ಅಲ್ಲಿ, ಭೂಮಿ ಅಕ್ವಾಯರ್ ಮಾಡಿರತಕ್ಕಂಥಾದ್ದು ಬೇರೆ, ಆ ಬಗ್ಗೆ ದೊಡ್ಡ ಚರ್ಚೆ ಮಾಡುವುದು ಬೇಡ. ಅಕ್ವಾಯರ್ ಮಾಡಿರತಕ್ಕಂಥಾದ್ದರಲ್ಲಿ ನಡೆದಿರತಕ್ಕಂಥ ಎಲ್ಲಾ ವಿಚಾರಗಳು... ಅದರ ಬಗ್ಗೆ ನಾವು ಹೇಳಬೇಕಾಗಿಲ್ಲ. ಎಲ್ಲಾ ಕಾಲದಲ್ಲಿಯೂ ನಡೆದಿದೆ. ಯಾವುದೇ ಒಂದು ಕಾಲಕ್ಕೆ

ಸೀಮಿತವಾಗಿದೆ ಎಂದು ಹೇಳಲು ನಾವು ಸಿದ್ಧನಿಲ್ಲ. ನಡೆಯತಕ್ಕಂಥ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಅತೀ ವೇಗದಲ್ಲಿ ಮಾಡಬೇಕೆಂದು ಹೇಳಿ ಆ ಕಂಟ್ರಾಕ್ಟರ್‌ಗಳೇ ಭೂಮಿಯನ್ನು ಭೂ ಮಾಲೀಕರಿಂದ ಕೆಲಸ ಮಾಡತಕ್ಕಂಥಾದ್ದರ ಬಗ್ಗೆ ಅವರ ಅನುಮತಿಯನ್ನು ಪಡೆದುಕೊಳ್ಳಬೇಕೆನ್ನತಕ್ಕಂಥ ವಿಚಾರವನ್ನು ಕೂಡ ಈ ಷರತ್ತಿನಲ್ಲಿ ಹಾಕಿದ್ದೇವೆ. ಏನು ನೋಟಿಫಿಕೇಶನ್ ಹಾಕಿದ್ದೇವೋ ಅದರಲ್ಲಿ ಷರತ್ತಗಳನ್ನು ಹಾಕಿದ್ದೇವೆ. ಇದರ ಉದ್ದೇಶ ಏನು? ಇದರ ಉದ್ದೇಶ ನಾವು ಹದಿನೇಳುವರೆ ರೂಪಾಯಿಗಳ ಬಡ್ಡಿಯನ್ನು ಕೊಟ್ಟು ಇವೊತ್ತು ಪ್ರೈವೇಟ್‌ಪ್ಲೇಸ್‌ಮೆಂಟ್‌ನಲ್ಲಿ ಇರಬಹುದು, ಪಬ್ಲಿಕ್‌ಪ್ಲೇಸ್‌ಮೆಂಟ್‌ನಲ್ಲಿ ಇಡಬಹುದು, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಡ್ಡಿಯನ್ನು ಕೊಟ್ಟು ಹಣವನ್ನು ಎತ್ತುತ್ತಾ ಇದ್ದೇವೆ. ಆ ಹಣಕ್ಕೆ ಪ್ರತಿದಿನವೂ 10- 12 ಲಕ್ಷ ರೂ.ಗಳಷ್ಟು ಬಡ್ಡಿ ಬರುತ್ತದೆ ಎನ್ನತಕ್ಕಂಥ ಅರಿವೂ ಕೂಡ ನಮಗೆ ಇದೆ. ಅದರಿಂದಲೇ ಒಬ್ಬ ಅಧಿಕಾರಿ ಟೆಂಡರ್ಸ್ ಷೆಡ್ಯೂಲ್ಸ್‌ನ್ನು ಅಪ್ರೂವ್ ಮಾಡಲಿಕ್ಕೆ ಎರಡು ತಿಂಗಳು ತೆಗೆದುಕೊಂಡ - ಈ ಎಲ್ಲಾ ನಿರ್ಣಯಗಳ ಹಿನ್ನಲೆಯಲ್ಲಿ ನಾವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿ ಬಂತು. ಇವೊತ್ತು 130 ಕಿ.ಮಿೂ. ನಾಲೆಯಲ್ಲಿ ಅತ್ಯಂತ ವೇಗದಲ್ಲಿ ಕೆಲಸ ನಡೆಯುತ್ತಾ ಇದೆ ಎಂಬುದನ್ನು ಹೇಳಬಯಸುತ್ತೇನೆ. ವಿಳಂಬವಾಯಿತು ಎಂಬುದು ನಿಜ. ಆದರೆ ಹಿಂದಿನ ವರ್ಷ ಎಷ್ಟು ಖರ್ಚು ಮಾಡಿದ್ದಾರೆ? ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ? ಮಾನ್ಯ ವೀರೇಂದ್ರಪಾಟೀಲ್‌ರವರು ಆ ಭಾಗದವರೇ ಮುಖ್ಯ ಮುಂತ್ರಿಯಾಗಿದ್ದವರು ಎಷ್ಟು ಖರ್ಚು ಮಾಡಿದ್ದರು? ನಾವು ವಿಳಂಬ ಮಾಡಿದ್ದೇವೆ. ಆದರೆ ವಿಳಂಬ ಮಾಡಿದ್ದರೂ ಕೂಡ ಇವೊತ್ತು 450-460 ಕೋಟಿ ರೂಗಳಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಆದರೆ ಅದೇ ಭಾಗದವರು ಇರತಕ್ಕಂಥ ಕಾಲದಲ್ಲಿ 230-240 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 450-460 ಕೋಟಿ ಹಣವನ್ನು ಮಾರ್ಚ್ 31ರೊಳಗೆ ಖರ್ಚು ಮಾಡವುದಾದರೆ, ಈ ಎಲ್ಲಾ ಅಡೆತಡೆಗಳನ್ನು ನಿವಾರಣೆ ಮಾಡಿಕ್ಕೊಬೇಕು. ಇವೊತ್ತು ಈ ಕೆಲಸದಲ್ಲಿ ನಮಗೆ ತಾತ್ಸಾರ ಇದೆ ಎಂಬ ಮಾತನ್ನು ಆಡುವುದಾದರೆ, ಅದಕ್ಕೆ ಜನತೆಯಿಂದ ಮಾನ್ಯತೆ ಸಿಗುತ್ತದೆ ಎನ್ನುವ ಬಗ್ಗೆ ನನಗೆ ವಿಶ್ವಾಸವಿಲ್ಲ.ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. 130 ಕಿ.ಮಿೂ.ನಲ್ಲಿ ಏನು ಕೆಲಸ ನಡೆಯುತ್ತಿದೆ ಅದನ್ನು ನೋಡಲು ಸದನದ ಎಲ್ಲಾ ಸದಸ್ಯರನ್ನು ಕರೆದುಕೊಂಡು ಹೋಗಿ ತೋರಿಸಲು ಸಿದ್ಧನಿದ್ದೇನೆ. ಎಲ್ಲಾ ಸದಸ್ಯರೂ, ವಿರೋಧ ಪಕ್ಷದ ನಾಯಕರುಗಳು ಸೇರಿ ಎಲ್ಲರೂ ಒಟ್ಟಿಗೆ ಹೋಗಿ ನೋಡೋಣ. ಇದರಲ್ಲಿ ಯಾವ ವಂಚನೆಯೂ ಇಲ್ಲ. 130 ಕಿ.ಮಿ. ಪ್ರದೇಶದಲ್ಲಿ ಕೆಲಸವು ಯಾವ ವೇಗದಲ್ಲಿ ನಡೆಯುತ್ತಾ ಇದೆ, ಕೆಳಗೆ ನಡೆಯುತ್ತಾ ಇದೆ ಎಂಬುದನ್ನು ತಾವುಗಳೇ ನೋಡಬಹುದು. ತಾವುಗಳು ನೋಡಿದ ಮೇಲೆ, ಕೆಲಸ ವಿಳಂಬವಾದರೂ ಕೂಡ ಇವೊತ್ತು ಕೆಲಸವು ಅತ್ಯಂತ ವೇಗದಲ್ಲಿ ಪ್ರಾರಂಭವಾಗಿದೆ ಎಂಬ ಮಾತನ್ನು ನನ್ನ ಎಲ್ಲಾ ಸದಸನದ ಗೌರವಾನ್ವಿತ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇದರಲ್ಲಿ ಯಾವ ಮುಚ್ಚುಮರೆಗಳು ಇಲ್ಲ. ಎಲ್ಲಾ ವಿವರಗಳನ್ನು ಕೊಡಲು ಕೂಡ ನಾವು ಸಿದ್ಧನಿದ್ದೇನೆ.

ಅಧ್ಯಕ್ಷರೇ: ಒಟ್ಟು 40 ಕಿ.ಮೀ.ವರೆಗೆ ಎನ್‌ಆರ್‌ಬಿಸಿ ಕೆಲಸ ನಡೆಯುತ್ತಿದೆ. 64ರಿಂದ 120 ಕಿ.ಮೀ. ಇಂಡಿ ಬ್ಯಾಂಕ್‌ನಾಲೆ ಕೆಲಸ ನಡೆಯುತ್ತಿದೆ. ಜೇವರ್ಗಿ ಬ್ಯಾಂಕ್‌ನಲ್ಲಿ 19ರಿಂದ 50 ಕಿ.ಮೀವರೆಗೂ ಕೆಲಸ ನಡೆಯುತ್ತಿದೆ. ಈ ಕೆಲಸಗಳು ಶರವೇಗದಿಂದ ನಡೆಯುತ್ತಿವೆಯೆಂದು

ಈಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಹಿಂದೆ ಸನ್ನಿವೇಶ ಹೇಗಿತ್ತು ಇವತ್ತು ಒಂದಲ್ಲ ಎರಡಲ್ಲ ನೂರಾರು ಮೆಶಿನರೀಸ್ ಇವೆ, ಅವು 130 ಕಿ.ಮೀ ಉದ್ದದ ಕೆಲಸ ಮಾಡುತ್ತಿರುವುದನ್ನು ಕಣ್ಣಿಂದ ನೋಡಬಹುದು.

ನಾನು ಆ ಭಾಗದಲ್ಲಿ ಎರಡು ಸಲ ಹೋಗಿದ್ದೆ, ಜನಗಳ ಮನಸ್ಸಿನಲ್ಲಿರುವ ಭಾವನೆಗಳೇನೆಂದು ಅರ್ಥ ಮಾಡಿಕೊಂಡಿದ್ದೇನೆ. ಅದರ ಬಗ್ಗೆ ದೊಡ್ಡ ವ್ಯಾಖ್ಯಾನ ಬೇಕಾಗಿಲ್ಲ, ಜನರೇ ತೀರ್ಮಾನ ಮಾಡುವಂತಹ ಕಾಲ ಬರುತ್ತದೆ. ನಾನು ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ. ಈಸಂದರ್ಭದಲ್ಲಿ ಇಷ್ಟೇ ಹೇಳಲಿಕ್ಕೆ ಇಷ್ಟಪಡುತ್ತೇನೆ: ಒಂದು ಟೆಂಡರ್ ಕರೆಯುತ್ತಾರೆ. ಇಲ್ಲಿ ಶ್ರೀಮಾನ್ ಖರ್ಗೆಯವರು ಕುಳಿತಿದ್ದಾರೆ, ಅದಕ್ಕೆ ಅವರು ಕಾರಣ ಒಂದು ನಾನು ವಾದ ಮಾಡಲು ಸಿದ್ಧನಿಲ್ಲ. ಆಲಮಟ್ಟಿ ಗೇಟ್ 12 ಮಾಟರ್ ಇಡಬೇಕೋ 15 ಮಿಟರ್ ಇಡಬೇಕೋ, ಚರ್ಚೆ ನಡೆದು ನಡೆದು, ಅದರ ಬಗೆಗೆ ನಾನೇ ಒಂದು ಪತ್ರ ಬರೆದದ್ದು ಅದು ಇಲ್ಲಿ ದಾಖಲಾತಿ ನನ್ನ ಹತ್ತಿರವೇ ಇದೆ. ನಾನು ಯಾವ ಪತ್ರ ಬರೆದೆನೋ ಅದನ್ನೇ ಉಲ್ಲೇಖ ಮಾಡಿ ಕ್ಯಾಬಿನೆಟ್‌ನಲ್ಲಿ ಚರ್ಚೆ ಯಾಗುತ್ತಿದೆ. ಇಲ್ಲಿ ಕಡತಗಳು ನಮ್ಮ ಕಡೆಗಿರುವುದರಿಂದ ಆ ಮಾತು ನೇರವಾಗಿ ಹೇಳುತ್ತಿದ್ದೇನೆ. 15 ಮಿಾಟರ್ ಗೇಟ್ ಇಡಬೇಕೆಂದು ನಾನು ಬರೆದ ಪತ್ರದ ಮೇಲೆ ಕ್ಯಾಬಿನೆಟ್ ನಿರ್ಣಯವಾಗುತ್ತದೆ. ಹಾಗೆ ನಿರ್ಣಯ ಮಾಡುವಾಗ ಆ ಗೇಟ್ ಡಿಸೈನನ್ನು ನಾವೆಲ್ಲ ಮಾಡಬೇಕು. ಒಂದು ವರ್ಷದ ಎರಡು ತಿಂಗಳಲ್ಲಿ ಜಾದೂ ಮಾಡಲಿಕ್ಕೆ ಸಾಧ್ಯವಿಲ್ಲ. 15 ಮಾಟರ್ ಗೇಟ್ ಇಡಬೇಕೆಂದು ತೀರ್ಮಾನನಿಸಿದ ಮೇಲೆ 2 ವರ್ಷ ಆ ಗೇಟ್ ಡಿಸೈನ್ ಬಗ್ಗೆ ಯಾರೂ ತಲೆಗೆಡಿಸಿಕೊಳ್ಳಲಿಲ್ಲ. ಯಾವರೀತಿ ಡಿಸೈನೆ ಇರಬೇಕು, ಏನು ಎತ್ತ ಇದರ ಬಗ್ಗೆ ಸರ್ಕಾರದ ದಾಖಲೆಗಳನ್ನು ತೆರೆದು ಇಡುತ್ತೇನೆ. ಶ್ರೀ ಖರ್ಗೆಯವರು ಹಿರಿಯರಿದ್ದಾರೆ, ನೋಡಲಿ ಅ ಗೇಟಿನ ಡಿಸೈನ್ ಏನು ಅಂತ ಯೋಚನೆ ಮಾಡಲಿಲ್ಲ. ನಾವು ಅಧಿಕಾರ ವಹಿಸಿಕೊಂಡಿದ್ದು 11 ಡಿಸೆಂಬರೆ 1994-3 ಡಿಸೆಂಬರ್ 94ರಲ್ಲಿ ವರ್ಕಾರ್ಡರ್ ಕೊಡುತ್ತಾರೆ. ಡಿಸೈನ್ ಅಪ್ರೂವ್ ಆಗಿಲ್ಲ. ನಾನು ಆರು ವರ್ಷ ನೀರಾವರಿ ಮಂತ್ರಿಯಾಗಿದ್ದೆ. ಈಗ ಒಂದು ಕಾಲು ವರ್ಷ ನೀರಾವರಿ ಖಾತೆ ನನ್ನ ಕೈಯಲ್ಲೇ ಇದೆ. Tungabhadra Steel Co., it is a Govt of India Under/ taking. ಅದನ್ನು ಬ್ಲಾಕ್‌ಲಿಸ್ಟ್ ಮಾಡುತ್ತಾರೆ. ಯಾರಿಗೋ ಪ್ರೈವೆಟ್‌ನವನಿಗೆ ಕೊಡುತ್ತಾರೆ. ಏನಾದರೂ ಹಾಳಾಗಿಹೋಗಲಿ ಅದರ ಬಗ್ಗೆ ನಾನು ಚರ್ಚೆ ಮಾಡಲು ಹೋಗುವುದಿಲ್ಲ. ಅಧ್ಯಕ್ಷರೇ ನಾನು ಅದನ್ನೆಲ್ಲ ಕಿತ್ತು ಬಿಸಾಕಿಸಿದೆ ಅದರ ಅವಶ್ಯಕತೆ ಬೇಕಾಗಿಲ್ಲ, ತುಂಗಭದ್ರ ಸ್ಟೀಲ್ಸ್ ಏನಿದೆ ಅದಕ್ಕೇ ಕೊಡಬೇಕು, ಅದು ಕೇಂದ್ರದ ಸ್ವಾಮಕ್ಕೊಳಪಟ್ಟಿರುವ ಸಂಸ್ಥೆ. ಇತ್ತೀಚೆಗೆ ಕೊಟ್ಟಿರುವ ಎಲ್ಲ ಗೇರು ಕೊಟ್ಟಿರುವ ಎಲ್ಲ ಗೇಟುಗಳನ್ನು ನಾವು ಅವರಿಗೇ ಕೊಟ್ಟಿದ್ದೇವೆ. ಖಾಸಗಿಯವರಿಗೆ ಕೊಡುವುದಿಲ್ಲವೆಂಬ ನಿರ್ಣಯವನ್ನು ಮಾಡಿದ್ದೇವೆ. ಇತ್ತೀಚೆಗೆ ಒಂದು ಹೈಪವರ್ ಕಮಿಟಿ ಮಾಡಿ ಗೇಟು ಡಿಸೈನ್ಸ್ ಹೇಗಿರಬೇಕೆಂದು ತೀರ್ಮಾನವಾಗಿದೆ. ಇನ್ನು ನಾಳೆ ಬೆಳಿಗ್ಗೆ ಅವನು ಕ್ಲೇಂ ಹಾಕುತ್ತಾನೆ, ನೀವು ಡಿಸೈನ್ಸ್ ಕೊಡುವುದನ್ನೇ ಒಂದು ವರ್ಷ ಮಾಡಿದಿರಿ. ಅರೆ ಟೆಂಡರ್ ಕರೆದು 2 ವರ್ಷ ಇತ್ತು, ಟೆಂಡರ್ ಕರೆದ ಕಾಲದಲ್ಲಿ ಡಿಸೈನ್ ಅಪ್ರೂವ್ ಆಗಿಲ್ಲ. ಟೆಂಡರ್ ಕೊಟ್ಟಿರುವುದು 3-11-94. ನಾವು ಬಂದಮೇಲೆ ಡಿಸೈನ್ ಅಪ್ರೂವ್ ಮಾಡಿದ್ದಾರೋ ಇಲ್ಲವೋ ಎಂದು ನೋಡಿ, ಅದಕ್ಕೊಂದು ಕಮಿಟಿ ಮಾಡಿ ಒಬ್ಬ ತಜ್ಞ ಇಂಜಿನಿಯರನ್ನು ಅದಕ್ಕಾಗಿ ನೇಮಿಸಿ, ಅವರೆಲ್ಲ ಅದರ ಬಗ್ಗೆ ಪರಿಶೀಲನೆ ಮಾಡಿ ಅವರು ಮೂರುನಾಲ್ಕು ತಿಂಗಳು

ತೆಗೆದುಕೊಂಡು ಈಗ ಡಿಸೈನ್ ಅಪ್ರೂವ್ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿಯೇ ಈ ಸಹವಾಸವೇ ಬೇಡ ಅಂತ ಇತ್ತೀಚೆಗೆ ನಾವು ತೆಗೆದುಕೊಂಡ ಎಲ್ಲಾ ಗೇಟುಗಳನ್ನು ಅದು ಗೊಂಡೂರಿ ನಾಲಾ ಇರಬಹುದು ಮತ್ತೊಂದು ಇರಬಹುದು ಯಾವ್ಯಾವ ಗೇಟುಗಳಿವೆ ಅವುಗಳೆಲ್ಲವನ್ನೂ ತುಂಗಭದ್ರ ಸ್ಟೀಲ್ಸ್‌ಗೇ ಕೊಟ್ಟಿದ್ದೇವೆ. ಅಷ್ಟೇ ಅಲ್ಲ ಮತ್ತೊಂದು ಮಾತು ಹೇಳಲೇಬೇಕಾಗುತ್ತದೆ. ಮುಳವಾ ಲಿಫ್ಟ್ ಇರಿಗೇಶನ್ ಹೆಡ್‌ವರ್ಕ್ಸ್ ಡಿಸೈನ್ ಅಪ್ರೂವ್ ಆಗಿಲ್ಲ. ಅದಕ್ಕೆ ಅವರಿದ್ದಾರೆ, ಅವರ ಮೇಲೊಂದು 8- 10 ಕೋಟಿ ಖರ್ಚು ಮಾಡಿದ್ದಾರೆ. ಅದರ ಬಗ್ಗೆ ಒಂದು ಡಿಸೈನ್ ಅಪ್ರೂವ್ ಆಗಿಲ್ಲ, ಅದು ಹೇಗಿರಬೇಕೆಂದು ಕೂಡ ನಿರ್ಣಯವಾಗಿಲ್ಲ. ಎಲ್ಲಾ ವಿವರಗಳೂ ನನ್ನ ಮುಂದಿದೆ. ಇತ್ತೀಚೆಗೆ ಟೆಕ್ನಿಕಲ್ ಕಮಿಟಿಯವರನ್ನು ಕರೆಯಿಸಿ ಅದಕ್ಕೂ ಕೂಡ ಸಂಬಂಧಪಟ್ಟ ಡಿಸೈನ್‌ಗಳ ಒಂದು ಹಂತವನ್ನು ಅಪ್ರೂವ್ ಮಾಡುವ ಘಟ್ಟಕ್ಕೆ ತಂದಿದ್ದೇವೆ ಇದಕ್ಕೆಲ್ಲ ಯಾರು ಕಾರಣ? ಏಕೆ ಹೀಗೆ ಇದೆಲ್ಲ ಮಾತನಾಡಿ ಗತಿಸಿಹೋದ ವಿಷಯಗಳ ಬಗ್ಗೆ ಚರ್ಚೆಮಾಡಿ ಅನವಶ್ಯಕವಾಗಿ ಒಬ್ಬರ ಮನಸನ್ನು ಒಬ್ಬರು ಕೆಡಿಸಿಕೊಳ್ಳಬೇಕಾದ ಅವಶ್ಯಕತೆ ನನಗಂತೂ ಇಲ್ಲ. ಆದರಿಂದ ರಾಜಕೀಯ ಲಾಭ ಪಡೆಯಬೇಕಾದ ಅವಶ್ಯಕತೆ ನನಗಂತೂ ಇಲ್ಲ. ಇನ್ನೊಂದು ಅಂಗನವಾಡಿ ಸೇತುವೆ. ಯಾರೋ ಮೊನ್ನೇ ಚರ್ಚೆ ಮಾಡುತ್ತಿದ್ದರು, ಇದಕ್ಕೆ ಮಂಜೂರಾತಿ ಕೊಟ್ಟಿದ್ದು ನಾನು ನೀರಾವರಿ ಮಂತ್ರಿಯಾಗಿದ್ದಾಗ. ಇವತ್ತಿನವರೆಗೂ ಅದಕ್ಕೆ ಒಂದು ಅಂತಿಮ ಸ್ವರೂಪ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಈಗ 22 ಕೋಟಿಯಾಗಿದೆ, ಬಿ.ಎಸ್.ಪಾಟೀಲರು ಆ ಕಡೆ ಇದ್ದಾರೆಂದು ಕಾಣುತ್ತದೆ. ಆಗ 7-8 ಕೋಟಿ ಏನೋ ಇತ್ತು. ಅದಕ್ಕೆ ಕಾರಣಗಳು ಏನೇ ಇದ್ದುಕೊಂಡು ಹೋಗಲಿ. ಈಗ ಟೆಂಡರ್ ಕಾಲ್ ಮಾಡಿದ್ದೇವೆ. The Anagawadi bridge which is on the state highway was not tackled because of the defective design based on which tenders were called. ಇದರಿಂದ ಆ ಪ್ರಾಬ್ಲಂ ಆಗಿದೆ, ಇದನ್ನು ಕೂಡ ಅಂತಿಮಗೊಳಿಸುವುದಕ್ಕೆ ನಿರ್ಣಯ ಮಾಡಿದ್ದೇವೆ. ಇನ್ನು ಆಲಮಟ್ಟಿ ಗೇಟಿನ ವಿಷಯ ಹೇಳಿದ್ದಾರೆ, ಅದರ ಬಗ್ಗೆ, ಗೇಟ್ ಡಿಸೈನ್ ಬಗ್ಗೆ ಒಂದು ತೀರ್ಮಾನ ಮಾಡಿದ್ದಾರೆ, ಆ ಕೆಲಸ ಕೂಡ ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ನಡೆದಿದೆ. ಅಧ್ಯಕ್ಷರೇ, ನಾರಾಯಣಪುರದ ರೈಟ್‌ಬ್ಯಾಂಕಿನ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಅದರ ಬಗ್ಗೆ ದೊಡ್ಡ ಚಳುವಳಿ ಆಂದೋಲನ ನಡೆದದ್ದು ತಮಗೂ ಗೊತ್ತು. ಧಿಕ್ಕಾರ ಪಕ್ಕಾರ ಎಲ್ಲ ನಡೆದು, ನಾನು ಹೋದಾಗ ಎಲ್ಲಾ ನನ್ನ ಮುಂದೆ ಕೂತದ್ದು ಎಲ್ಲ ಗೊತ್ತಿದೆ. ಮೊದಲು ಬೇಬಿ ಕೆನಾಲ್ ಅಂತ ಮಾಡಿದ್ದರು 30 ಕೋಟಿಗೆ, ಅದಕ್ಕೂ ಗುದ್ದಲಿ ಪೂಜೆ ಮಾಡಿದ್ದಾರೆ ಹಿಂದಿನ ಸರ್ಕಾರದವರು. ಅದನ್ನು ಮಾಡಕೂಡದು ಅಂತ ಜನ ಅಂದೋಲನ ಮಾಡಿದ ಕಾಲದಲ್ಲಿ ಆದರಿಂದ ರಾಯಚೂರು ಜಿಲ್ಲೆಯ 6 ಲಕ್ಷ ಎಕರೆಗೆ ನೀರು ಕೊಡಲು ಸಾಧ್ಯವಾಗಬಹುದೆಂದು 480 ಕೋಟಿ ರೂ. ಅಂದಾಜು ಮಂಜೂರು ಮಾಡಿ ಈಗ 0 240 ಕಿ.ಮೀ ಕೆಲಸ ತೆಗೆದುಕೊಳ್ಳಬೇಕೆಂದು ನಾನು ನಿರ್ಣಯ ಮಾಡಿದ್ದೇನೆ, ಮಧ್ಯೆ 12 ಕಿ.ಮೀ. ಅರಣ್ಯ ಭೂಮಿ ಇತ್ತು, ಅದಕ್ಕೆ ಕೇಂದ್ರ ಸರ್ಕಾರವನ್ನು ಕೋರಿ ಕ್ಲಿಯರೆನ್ಸ್ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದೇವೆ. ಅಧ್ಯಕ್ಷರೇ, ಇವತ್ತು ಈ ಎಲ್ಲ ನಿಯಮಗಳನ್ನೂ ಸಡಿಲಗೊಳಿಸಿ, ಹಾಗೆ ಸಡಿಲಗೊಳಿಸಿದ ಕಾಲದಲ್ಲೂ ಯಾವನೇ ಒಬ್ಬ ಕಂಟ್ರಾಕ್ಟರ್‌ಗೆ ನೇರವಾಗಿ ನಾವು ಕೊಟ್ಟೆವು ಎಂದು

ಆಪಾದನೆ ಮಾಡುವುದು ಬೇಕಾಗಿಲ್ಲವೆಂದು ಒಂದು ಹೈಪವರ್ ಕಮಿಟಿ ಮಾಡಿ, ಪತ್ರಿಕೆಗಳಲ್ಲಿ ಈ ಎಲ್ಲಾ ಷರತ್ತುಗಳನ್ನು ಹಾಕಿರುವ ಜಾಹಿರಾತು ಹಾಕಿ, ಆ ಅರ್ಹತೆಗಳ ವ್ಯಾಪ್ತಿಯಲ್ಲಿ ಬರತಕ್ಕವರಿಗೆ ಮಾತ್ರ ಕೆಲಸ ಕೊಡತಕ್ಕದ್ದೆಂದು ನಿರ್ಣಯ ಮಾಡಿದ ಮೇಲೆ, ಮತ್ತೊಂದು ಕೂಗು ಬಂತು, ಅದೇನೆಂದರೆ, ಆ ಭಾಗದಲ್ಲಿನ ಯಾರಿಗೆ ಅಷ್ಟೊಂದು ಶಕ್ತಿ ಇಲ್ಲವೋ ಮೆಟರಿಯಲ್ಸ್ ಇಲ್ಲವೋ ಅಂಥ ಸ್ಥಳೀಯ ಕಂಟ್ರಾಕ್ಟರ್‌ಗಳು ನಮಗೆ ಏನೂ ಸಿಗಲಿಲ್ಲವೆಂದು ಕೂಗು ಕೂಗಿದ ಮೇಲೆ, ಆ ಕ್ಲಾಸ್ (2) ಕಂಟ್ರಾಕ್ಟರ್ಸ್‌ಗೆ ಡಿಸ್ಟ್ರಿಬ್ಯೂಟರ್ಸ್‌ಗೆ ಸಂಬಂಧಿಸಿದಂತೆ ಬೇರೆ ಬೇರೆ ಅಲೈಡ್ ವರ್ಕ್ಸನ್ನು, ಸುಮಾರು 30-40 ಲಕ್ಷದವರೆಗೆ ಆ ಭಾಗದವರಿಗೂ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಹಾಗೆ ನಿರ್ಣಯ ಮಾಡುವ ಕಾಲದಲ್ಲಿ ಕೆಲವು ಕೆಲಸಗಳಿಗೆ ಮೈನರ್ 6 ಪರ್ಸೆಂಟ್ ಅವರಿಂದ ನೆಗೋಶಿಯೇಟ್ ಮಾಡಿ ರೇಟ್ಸನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನಿಸಿದ್ದೇವೆ. ಇನ್ನು ಕೆಲವು ಕೆಲಸಗಳಿಗೆ ಮೈನಸ್ 2 ಪರ್ಸೆಂಟ್, ಒಬ್ಬರಿಗೊಬ್ಬರಿಗೆ ಅವರವರ ಮಧ್ಯೇನ ಪೈಪೋಟಿ ಬಂದ ಕಾಲದಲ್ಲಿ ನಾಲ್ಕು ಜನ ಅಧಿಕಾರಿಗಳು ಕುಳಿತು ಮೈನಸ್ 6 ಪರ್ಸೆಂಟ್ ಮೈನಸ್ 2 ಪರ್ಸೆಂಟ್‌ಗೆ ಕೆಲಸಗಳನ್ನು ಕೊಡತಕ್ಕದ್ದನ್ನು ಮಾಡಿದ್ದಾರೆ. ಮೇಸನ್ರಿ ಕಾಂಕ್ರೀಟ್ ವರ್ಕ್ಸ್‌ಗಳನ್ನು ಷೆಡ್ಯೂಲ್ಡ್ ರೇಟ್ಸ್ ಮೇಲೇ ಕೊಟ್ಟಿದ್ದಾರೆ. ಇನ್ನು ವಿಶ್ವಬ್ಯಾಂಕಿನ ಆರ್ ಅಂಡ್ ಆರ್ ಅನ್ನು 1992ರಲ್ಲಿ ಒಂದು ಸಲ ನೇಮಿಸಿದ್ದರು, ಇದು ಮಾನ್ಯ ಖರ್ಗೆಯವರಿಗೂ ಗೊತ್ತಿದೆ. 94ರಲ್ಲಿ ಪುನಃ ರಿವ್ಯೆವ್ ಮಾಡಿದ್ದರು. Because of the inadequate progress in R & R, the World Bank stopped the aid in 1992. Later resumed in 1994. ನಮ್ಮ ಕಾಲದಲ್ಲೂ ಈ ಸಮಸ್ಯೆ ಬಂತು, 2nd Sept. 1995 ರಲ್ಲಿ ವಿಶ್ವಬ್ಯಾಂಕ್ ನೀವು ಮಾಡುತ್ತಿರುವುದರ ಬಗ್ಗೆ ನಮಗೆ ಸಮಾಧಾನ ಇಲ್ಲವೆಂದು ಹೇಳಿ ನಾವು ನಿಲ್ಲಿಸುತ್ತೇವೆ ಎಂದರು. ಇತ್ತೀಚೆಗೆ ನಾವೆಲ್ಲ ಕ್ರಮ ತೆಗೆದುಕೊಂಡೆವು. ಆ ವಿಶ್ವ ಬ್ಯಾಂಕ್‌ನವರು ಏನು ಪತ್ರದಲ್ಲಿ ಬರೆದಿದ್ದಾರೆ ಅದನ್ನೇ ಓದುತ್ತೇನೆ:

" In accordance with the bank's suspension telex to Government of Karnataka, the Government of Karnataka took number of actions which led to a consid erable improvement in the implementation, in the quality of R & R programme. In particular, the Government of Karnataka has posted a dynamic R & R Commissioner with the requisitive administrative and financial powers to head the UKP R & R wing and has provided ad equate staff and funds to carry out large R & R programme. As a result of this participative and consultative measures, the implementation of R & R has considerable improved".

ಇದನ್ನು ಹೇಳಿ, ಅವರು ಇವತ್ತು ಒಂದು ಟೆಲೆಕ್ಸ್ ವಿಶ್ವಬ್ಯಾಂಕಿಗೆ ನಮಗೆ ಕೊಡಬೇಕಾಗಿರುವ ಉಳಿಕೆ ಹಣವನ್ನು ರಿಲೀಸ್ ಮಾಡಬೇಕೆಂದು ಒಂದು ಟೆಲೆಕ್ಸ್ ಕೊಟ್ಟಿದ್ದಾರೆ. ಇಷ್ಟನ್ನು ಈ ಸಂದರ್ಭದಲ್ಲಿ

ಹೇಳಿ ಇವತ್ತು ಯಾವ ವೇಗದಲ್ಲಿ ಕೆಲಸ ನಡೆಯುತ್ತಿದೆಯೋ ಆ ವೇಗವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುವುದಿಲ್ಲ. ಮಾನ್ಯ ಖರ್ಗೆಯವರು piece-work ನಿಲ್ಲಿಸುತ್ತೇವೆಂದು ಹಿಂದೆ ದೂರು ಕೊಟ್ಟವು, ಮತ್ತೆ ಅದನ್ನೇ ಅಭ್ಯಾಸ ಮಾಡಿದಿರಿ ಅಂತ ತಮ್ಮ ಭಾಷಣದಲ್ಲಿ ಹೇಳಿದಿರಿ ಅದನ್ನು ನೋಡಿದೆ. ನಾವು ಆ ರೀತಿ ಪೀಸ್ ವರ್ಕ್ ಯಾರಿಗೂ ಕೊಡಲಿಲ್ಲ. ಅಧ್ಯಕ್ಷರೇ ಅವತ್ತು ಕೊಟ್ಟಂತಹ ವಿಧಿವಿಧಾನಗಳು ಬೇರೆ, ಆ ಹಿಂದಿನ ವಿಷಯಗಳನ್ನು ಪುನಃ ಪುನಃ ನಾನು ಹಾಕಲಿಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ನನಗಿಲ್ಲ. ಅವತ್ತೇನು ಮಾಡಿದ್ದಾರೆ ಎನ್ನುವುದನ್ನು ಸುದೀರ್ಘವಾಗಿ ಹೇಳಿದ್ದೇನೆ. ಇಲಾಖೆ ಕೆಲಸದ ಹೆಸರಿನಲ್ಲಿ ಯಾರೋ ಒಬ್ಬ ಬೇನಾಮಿ ಕಂಟ್ರಾಕ್ಟರ್ ಕೆಲಸ ಮಾಡುವುದು, ಅಥವಾ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಹೆಸರಿನಲ್ಲಿ ಸಬ್ ಲೀಸ್ ಮಾಡುವುದು ಇದೆಲ್ಲ ಏನು ನಡೆದಿದೆ ಎಂಬ ಬಗ್ಗೆ ಈ ಸದನದಲ್ಲಿ ಹಿಂದೆ ಎಲ್ಲ ವಿಷಯ ಚರ್ಚೆಯಾಗಿದೆ. ಇವತ್ತು ನಾವು ಎರಡೂವರೆ ಕೋಟಿವರೆಗೆ ಪೀಸ್‌ವರ್ಕ್ ಕೊಡಬೇಕೆಂಬುದಕ್ಕೆ ಜವಾಬ್ದಾರಿ ಇರುವ ಪತ್ರಿಕೆಗಳಲ್ಲಿ ಅಧಿಸೂಚನೆ ಮಾಡಿಸಿ, ಅವರಿಗೆ ಏನೇನು ಷರತ್ತಿರಬೇಕು ಯಾವ್ಯಾವ ನಿಯಮಗಳ ವ್ಯಾಪ್ತಿಯಲ್ಲಿ ಅವರು ಬರಬೇಕು ಎಂದು ಸಾರ್ವಜನಿಕವಾಗಿ ತಿಳಿಸಿ, ಅವರು ಕಳುಹಿಸಿದ ಎಲ್ಲಾ ಅರ್ಜಿಗಳನ್ನೂ ಕ್ರೋಢೀಕರಿಸಿ ಅದರ ಮೇಲೆ ಕಾಂಪಿಟಿಟಿವ್‌ನೆಸ್ ಯಾರಿಗಿದೆ ಎನ್ನುವುದನ್ನು ನಿರ್ಣಯ ಮಾಡುವುದಕ್ಕೆ 4 ಜನ ಹಿರಿಯ ಅಧಿಕಾರಿಗಳ ಸಮಿತಿಯಲ್ಲಿ ಅವರಿಗೇನು ಪ್ರಿಕ್ವಾಲಿಫಿಕೇಷನ್ ಮಾಡಿದ್ದಾರೆಂಬುದನ್ನು ಪೂರ್ಣವಾಗಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ. ಆ ಕೆಲಸಗಳ ವೇಗವನ್ನು ಇನ್ನೂ ವೃದ್ಧಿಸಬೇಕೆಂಬ ಗುರಿಯನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು ಮಾಡಿದ್ದು ಇದು, ಯಾರನ್ನು ಮೆಚ್ಚಿಸಲಿಕ್ಕಾಗಿ ಮಾಡುವುದಿಲ್ಲ. ನನ್ನ ಮನಸ್ಸಿನಲ್ಲೇನಿದೆ, ಈ ನಾಡಿನ ನೀರು ಬೇರೆಯವರ ಪಾಲಾಗಬಾರದು ಎಂಬ ಬಗ್ಗೆ ಬೇರೆಯವರಿಂದ ಹೇಳಿಸಿಕೊಂಡು ಮಾಡಬೇಕೆಂದು ನಿರ್ಣಯ ಮಾಡಿದ್ದಲ್ಲ. ಒಂದು ಗಾದೆ ಮಾತಿದೆ: ''ಕಟ್ಟಿಕೊಟ್ಟ ಬುತ್ತಿ ಹೇಳಿಕೊಟ್ಟ ಮಾತು ಬಹಳ ದಿನ ನಿಲ್ಲುವುದಿಲ್ಲ'' ಎಂದು. ಇದರ ಅನುಭವ ಹಳ್ಳಿಯವನಾದ ನನಗೆ ಗೊತ್ತಿದೆ, ಬೇರೆಯವರ ಒತ್ತಡದಿಂದ ಒಂದು ಸಾವಿರ ಕೋಟಿ ರೂ. ಖರ್ಚು ಮಾಡುತ್ತೇನೆಂದು ಹೇಳಲಿಲ್ಲ, ನನ್ನ ಆಸೆ ಅಷ್ಟೆ. ನಾನು ಹೇಳಿದ 2 ಸಾವಿರ ಕೋಟಿ ಖರ್ಚು ಮಾಡಬೇಕು, ಆದರೆ ಸಾಧ್ಯ ಇಲ್ಲ, ಏಕೆ ಸಾಧ್ಯವಿಲ್ಲವೆಂದರೆ ಬಜೆಟ್‌ನಲ್ಲಿ ಅದಕ್ಕೆ ಕರೆಸ್ಪಾಂಡಾಗಿ ಹಣ ಇಡದೇ ಇದ್ದರೆ, ಯಾರು ಇವತ್ತು ಬಾಂಡ್ ಷೇರ್ ಮುಖೇನ ಬಂಡವಾಳ ಇನ್‌ವೆಸ್ಟ್ ಮಾಡುತ್ತಾರೋ ಅವರಿಗೆ ಸರ್ಕಾರದ ಫೈನಾನ್ಸಿಯಲ್ ಕ್ರೆಡಿಬಿಲಿಟಿ ಇರಬೇಕಾಗುತ್ತದೆ. ಅದಿಲ್ಲದಿದ್ದರೆ ಸರ್ಕಾರದಲ್ಲಿ ಬಾಂಡ್ ಮೂಲಕ ಹಣ ಕೊಡಲಿಕ್ಕೆ ಬರುವುದಿಲ್ಲ. ಅಧ್ಯಕ್ಷರೇ, ಒಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದು ಗರ್ವದ ಮಾತಲ್ಲ, ಹೆಮ್ಮೆಯ ಮಾತಲ್ಲ, ಒಂದು ವರ್ಷದಲ್ಲಿ ನಾವು ಒಂದು ರೂಪಾಯಿ ಓ.ಡಿ.ಅನ್ನು ತೆಗೆದುಕೊಳ್ಳಲಿಲ್ಲ. ನಾನು ಆರು ವರ್ಷ ನೀರಾವರಿ ಮಂತ್ರಿಯಾಗಿದ್ದೆ, ಯಾವ್ಯಾವ ಸಂದರ್ಭದಲ್ಲಿ ಹೇಗೆ ನಡೆದಿದೆ ಎಂದು ನನಗೆ ಗೊತ್ತಿದೆ. ಒಂದು ರೂಪಾಯಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸಾಗಿ ಹಣ ಪಡೆದಿಲ್ಲ. ಇವತ್ತು ಹಣಕಾಸು ನಿರ್ವಹಣೆಯಲ್ಲಿ ಎಷ್ಟರ ಮಟ್ಟಿಗೆ ಮುಂಜಾಗ್ರತೆ ವಹಿಸಿ ಪಡೆದುಕೊಂಡಿದ್ದೇವೆಂಬುದು ಇದಿಷ್ಟರಿಂದ ಅರ್ಥವಾಗುತ್ತದೆಂದು ತಿಳಿಸಲು ನಾನು ಇಷ್ಟಪಡುತ್ತೇನೆ. ಅಷ್ಟೇ ಅಲ್ಲ, ಇದರ ಜೊತೆಗೆ ನಾವು ಮಾಡಿದ ಕಮಿಟ್‌ಮೆಂಟ್‌ಗಳು, 136 ಕೋಟಿ ರೈತರ ಸಾಲದ ಮೇಲಿನ ಬಡ್ಡಿ ತೀರಿಸುವುದಿರಬಹುದು, ಹಿಂದಿನ

ಸರ್ಕಾರ ಬಿಟ್ಟು ಹೋಗಿದ್ದ 538 ಕೋಟಿ ರೂ. ಸಾಲ ಅದು ಪಿಯರ್‌ಲೆಸ್ ಸಾಲ ಇರಬಹುದು, ಕೆನರಾ ಬ್ಯಾಂಕಿನಲ್ಲಿ ಮಾಡಿದ 100 ಕೋಟಿ ರೂ. ಸಾಲ ಇರಬಹುದು, ಇವೆಲ್ಲವನ್ನೂ ನಿಭಾಯಿಸಿಕೊಂಡು ಈ ರಾಜ್ಯದ ರೈತರಿಗೆ ಏನು ಮಾತು ಕೊಟ್ಟಿದ್ದೇವೊ ಅವರ ಸಾಲದ ಮೇಲಿನ ಬಡ್ಡಿ ತೀರ್ಮಾನ ಮಾಡಿದ್ದಷ್ಟೇ ಅಲ್ಲ, ಇವತ್ತು ಬೆಂಗಳೂರಿನಲ್ಲಿ ತಲೆ ಎತ್ತುತ್ತಿರುವ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಒಂದು ರೂಪಾಯಿ ಕೇಂದ್ರ ಸರ್ಕಾರ ಕೊಟ್ಟಿಲ್ಲ, 28 ಕೋಟಿ ರೂ. ಅದರ ಮೇಲೆ ವಿನಿಯೋಗಿಸಿದ್ದೇವೆ. ಕೇಂದ್ರದ ಹಣಕಾಸು ಸಚಿವರಿಗೂ ಹೇಳಿದ್ದೇನೆ. ನಮಗೆ ಕಷ್ಟ ಇದೆ ದಯಮಾಡಿ ನೀವು ಸಹಕಾರ ಕೊಡಬೇಕು ಅಂತ. ಅವರು ಕೊಡುವುದು ಬಿಡುವುದು ವಿಷಯ ಬೇರೆ. ಇವತ್ತು ಅದನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ, ರಾಜ್ಯದ ಘನತೆ ಗೌರವ ಹೋಗುತ್ತದೆ. ಈ ರಾಜ್ಯದಲ್ಲಿ ನ್ಯಾಷನಲ್ ಗೇಮ್ಸ್ ಆಗಬೇಕೆಂದು ನಾನಂತೂ ತೀರ್ಮಾನ ಮಾಡಲಿಲ್ಲ. ಹಿಂದಿನವರು ತೀರ್ಮಾನ ಮಾಡಿದ್ದಾರೆ ಅದನ್ನು ಮುಂದುವರೆಸಿಕೊಂಡು ಹೋಗುವುದು ನಮ್ಮ ಧರ್ಮ. ಹಾಗೆ ಮಾಡಿದ್ದು ತಪ್ಪು ಎನ್ನುವುದಿಲ್ಲ, ರಾಜ್ಯಕ್ಕೆ ಕೀರ್ತಿ ಬರಬಹುದೆಂದು ಮಾಡಿರುವುದನ್ನು ನಾನು ಯಾವುದೇ ಬೇಸರದಿಂದ ಹೇಳುತ್ತ ಇಲ್ಲ. ಇದು ಜವಾಬ್ದಾರಿ, 28 ಕೋಟಿ ರೂ. ಮೈ ಮೇಲೆ ಹಾಕಿಕೊಂಡು ಕೊಡಬೇಕಾಗಿ ಬಂತು. ಅಧ್ಯಕ್ಷರೇ ಒಂದು ಸಣ್ಣ ವಿಷಯವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾಗೇಗೌಡರು ಕುಳಿತೀದ್ದಾರೆ ಅವರು ಮಕ್ಕಳಿಗೆ ಹಾಲು ಕೊಡುತ್ತೇನೆ ಎಂದರು. ಅದು ಸರ್ಕಾರದ ಕಾರ್ಯಕ್ರಮ ಆ 9 ಕೋಟಿ ರೂಪಾಯಿಗಳನ್ನು ನಾವು ತೀರಿಸಬೇಕಾಗಿ ಬಂತು. ಪರಿಸ್ಥಿತಿ ಹೇಗೆ ಬಂದಿದೆ ಎಂದರೆ, ಹೌದು ಸಾಲ ಮಾಡಿದ್ದೇವೆ.

MR. SPEAKER: Mr. Nage Gowda was transferred that liability to you.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದು ಎಲ್ಲಾ ಸಕ್ಸೆಸಿವ್ ಸರ್ಕಾರಗಳ ಕಥೆ. ನೀವು ಮಾಡಿದ ಸಾಲ ನಾವು ಬಂದಾಗ ತೀರಿಸುತ್ತೇವೆ, ಇದು ಹೊಸದೇನಲ್ಲ.

ಶ್ರೀ ಹೆಚ್.ಡಿ.ದೇವೇಗೌಡ:- ನಾನು ದೂರುತ್ತಿಲ್ಲ, ಇರುವ ವಿಷಯವನ್ನು ಸಭೆಯ ಮುಂದಿಡುವ ಪ್ರಯತ್ನ, ಯಾರಿಗೋ ದೋಷ ಹೊರಿಸಿ ಅವರು ಹಾಗೆ ಮಾಡಿದರು ಅಂತ ಹೇಳುತ್ತಿಲ್ಲ. ಇದನ್ನೆಲ್ಲ ಈ ಸದನದ ಗಮನಕ್ಕೆ ತರದೇ ಇನ್ಯಾರ ಗಮನಕ್ಕೆ ತರಲು ಹೋಗಲಿ? ಈ ಸದನದಲ್ಲಿ ನೀವು ಹೇಳಿದಾಗ ಅದು ದೇಶದ ಜನತೆ ಮುಂದೆ ಹೋಗುತ್ತದೆ, ನಾನು ಹೇಳಿದ್ದೂ ದೇಶದ ಜನತೆ ಮುಂದೆ ಹೋಗಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮ್ಮದು ಫೈನಾನ್ಸೆಲ್ಲ ಚೆನ್ನಾಗಿಯೇ ಇದೆ. ಆದರೆ, 650 ಕೋಟಿ ಪ್ಲಾನ್‌ನಲ್ಲಿ ಕಡಿಮೆ ಮಾಡಿದಿರಿ ಅಷ್ಟೆ.

ಶ್ರೀ ಹೆಚ್.ಡಿ.ದೇವೇಗೌಡ:- ವಾರ್ಷಿಕ ಯೋಜನಾ ಗಾತ್ರದಲ್ಲಿ ಎಷ್ಟೆಷ್ಟು ಯಾವ್ಯಾವ ವರ್ಷ ಕಡಿಮೆ ಮಾಡಿದ್ದಾರೆಂಬ ಎಲ್ಲಾ ವಿಷಯವನ್ನು ಕೊಡುತ್ತೇನೆ. ತುಂಬ ದೂರ ಹಾರಿ ಹೋಗಬೇಡಿ. ಯಾವ್ಯಾವ ವರ್ಷ ವಾರ್ಷಿಕ ಯೋಜನೆ ಪ್ಲಾನಿಂಗ್ ಕಮಿಷನ್ ಅಪ್ರೂವ್ ಮಾಡಿದ್ದೆಷ್ಟು ಅಕ್ಚುಯಲ್ ಅಚೀವ್‌ಮೆಂಟೆಷ್ಟು ಎಂದು ಪ್ರತಿ ವರ್ಷದ್ದು ಈ ಸಭೆಯ ಮುಂದೆ ಇಡಲು ನಾನು ಸಿದ್ಧನಿದ್ದೇನೆ. ಅದರ ಬಗ್ಗೆ ವಿವಾದಕ್ಕೆ ಇಳಿಯುವುದು ದಯಮಾಡಿ ಬೇಡ. ಅಷ್ಟೇ ಅಲ್ಲ, ಪಿಡಿ ಅಕೌಂಟ್ ಅಂತ ಹೇಳಿ ಎಲ್ಲ ಟ್ರೆಜರಿಯೊಳಗೆ 600 ಕೋಟಿ ರೂ. ಲೆಕ್ಕ ತೋರಿಸಿ ಟ್ರೆಜರಿಯೊಳಗೆ

ಮೂರು ಕಾಸಿಲ್ಲದಿದ್ದಿ ದಿನಗಳೂ ಉಂಟು. ಈ ರಾಜ್ಯದ ಹಣೆಬರಹವನ್ನು ನಾನು ಹೇಳಲಿಕ್ಕೆ ಹೋದರೆ..... ಅಧ್ಯಕ್ಷರೇ ನಾವು ಎಷ್ಟು ಸಂಪನ್ಮೂಲ ರೂಢಿಸಿಕೊಂಡಿದ್ದೇವೆ ಎಂಬುದನ್ನೂ ಹೇಳಿದ್ದನೆ. ಔಟ್‌ಸೈಡ್ ಪ್ಲಾನ್ ಏನು ಖರ್ಚು ಮಾಡಿದ್ದೇವೆಂದೂ ಹೇಳಿದ್ದೇವೆ. 136 ಕೋಟಿ ರೂಪಾಯಿಗಳನ್ನು ಹಿಂದಿನ ಯಾವುದೇ ಸರ್ಕಾರ ಕೊಡಲಿಲ್ಲ. ಕೇಂದ್ರ ಸರ್ಕಾರ ಒಂದು ಮಾತು ಹೇಳಿತು, ನೀವು ಕೊಟ್ಟ ಬಡ್ಡಿ ಮನ್ನಾ ಇದೆಯೋ ಇದರಿಂದ ರಾಜ್ಯದ ರೈತರಿಗೆ ನಾವು ಸಾಲ ಕೊಡುವುದಕ್ಕೆ ಆಗುವುದಿಲ್ಲವೆಂದು ರಾಜ್ಯ ಸಭೆಯಲ್ಲಿ ಕೇಂದ್ರ್ರದ ಹಣಕಾಸು ಸಚಿವರನ್ನು ಹೇಳಿದ್ದನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. Is it not a liability on the State Government? Yes, we have given 510 crores advance to the farming community which is a major achievement. 230-240 ಕೋಟಿ ರೈತನಿಗೆ ಸಾಲ ಕೊಟ್ಟರು, ಇವತ್ತು 510 ಕೋಟಿ ಸಾಲ ಕೊಡುವುದಾದರೆ is it not achievement so far as the farming community is concerned. ನನ್ನ ದೃಷ್ಟಿಯಲ್ಲಿ ಅದು ನನಗೆ ಮುಖ್ಯವಿದೆ. ರೈತರಿಗೆ ಕೊಟ್ಟಂತಹ ಸಾಲವನ್ನು you may think it is a non-plan expenditure. I do agree. ಆಗಲಿ ಚಿಂತೆಯಿಲ್ಲ, ಅಷ್ಟೇ ಅಲ್ಲ ಬಡವರಿಗೆ 220 ಕೋಟಿ ಅಕ್ಕಿ ಗೋಧಿ ಕೊಡುವ ಬಗ್ಗೆ ನಿರ್ಣಯ ನಾವು ಮಾಡಿದ್ದರ ಬಗ್ಗೆ ಅವತ್ತು ಯಾರು ಮಂತ್ರಿಗಳಾಗಿದ್ದರೋ ಅವರು ಗುಲ್ಬರ್ಗಕ್ಕೆ ಬಂದಾಗ ಹೇಳಿದರು we are not going to given even an iota of any assistance from the Centre. 3-20ಕ್ಕೆ ಅಕ್ಕಿ ಕೊಡುವುದು ಅಥವಾ ಗೋಧಿ ಕೊಡುವುದು ರಿಯಾಯಿತಿ ದರದಲ್ಲಿ ಏನಿದೆ ಅದೊಂದು ಬಾಬಿಗೆ ಈ ವರ್ಷ 220 ಕೋಟಿ ನಾವು ವೆಚ್ಚ ಮಾಡಿದೆವೋ 95-96ಕ್ಕೆ 250 ಕೋಟಿಗೆ ಬರುತ್ತದೆ. ನಾನು ಈ ಮಾತನ್ನು ಹೇಳುವ ಕಾಲದಲ್ಲಿ ಇವೆಲ್ಲವನ್ನೂ ನಮ್ಮ ಸಂಪನ್ಮೂಲವನ್ನು ರೂಢಿಸಿಕೊಳ್ಳುವುದರ ಮುಖೇನವೇ ಖರ್ಚು ಮಾಡಿದ್ದೇವೆ ಹೊರತಾಗಿ ಪಿಯರ್‌ಲೆಸ್ ಲೋನು ಮತ್ತೆ ಯಾವುದೇ ಕಂಪನಿ ಲೋನು ತೆಗೆದುಕೊಂಡು ಬಂದು ನಾವು ಈ ರಾಜ್ಯದಲ್ಲಿ ಖರ್ಚು ಮಾಡಲಿಲ್ಲ ಎನ್ನುವ ಮಾತನ್ನು ನೇರವಾಗಿ ಈ ಸದನದ ಮುಖೇನ ರಾಜ್ಯದ ಜನತೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇಷ್ಟನ್ನು ಇವತ್ತು ಹೇಳಿ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ. ರಾಜ್ಯದ ಮಹಾಜನತೆ ನಮಗೆ ಜವಾಬ್ದಾರಿ ಕೊಟ್ಟಿರುವ ಈ ಹಿನ್ನಲೆಯಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾರು ಎಷ್ಟು ಟೀಕೆ ಮಾಡಲಿ. ಟೀಕೆ ಮಾಡುವ ಅಧಿಕಾರ ನಿಮ್ಮದು. ಉತ್ತರ ಕೊಡುವ ಅಧಾರ ಕೂಡ ನಮಗೆ ಇದೆ. ಇಬ್ಬರ ನಿಲುವನ್ನು ಈ ನಾಡಿನ ಜನತೆ ಅಗ್ನಿ ಪರೀಕ್ಷೆಗೆ ಗುರಿ ಮಾಡುತ್ತಾರೆ. ಅದರ ಬಗ್ಗೆ ದೊಡ್ಡ ಚರ್ಚೆ ಬೇಡ. ಶಬ್ದ ಪ್ರಯೋಗ ಕಠಿಣವಾಗಿರಬಹುದು, ಶಬ್ದಪ್ರಯೋಗಗಳು ಬಹಳ ಹರಿತವಾಗಿರಬಹುದು. ಈ ಎಲ್ಲಾ ಶಬ್ದ ಪ್ರಯೋಗಗಳಿಂದ ಸಮಸ್ಯೆ ಬಗೆಹರಿಯುವುದಿಲ್ಲ ಎನ್ನುವ ಅರಿವು ನನಗೆ ಇದೆ. ಸಾಕಷ್ಟು ಜೀವನದಲ್ಲಿ ಹೋರಾಟ ಮಾಡಿದ್ದೇವೆ. ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾವು ಎರಡನೇ ಪ್ಲೇಸ್‌ಮೆಂಟ್ 27 ಮಾರ್ಚಿಗೆ ನಾವು ಬಿಡುಗಡೆ ಮಾಡುತ್ತಿದ್ದೇವೆ. ನನಗೆ ಆತ್ಮವಿಶ್ವಾಸ ಇದೆ. ಈ ರಾಜ್ಯದ ಅನೇಕ ಜನ, ಅನೇಕ ಸಭೆಗಳಲ್ಲಿ ಹೋದಂಥ ಕಾಲದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಂಥ ಕಾಲದಲ್ಲಿ ಮುಂದು ಬಂದು ಹೇಳಿದ್ದಾರೆ, ನಾವು ಎರಡು ಲಕ್ಷ ಮೂರು ಲಕ್ಷ, ಐದು ಲಕ್ಷ,

ಹತ್ತು ಲಕ್ಷ ಸುತ್ತೂರು ಸ್ವಾಮಿಗಳು ಒಂದು ಸಭೆಯಲ್ಲಿ ಹೇಳಿದರು 25 ಲಕ್ಷ ನಾನು ಕೊಡುತ್ತೇನೆ ಎಂದು. ಹೀಗೆ ಬೇರೆ ಅದೇ ಸಭೆಯೊಳಗೆ ಹಲವಾರು ಜನ ರೈತರುಗಳು ಹೇಳಿದರು 50 ಸಾವಿರ, ಒಂದು ಲಕ್ಷ ನಾವು ಕೊಡುತ್ತೇವೆ. ಬಾಂಡ್ ಪರ್ಚೇಸ್ ಮಾಡುತ್ತೇವೆ ಎನ್ನತಕ್ಕಂಥದ್ದು ಈ ರಾಜ್ಯದಲ್ಲಿ ನಾವು ಇವತ್ತು ಸಾರ್ವಜನಿಕರ ಸಹಕಾರದಿಂದ, ಮತ್ತು ಹಣಕಾಸಿನ ಸಂಸ್ಥೆಗಳಿಂದ ಈ ಕೃಷ್ಣಾ ನದಿಯ ನೀರನ್ನು ಬಳಸಿಕೊಳ್ಳುವುದಕ್ಕೆ, ಉಳಿಸಿಕೊಳ್ಳುವುದಕ್ಕೆ ಮುಂದಿನ ನಾಲ್ಕು ವರ್ಷಗಳಲ್ಲಿ ಸರ್ಕಾರ ಶಕ್ತಿ ಮೀರಿ ತನ್ನೆಲ್ಲಾ ಪ್ರಯತ್ನವನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ವಿಷಯದ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಎಲ್ಲರ ಗುರಿ ಒಂದೇ. ಈ ರಾಜ್ಯದಲ್ಲಿ ನೀರಿನ ಬಳಕೆಯನ್ನು ಮಾಡಿಕೊಳ್ಳಬೇಕು. ನಾನು ಪ್ರತಿ ವರ್ಷ ಯಾರ್ಯಾರು ಎಷ್ಟು ಖರ್ಚು ಮಾಡಿದ್ದಾರೆ ಎನ್ನತಕ್ಕಂಥ ವಿವರಣೆಯನ್ನು ಕೊಡುವ ಆಗತ್ಯವಿಲ್ಲ. ನನ್ನ ಬೆನ್ನನ್ನು ನಾನೇ ತಟ್ಟಿಕೊಳ್ಳಬೇಕಾದಂಥ ಅವಶ್ಯಕತೆಯೂ ಇಲ್ಲ. ಏಪ್ರಿಲ್, ಮೇ, ಜೂನ್, ಜುಲೈನಲ್ಲಿ 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಒಂದು ಪ್ರಯತ್ನವನ್ನು ಮಾಡುತ್ತೇನೆ ಎಂದು ಹೇಳಿದ್ದೇನೆ. ಶ್ರೀಮಾನ್ ಸಿದ್ಧರಾಮಯ್ಯನವರು ಸ್ವಲ್ಪಮಟ್ಟಿಗೆ ತಮ್ಮ ಭಾವನೆಯನ್ನು ವ್ಯಕ್ತಪಡಿಸತಕ್ಕಂಥ ಕಾಲದಲ್ಲಿ 700-765 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ ಎಂದು ಹೇಳಿದ್ದಾರೆ. ಈ ಒಬ್ಬ ಅಧಿಕಾರಿಯ ಬಗ್ಗೆ ವಿಶ್ವಬ್ಯಾಂಕ್‌ನವರು ಏನು ಬರೆದಿದ್ದಾರೆ, ಅವರಿಗೆ ಎಲ್ಲಾ ಪವರ್ಸ್‌ನ್ನು ಡೆಲಿಗೇಟ್ ಮಾಡಿದ್ದೇವೆ. ಅವರು ಆರ್ ಆಂಡ್ ಆರ್ ಬಗ್ಗೆ ರಾಜ್ಯ ಸರ್ಕಾರದ ಕಡೆ ತಿರುಗಿ ನೋಡಬೇಕಾಗಿಲ್ಲ. ಅವರೇ ಕೊಟ್ಟಿರುವ ಒಂದು ವರದಿಯಲ್ಲಿ ನವೆಂಬರ್ 1996 ನನಗೆ 340 ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು ಎಂದು ಹೇಳಿದ್ದಾರೆ. ನವೆಂಬರ್ 1996ರಲ್ಲಿ 340 ಕೋಟಿ ರೂಪಾಯಿಗಳನ್ನು ನನಗೆ ನೀವು ಮೀಸಲಾತಿಯಾಗಿ ಇಡಬೇಕು. ಅಷ್ಟರೊಳಗೆ ನಾನು ಅಷ್ಟು ಖರ್ಚು ಮಾಡುತ್ತೇನೆ ಎನ್ನುವ ಹೇಳಿದ್ದಾರೆ. ಆದರಿಂದಲೇ ನಾನು ಹೇಳಿದ್ದೇನೆ, ಅದಕ್ಕೆ ಫ್ಲಡ್ಸ್ ಬಂದರೂ ನಮ್ಮ ಕೆಲಸ ನಿಲ್ಲುವುದಿಲ್ಲ. ಹಳ್ಳಿಗಳ ಸ್ಥಳಾಂತರ ಮಾಡುವ ಬಗ್ಗೆ ಅವರ ಜಮೀನುಗಳಿಗೆ ಪರಿಹಾರ ಕೊಡುವ ಬಗ್ಗೆ ಮಳೆ ಬಂದರೂ ಏನೂ ಕೆಲಸ ನಿಲ್ಲುವುದಿಲ್ಲ. ಆ ಕೆಲಸ ಮಾಡುವುದಕ್ಕೆ ಆ ಅಧಿಕಾರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರೇ ಕೊಟ್ಟಿರುವ ವರದಿ ನನಗೆ 340 ಕೋಟಿ ರೂಪಾಯಿಗಳನ್ನು ನೀವು ಕೊಡಬೇಕೆಂದು ಹೇಳಿದ್ದಾರೆ. ನಾವೇನು 15 ಮೀಟರ್ ಗೇಟನ್ನು ಇಡತಕ್ಕಂಥದ್ದಕ್ಕೆ ಆಲಮಟ್ಟಿಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ, ಅದಕ್ಕೆ 158 ಹಳ್ಳಿಗಳು ಒಟ್ಟು ಮುಳುಗಡೆಯಾಗುತ್ತವೆ. ಸ್ಟೇಜ್-1ರಲ್ಲಿ 6, ಸ್ಟೇಜ್-2ರಲ್ಲಿ 21, ಸ್ಟೇಜ್-2ರಲ್ಲಿ ಇನ್ನೊಂದು 68, ಇರುವ ಹೈಟ್ ಮೇಲೆಯೇ ಹೇಳುತ್ತೇನೆ. 505 ಹೈಟ್‌ವರೆಗೆ ಇಟ್ಟರೆ 6 ಹಳ್ಳಿಗಳು ಮುಳುಗಡೆಯಾಗುತ್ತವೆ, 506 ರವರೆಗೆ ಇಟ್ಟರೆ 21 ಹಳ್ಳಿಗಳು, 509 ಹೈಟ್‌ವರೆಗೆ ಇಟ್ಟರೆ 68 ಹಳ್ಳಿ, 519 ವರೆಗೆ ಹೋದರೆ 41 ಹಳ್ಳಿಗಳು, 524 ಕ್ಕೆ ಹೋದರೆ 22 ಹಳ್ಳಿಗಳು, ಒಟ್ಟು 158 ಹಳ್ಳಿಗಳು ಮುಳುಗಡೆಯಾಗುತ್ತವೆ. ಈ 158 ಹಳ್ಳಿಗಳಿಗೆ ನಾವು ಪರಿಹಾರವನ್ನು ಕೊಟ್ಟು ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡಿದ ಮೇಲೆ, ಆ ಗೇಟನ್ನು ನಿಲ್ಲಿಸಿದರೂ ಮೊದಲು ನೀರು ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮೊದಲೇ ಇವರಿಗೆ ಸ್ಥಳಾಂತರ ಮಾಡಬೇಕಾಗುತ್ತದೆ. ಇವರಿಗೆಲ್ಲಾ ಸವಲತ್ತುಗಳನ್ನು ವಿಶ್ವಬ್ಯಾಂಕ್ ಇವತ್ತು ಯಾವ ನಿಯಮಗಳ ಪ್ರಕಾರ ಇವರಿಗೆ ನಾವು ಪರಿಹಾರ ಕೊಡಬೇಕೆಂದು ಹೇಳಿದ್ದಾರೋ, ಆ ಎಲ್ಲಾ ಪರಿಹಾರವನ್ನು ನಾವು ಕೊಟ್ಟು ನಾವು 15

ಮೀಟರ್ ಗೇಟನ್ನು ಇಟ್ಟರೂ ಕೂಡ ನೀರನ್ನು ತಡೆಹಿಡಿಯುವುದು ಸಂಪೂರ್ಣವಾಗಿ ಪುನರ್ ವ್ಯವಸ್ಥೆಯ ಕಾರ್ಯಕ್ರಮ ಮುಗಿದ ಮೇಲೆ ನಾವು ಆ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇದರ ಬಗ್ಗೆ ಯಾರಿಗೂ ಕಾಳಜಿ ಬೇಕಾಗಿಲ್ಲ. ಇನ್ನೊಂದು ಮಾತನ್ನು ನಾನು ಹೇಳಲೇಬೇಕಾಗುತ್ತದೆ. ನಾವು 524 ಅಂದರೆ 15 ಮೀಟರ್ ಗೇಟ್ ಇಡುವ ಬಗ್ಗೆ ನಮ್ಮ ಬಗ್ಗೆ ಒಂದು ಪ್ರತಿಭಟನೆ ಇದೆ ಎನ್ನುವ ಮಾತನ್ನು ಕೇಳಿದ್ದೇನೆ. ನಾವು 729 ಟಿ.ಎಂ.ಸಿ. ನೀರನ್ನು ಯುಟಿಲೈಜ್ ಮಾಡಿಕೊಳ್ಳುವುದಕ್ಕೆ 534 ಟಿ.ಎಂ.ಸಿ. ನೀರನ್ನು ಸ್ಟೋರ್ ಮಾಡಬೇಕೆಂದು ನಾನು ಮೊದಲೇ ಹೇಳಿದೆ. ನಾವು ಇವತ್ತೇನು ಈ ಗೇಟನ್ನು 15 ಮೀಟರ್ ಇಟ್ಟರೂ ಒಂದು ಟಿ.ಎಂ.ಸಿ. ನೀರನ್ನು, ಅರ್ಧ ಟಿ.ಎಂ.ಸಿ. ನೀರನ್ನು ನಾನು ಹೆಚ್ಚು ಆಂಧ್ರಕ್ಕೆ ಸೇರತಕ್ಕಂಥದ್ದನ್ನು ಹಿಡಿಯಲಿಕ್ಕೆ ಹೋಗುವುದಿಲ್ಲ. ನನ್ನ ರಾಜ್ಯದ ನೀರಿನ ಹಕ್ಕನ್ನು ನಾನು ಉಳಿಸಿಕೊಳ್ಳಲಿಕ್ಕೆ ಬೇರೆಯವರ ಮಾತನ್ನು ಕೇಳಬೇಕಾದ ಅವಶ್ಯಕತೆ ಇಲ್ಲ. ಅವರು ಯಾರು ಏನೇ ಹೇಳಿದರೂ ಅದು ನನ್ನ ಹಕ್ಕು. ನನ್ನ ರಾಜ್ಯದ ಹಕ್ಕು. ಇವತ್ತು ನನ್ನ ಜನತೆಯ ಹಕ್ಕನ್ನು ಮೊಟಕು ಮಾಡಲಿಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಅದರಿಂದ ಇಷ್ಟೇ ಹೇಳುತ್ತೇನೆ, ಸೌಹಾರ್ದವಾಗಿ ನಿರ್ಣಯ ಮಾಡಿಕೊಳ್ಳೋಣ. ನಮ್ಮ ನೀರನ್ನು ನಾವು ಇವತ್ತು ಕಾಯ್ದು ಇಟ್ಟುಕೊಳ್ಳತಕ್ಕಂಥದ್ದರ ಬಗ್ಗೆ ಬೇರ್‍ಯಾರು ಆತಂಕ ವ್ಯಕ್ತಪಡಿಸಬೇಕಾದ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಮೇಲ್ಭಾಗದಲ್ಲಿದ್ದೇವೆ ಎಂದು ನಮಗೆ ಉದ್ಧಟತನ ಇಲ್ಲ. ಆದರೆ, ನಮಗೆ ಕೊಟ್ಟಿರುವ ಪಂಚಾಯಿತಿದಾರರ ತೀರ್ಪು ಏನಿದೆಯೋ ಅದರ ಅಡಿಯಲ್ಲಿ 534 ಟಿ.ಎಂ.ಸಿ. ನೀರನ್ನು ನಾವು ಸ್ಟೋರ್ ಮಾಡಿಕೊಳ್ಳುವ ಬಗ್ಗೆ ಅವರ್‍ಯಾರು ಆತಂಕ ವ್ಯಕ್ತಪಡಿಸಬೇಕಾದ ಅವಶ್ಯಕತೆ ಇಲ್ಲ. ಈ ರಾಜ್ಯದ ಅದರಲ್ಲೂ ಕಾವೇರಿ ನದಿಯ ನೀರಿನ ಪರಿಸ್ಥಿತಿ ಅದರ ಬಗ್ಗೆ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ನಾವು ತುಂಬಾ ಸಂಕಷ್ಟದಲ್ಲಿದ್ದೇವೆ. ನಾವೆಲ್ಲ ಒಂದುಗೂಡಿ ಅದನ್ನು ಮುಂದೆ ಹೇಗೆ ನಿಭಾಯಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಅದರ ವಿವರಣೆಯನ್ನು ನಾನು ಈಗ ಕೊಡಲಿಕ್ಕೆ ಹೋಗುವುದಿಲ್ಲ. ಒಟ್ಟಾರೆ ಅದನ್ನು ಎದುರಿಸುವುಥದ್ದರಲ್ಲಿ ಇಡೀ ಎಲ್ಲಾ ವಿರೋಧ ಪಕ್ಷದ ಸನ್ಮಾನ್ಯ ಗೌರವಾನ್ವಿತ ಸದಸ್ಯರುಗಳು ಸಹಕಾರ ಕೊಟ್ಟಿದ್ದಾರೆ ಎಂದು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಒಂದೆರಡು ವಿಷಯ ಪ್ರಸ್ತಾಪ ಮಾಡುತ್ತೇನೆ. ಏಕೆಂದದರೆ ಬೇರೆ ಒಂದೊಂದು ಪ್ರಾಜೆಕ್ಟ್‌ನ ವಿಷಯದ ಬಗ್ಗೆಯೂ ಚರ್ಚೆ ಮಾಡುತ್ತಾ ಹೋದರು ಅದು ಗಂಟೆಗಟ್ಟಲೆ ಚರ್ಚೆ ಮಾಡಬಹುದು. ಬಹುಶಃ ಸಬ್ಜೆಕ್ಟ್ ಕಮಿಟಿ ಅದೆಲ್ಲವನ್ನೂ ಪರಿಶೀಲನೆ ಮಾಡುತ್ತದೆ. ನಾವು ಜೂನ್ ಎಂಡ್‌ನಲ್ಲಿ ಅಥವಾ ಜುಲೈ ಫಸ್ಟ್ ವೀಕ್‌ನಲ್ಲಿ ಸೇರಿದಂಥ ಕಾಲದಲ್ಲಿ ನೀರಾವರಿ ಇಲಾಖೆಯ ಬಗ್ಗೆ ಪ್ರತಿಯೊಂದು ಯೋಜನೆ ಬಗ್ಗೆಯೂ ನಾನು ಉತ್ತರ ಕೊಡುವುದಕ್ಕೆ ಸಿದ್ಧ ಇದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಶ್ರೀಮಾನ್ ಖರ್ಗೆಯವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. You are also a seasoned politician who was holding several officers, ನೀವು ರೆವಿನ್ಯೂ ಮಂತ್ರಿಯಾಗಿ ಕೆಲಸ ಮಾಡಿರಬಹುದು, ಕೈಗಾರಿಕಾ ಮಂತ್ರಿಯಾಗಿ ಕೆಲಸ ಮಾಡಿರಬಹುದು, ನಿಮಗೆ ನಾನು ಕೇಳುತ್ತೇನೆ, 1458 ಮೈನರ್ ಇರಿಗೇಷನ್ ವರ್ಕ್ಸನ್ನು ಸ್ಟಾರ್ಟ್ ಮಾಡಿದ್ದಾರೆ. ಅದನ್ನು ಮುಗಿಸುವುದಕ್ಕೆ 500 ಕೋಟಿ ರೂಪಾಯಿ

ಬೇಕು. ನಮ್ಮ ರಾಜ್ಯದಲ್ಲಿ ಎಷ್ಟು ನೀರನ್ನು ಬಳಕೆ ಮಾಡಿದ್ದೇವೆ, ಯಾವ ಯಾವ ಬೇಸಿನ್‌ನಲ್ಲಿ ಎಷ್ಟು ನೀರಿದೆ? ಯಾವ ಯಾವ ಸಬ್ ಬೇಸಿನ್‌ನಲ್ಲಿ ಎಷ್ಟು ನೀರಿದೆ? ಎಷ್ಟು ಕೆರೆಗಳನ್ನು ಕಟ್ಟಿದ್ದೇವೆ? ಪುನಃ ಆ ವ್ಯಾಲಿಯಲ್ಲಿ ಕೆರೆ ಹಾಕಿದರೆ ನೀರು ಬರುತ್ತದೆಯೇ ಇವೆಲ್ಲವನ್ನೂ ಪರಿಶೀಲನೆ ಮಾಡಿ ಸಾರ್ವಜನಿಕರ ಹಣವನ್ನು ಖರ್ಚು ಮಾಡುವ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚು ಆ ಕಡೆ ಆಸಕ್ತಿ ಇರಬೇಕು ಎಂದು ನಾನು 1984ರಲ್ಲಿ ಶ್ರೀಮಾನ್ ಬಿ.ಸಿ. ಅಂಗಡಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದೆ. ಅವರು ಒಂದು ವರದಿಯನ್ನು ಕೊಟ್ಟರು. ಆ ವರದಿ ಮುಂದಕ್ಕೆ ಏನಾಯಿತು ಎನ್ನುವ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗಲಿಲ್ಲ. ನಾನು ರಾಜಿನಾಮೇ ಕೊಟ್ಟ ಮೇಲೆ. ಮೊನ್ನೆ ನಾನು ತರಿಸಿ ನೋಡಿದೆ. ಆರು ತಿಂಗಳು ಇರಬಹುದು. 1458 ಕೆಲಸಗಳಿಗೆ ಏನು ಮಂಜೂರಾತಿ ಕೊಟ್ಟಿದ್ದಾರೋ ಈ ರಾಜ್ಯದಲ್ಲಿ ಅಷ್ಟು ಸಣ್ಣ ನೀರಾವರಿ ಯೋಜನೆಯನ್ನು ಕಟ್ಟಲಿಕ್ಕೆ ಸಾಧ್ಯವಿದೆಯೋ ಎಂದರೆ ನನ್ನ ಪ್ರಾಮಾಣಿಕ ಅನಿಸಿಕೆ ಸಾಧ್ಯವಿಲ್ಲ. ಆದರೆ ನಮ್ಮ ಬೇಡಿಕೆ ಇರುತ್ತದೆ, ಸ್ವಾಭಾವಿಕವಾಗಿ ರಾಜಕೀಯ ಮುಖಂಡರುಗಳು ಇರಬಹುದು, ಸಾರ್ವಜನಿಕರು ಇರಬಹುದು, ನಾವು ಅರ್ಜಿಗಳನ್ನು ಕೊಡುವುದು ಸಾಧ್ಯವಿದೆ. ಒಂದೇ ವ್ಯಾಲಿಯಲ್ಲಿ ಇವತ್ತು ಹತ್ತು ಕೆರೆಗಳನ್ನು ಹಾಕಿದರೆ ಎಷ್ಟು ನೀರು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಜನೆ ಮಾಡಬೇಕಾಗುತ್ತದೆ. 1458 ಕೆಲಸಗಳನ್ನು ಪೂರೈಸಬೇಕಾದರೆ ಸುಮಾರು 600 ರಿಂದ 700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಯಾವ ಸೌಭಾಗ್ಯಕ್ಕೆ ಖರ್ಚು ಮಾಡಬೇಕು? ಚಿಕ್ಕಮಗಳೂರು ಹತ್ತಿರ ಒಂದು ಕೆರೆ ಕಟ್ಟಿದ್ದಾರೆ, ಕಟ್ಟಿ ಆದಮೇಲೆ ಒಂದು ದಿನ ಕೂಡ ಆ ಕೆರೆಗೆ ನೀರು ಬರಲಿಲ್ಲ. ಆದಕ್ಕೆ ನಾವು ಏನು ಬೇಕಾದರೂ ಹೇಳಬಹುದು. Rain shadow area ಎಂದು ಹೇಳಿ ಇಂಗ್ಲೀಷ್ ಪದಗಳು ಬರುತ್ತದೆ, ಅದನ್ನು ಪ್ರಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ರೀತಿ ನಾನು ಮಾಡಲಿಕ್ಕೆ ಸಿದ್ಧನಿಲ್ಲ. ಅದಕ್ಕೆ ಪುನಃ ಅದೇ ಬಿ.ಸಿ. ಅಂಗಡಿಯವರ ಅಧ್ಯಕ್ಷತೆಯಲ್ಲಿ ಪುನಃ ಆ ಕಮಿಟಿಯನ್ನು ರಿವೈವ್ ಮಾಡಿದ್ದೇನೆ. ಮೂರು ತಿಂಗಳಲ್ಲಿ ನೀವು ವರದಿ ಕೊಡಬೇಕು ಎಂದು ಹೇಳಿದ್ದೇನೆ. ಎಷ್ಟು ಕೆಲಸಗಳನ್ನು ಮಾತ್ರ ನಾವು ಮಾಡಲಿಕ್ಕೆ ಸಾಧ್ಯವಾಗುತ್ತದೆ, ಆ ಬೇಸಿನ್‌ನಲ್ಲಿ, ಆ ಸಬ್ ಬೇಸಿನ್‌ನಲ್ಲಿ ಎಷ್ಟು ನೀರಿದೆ ಎನ್ನುವುದನ್ನು ನೀವು ವರದಿ ಕೊಟ್ಟ ಮೇಲೆ ಆ ಕೆಲಸ ಪ್ರಾರಂಭ ಮಾಡತಕ್ಕಂಥದ್ದಕ್ಕೆ ಅನುಮತಿ ಕೊಡುತ್ತೇನೆ. ಹಣ ಇಟ್ಟಿದ್ದೇವೆ. ಹಣ ಇಟ್ಟರೂ ನಾನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ನೇರವಾಗಿ ಹೇಳುತ್ತೇನೆ. ಏಕೆಂದರೆ ಸಭೆಯಲ್ಲಿ ಹೇಳುವಂಥ ಕಾಲದಲ್ಲಿ ಹಣ ಜನತೆಯದು. ನಮ್ಮದಲ್ಲ ಹಣ. ಈ ಹಣವನ್ನು ಖರ್ಚು ಮಾಡುವಾಗ ಸ್ವೇಚ್ಛಾಚಾರದಿಂದ ಖರ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಸಬ್ ಬೇಸಿನ್‌ನಲ್ಲಿ ಎಷ್ಟು ನೀರಿದೆ ಎನ್ನುವುದನ್ನು ಅವರು ವರದಿ ಕೊಟ್ಟ ಮೇಲೆ ನಾವು ಆ ಯೋಜನೆಗಳಲ್ಲಿ ಅವರಿಗೆ ಹೇಳಿದ್ದೇನೆ, ಯಾವುದು ಮೊದಲನೆಯ ಚರ್ಚೆಗೆ ಸೇರಿಸಬೇಕಾಗುತ್ತದೆ, ಎರಡನೇ ಚರ್ಚೆಗೆ ಸೇರಿಸಬೇಕಾಗುತ್ತದೆ, ಮೂರನೇ ಚರ್ಚೆಗೆ ಸೇರಿಸಬೇಕಾಗುತ್ತದೆ, ನಾಲ್ಕನೇ ಚರ್ಚೆಗೆ ಸೇರಿಸಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ ಕೆಲವು ವರ್ಕ್ ಅಡ್ವಾನ್ಸ್ ಸ್ಟೇಜ್‌ನಲ್ಲಿರಬಹುದು. ಇವುಗಳನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ತಪ್ಪಾಗಿದೆಯೋ ಸರಿಯಾಗಿದೆಯೋ ಮಾಡಿ ಬಿಟ್ಟಿದ್ದಾರೆ. ಅದು 80-85 ಪರ್ಸೆಂಟ್ ಖರ್ಚಾಗಿರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹದನ್ನು ನಾವು ಮಾಡುವುದಾದರೆ

ಆ ಬೇಸಿನ್‌ನಲ್ಲಿ ಉಳಿಕೆ ಕೆಲಸಗಳಿಗೆ ನೀರು ಇಲ್ಲ ಎಂದರೆ ನಾವು ಆ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ಅವರಿಗೆ ಮೂರು ತಿಂಗಳಲ್ಲಿ ವರದಿ ಕೊಡಬೇಕೆಂದು ನಾನು ಹೇಳಿದ್ದೇನೆ, ಇದರ ಜೊತೆಗೆ ನಾವು ಏನು ಬಾಂಡ್‌ಗಳಿಂದ ಶೇರುಗಳಿಂದ ಹಣವನ್ನು ಪ್ರೈವೇಟ್ ಮತ್ತು ಪಬ್ಲಿಕ್ ಪ್ಲೇಸ್‌ಮೆಂಟ್‌ನಿಂದ ಪಡೆದುಕೊಳ್ಳಬೇಕು ಎಂದು ಮಾಡಿದ್ದೇವೆಯೋ ಅದರ ಜೊತೆಗೆ 145 ಕೋಟಿ ರೂಪಾಯಿ ಹಣವನ್ನು ಇವತ್ತು ಏನು ಇನ್‌ಫ್ರಾಸ್ಟ್ರಕ್ಚರ್ ಒಂದು ಫಂಡ್ ಅನ್ನು ಕ್ರಿಯೇಟ್ ಮಾಡಿದ್ದಾರೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ, ಆ ಒಂದು ವ್ಯಾಪ್ತಿಯಲ್ಲಿ 145 ಕೋಟಿ ಹಣವನ್ನು ಇವತ್ತು 6 ಮೀಡಿಯಮ್ ಪ್ರಾಜೆಕ್ಟ್‌ಗಳಿಗೆ ಹಾಗೂ ಸುಮಾರು 80 ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹಣವನ್ನು ಪಡೆದುಕೊಂಡಿದ್ದೇವೆ. ಎರಡು ವರ್ಷದಲ್ಲಿ ನಮ್ಮ ಭಾಗದ ಹಣವನ್ನೂ ಸೇರಿಸಿ ಆ ಕೆಲಸಗಳನ್ನು ಸಂಪೂರ್ಣವಾಗಿ ಮುಗಿಸತಕ್ಕಂತಹ ಹೊಣೆಗಾರಿಕೆಯನ್ನು ಸರ್ಕಾರ ಹೊತ್ತುಕೊಂಡಿದೆ. ಇವತ್ತು ಮಂಜೂರಾತಿಯನ್ನು ದೊರಕಿಸಿಕೊಂಡಿದ್ದೇವೆ ಎನ್ನತಕ್ಕ ಮಾತನ್ನು 145 ಕೋಟಿ ಇನ್‌ಫ್ರಾಸ್ಟ್ರಕ್ಚರಲ್ ಫೈನಾನ್ಸಿಯಲ್ ಅಸಿಸ್ಟೆನ್ಸ್, 2000 ಕೋಟಿ ಕೇಂದ್ರ ಸರ್ಕಾರದವರು ಕಳೆದ ಬಜೆಟಿನಲ್ಲಿ ಒಂದು ನಿರ್ಣಯದ ಪ್ರಕಾರ, ರಿಸರ್ವ್ ಬ್ಯಾಂಕಿನಲ್ಲಿ ಹಣ ಇಟ್ಟಿದ್ದಾರೆ. ಅಂದರೆ ನಬಾರ್ಡ್ ಸಂಸ್ಥೆಯ ಮುಖೇನ ಕೊಡತಕ್ಕದ್ದಕ್ಕೆ ಆರು ಮೀಡಿಯಮ್ ಪ್ರಾಜೆಕ್ಟ್‌ಗೆ ಮತ್ತು 80 ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗೆ ಹಣವನ್ನು ಪಡೆದುಕೊಂಡಿದ್ದೇವೆ. ಅದನ್ನು ಎರಡು ವರ್ಷದಲ್ಲಿ ಮಾಡಿ ಮುಗಿಸತಕ್ಕಂಥದ್ದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಅನೇಕ ವಿಷಯಗಳು ಇವೆ. ಲಿಫ್ಟ್ ಇರಿಗೇಷನ್ ಬಗ್ಗೆ ಹೇಳತಕ್ಕದ್ದು ಪ್ರಯೋಜನ ಆಗುವುದಿಲ್ಲ. ಅನೇಕ ಕಡೆ ಕೊಂಡಿಟ್ಟು ತಂದಂತಹ ಸಾಮಾನುಗಳು ಇಲ್ಲ. ಅದರ ಬಗ್ಗೆ ಸುಮ್ಮನೆ ಯಾರಿಗೆ ಶಿಕ್ಷೆ ಕೊಡುವುದು, ಯಾರಿಗೆ ಬಿಡುವುದು, ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಕಾರಣ ಏನು ಎಂದರೆ 3-4 ವರ್ಷದ ಪ್ರಕರಣಗಳು, ಕೆಲವರು ಸತ್ತು ಹೋಗಿದ್ದಾರೆ, ಕೆಲವರು ಜೀವಂತವಾಗಿದ್ದಾರೆ. ಇದರಲ್ಲಿ ಚರ್ಚೆ ಮಾಡಿಕೊಳ್ಳುವುದಾಗಲಿ ನನ್ನ ಗೋಳನ್ನು ತೋಡಿಕೊಳ್ಳತಕ್ಕದ್ದಾಗಲೀ ಅರ್ಥ ಇಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಏನು ಈ ಒಂದು ರೂಲ್ 69ರ ಕೆಳಗಡೆ ವಿಷಯ ತಂದಿದ್ದಾರೆ ಇದರ ಬಗ್ಗೆ ಒಂದು ಮಾತನ್ನು ಕೊನೆಯದಾಗಿ ಒಂದು ಶಬ್ದವನ್ನು ಪ್ರಯೋಗ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಚುನಾವಣಾ ದೃಷ್ಟಿಯಿಂದ ಈ ಮಾತನ್ನು ಹೇಳಲಿಲ್ಲ. ಹೋದ ಸಾರಿ ಯಾವ ಚುನಾವಣೆ ಇತ್ತು? ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇನೆಂದು ಹೇಳಿದಾಗ, ಚುನಾವಣೆ ನನಗೆ ಇರಲಿಲ್ಲ. ಆದರೆ ನೀವೆಲ್ಲಾ ತಿಳಿದುಕೊಂಡಿರುವ ರೀತಿ ವರ್ಷಕ್ಕೆ ಎರಡು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದರೂ ಸಾಧ್ಯವಾಗುವುದಿಲ್ಲವೆಂದು ನಮಗೆ ಗೊತ್ತಿದೆ. ಅದರಿಂದ ನಾನು ನನ್ನಷ್ಟಕ್ಕೆ ಸ್ವಪ್ರೇರಣೆಯಿಂದ ಹೇಳಿದೆ. ಕನಿಷ್ಟ ಒಂದು ಸಾವಿರ ಕೋಟಿ ಹಣವನ್ನಾದರೂ ಖರ್ಚು ಮಾಡಬೇಕೆಂದು ಹೇಳಿದೆ. ದಟ್ ಈಸ್ ಮೈ ಇಂಟೆನ್‌ಷನ್. ಈ ಮಾತನ್ನು ನಾನು ನಿಮಗೆ ಹೇಳುವುದಿಲ್ಲ. ಯಾವಾಗಲಾದರೂ ರೂಲ್ 69ರ ಕೆಳಗಡೆ, ಇದಿಷ್ಟೂ ಪುಸ್ತಕ ತರಿಸಿ ನೋಡಿದೆ. ರೂಲ್ 69ರ ಕೆಳಗಡೆಯೋ ಅಥವಾ ಅಜರ್ನ್‌ಮೆಂಟ್ ಮೋಷನ್ ಬಗ್ಗೆಯೋ ಯಾವಾಗಲಾದರೂ ಈ ಸದನದಲ್ಲಿ ಚರ್ಚೆ ಆಗಿದೆಯೋ ಎಂದು ತರಿಸಿದೆ. ನಾನು ಸೋತಿದ್ದು 1989ರಲ್ಲಿ. 1989ರಲ್ಲಿ ಸೋತ ಮೇಲೆ ಏನಾದರೂ ರೂಲ್ 69ರ ಕೆಳಗಡೆ ಅಜರ್ನ್‌ಮೆಂಟ್ ಮೋಷನ್ ಮತ್ತೊಂದರಲ್ಲಿ

ವಿರೋಧ ಪಕ್ಷದವರಿಂದ ಚರ್ಚೆ ಆಗಿದೆಯೋ ಎಂದು ಹುಡುಕಿದೆ. ನೋಡೋಣ, ಏನಾದರೂ ಇಷ್ಟೊಂದು ಆಸಕ್ತಿ ತೋರಿಸಿದ್ದಾರೆ ಎಂದು ಹುಡುಕಿದೆ. ಈ ಸದನದಲ್ಲಿ ರೂಲ್ 69ರ ಕೆಳಗಡೆಯೂ ಚರ್ಚೆ ಆಗಿಲ್ಲ, ಅಜರ್ನ್‌ಮೆಂಟ್ ಮೋಷನ್ ಕೆಳಗಡೆಯೂ ಚರ್ಚೆ ಆಗಲಿಲ್ಲ. ಈ ಐದಾರು ವರ್ಷದಲ್ಲಿ. ನಾನು ಬಂದು ಒಂದು ವರ್ಷದಲ್ಲಿ ಎರಡು ಸಾರಿ ಚರ್ಚೆ ಆಯಿತು. ನಾನು ಏತಕ್ಕೆ ಈ ಮಾತು ಹೇಳಿದೆ ಅಂದರೆ, ನೀವು ನನಗೆ ಎಚ್ಚರಗೊಳಿಸುತ್ತಿದ್ದೀರಿ ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೃಷ್ಣಾ ಮೇಲೆ ಆಗಿಲ್ಲ, ಮತ್ತೆ ಬೇರೆ ಯಾವುದರಲ್ಲೂ ಆಗಿಲ್ಲ ಎಂದು ನೀವು ಬೇರೆ ವಿಚಾರ ಹೇಳುತ್ತೀರೋ?

ಶ್ರೀ ಹೆಚ್.ಡಿ.ದೇವೇಗೌಡ:- ಯಾವ ಹಿಂದಿನ ಸರ್ಕಾರಗಳು ಇದಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಲಿಲ್ಲವೋ, ಯಾವ ಹಿಂದಿನ ಸರ್ಕಾರಗಳು ಇಷ್ಟೊಂದು ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಿಲ್ಲವೋ ಆ ಸಂದರ್ಭದಲ್ಲಿ ಈ ಸದನದಲ್ಲಿ ರೂಲ್ 69 ಇಲ್ಲ, ಅಜರ್ನ್‌ಮೆಂಟ್ ಮೋಷನೂ ಇಲ್ಲ, ಐದು ವರ್ಷ. ಆದರೆ ನಾನು ಬಂದು ವರ್ಷದೊಳಗೆ ಎರಡು ಸಾರಿ ಅಜರ್ನ್‌ಮೆಂಟ್ ಮೋಷನ್ ಬಂದಿದೆ. ಅಂದರೆ ವಿರೋಧಿ ಪಕ್ಷದ ತೀವ್ರತೆ ನಿಮ್ಮ ಕಳಕಳಿ ಈ ರಾಜ್ಯದ ನೀರನ್ನು ಉಳಿಸಿಕೊಳ್ಳಬೇಕೆಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸನ್ಮಾನ್ಯ ಯಡಿಯೂರಪ್ಪನವರು ಆಗ ವಿರೋಧ ಪಕ್ಷದ ನಾಯಕರಾಗಿ ಇರಲಿಲ್ಲ.

ಶ್ರೀ ಎಚ್.ಡಿ.ದೇವೇಗೌಡ:- ಅವರು ಅಲ್ಲಿ ಕುಳಿತಿದ್ದರು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಅವರು ವಿರೋಧ ಪಕ್ಷದ ನಾಯಕರಾಗಿ ಇರಲಿಲ್ಲ.

ಶ್ರೀ ಹೆಚ್.ಡಿ.ದೇವೇಗೌಡ:- ನಾಯಕರಾಗಿ ಇರಲೇಬೇಕು ಎಂದಲ್ಲ. ಒಬ್ಬ ಗೋಪಾಲ ಗೌಡರು ಇಡೀ ಸದನವನ್ನು ನಡುಗಿಸುತ್ತಿದ್ದರು. ನೋಡಿ ನೀವು ಒಬ್ಬರೇ ಇದ್ದೀರಿ, ನಮ್ಮನ್ನೆಲ್ಲಾ ಎಷ್ಟು ಹೆದರಿಸುತ್ತೀರಿ. ಅವರೊಬ್ಬರೇ ಇದ್ದು ಎಷ್ಟು ಹೆದರಿಸುತ್ತಾರೆ.

ಅಧ್ಯಕ್ಷರು:- ನಾವೇ ಹೆದರುತ್ತೇವೆ, ಇನ್ನು ನೀವು ಹೆದರುವುದು ಏನು ಆಶ್ಚರ್ಯ.

ಶ್ರೀ ಹೆಚ್.ಡಿ.ದೇವೇಗೌಡ :- ಆದ್ದರಿಂದ ಇಷ್ಟೇ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಎರಡು ಸಾವಿರ ಅಜರ್ನ್‌ಮೆಂಟ್ ಮೋಷನ್ ತಂದರೂ ಸ್ವಾಗತ ಮಾಡುತ್ತೇನೆ. ರೂಲ್ 69ರ ಕೆಳಗಡೆ ನೀವು ಚರ್ಚೆ ಮಾಡಿದರೂ ನಾನು ಸ್ವಾಗತ ಮಾಡುತ್ತೇನೆ. ನನಗೆ ಏನೂ ಬೇಸರ ಇಲ್ಲ. ಪದೇ ಪದೇ ಈ ಭಾಗದ ಜನತೆಗೆ ಅನ್ಯಾಯ ಆಗಬಾರದು ಎಂದು ಸದಾ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರೋ, ಅದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮಷ್ಟೇ ಕಾಳಜಿ, ಹೆಚ್ಚು ಇಲ್ಲ. ನಿಮ್ಮಷ್ಟೇ ಕಾಳಜಿಯನ್ನು ಇಟ್ಟುಕೊಂಡು ಯಾವ ಜನ ನಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೋ, ಅವರಿಗೆ ಅನ್ಯಾಯ ಆಗದ ರೀತಿಯಲ್ಲಿ ಆ ಭಾಗದ ಜನತೆಯನ್ನು ಉಳಿಸಿಕೊಳ್ಳಲಿಕ್ಕೆ ಈ ಸರ್ಕಾರ ಕಟಿಬದ್ಧವಾಗಿದೆ ಎನ್ನುವ ಮಾತನ್ನು ನೇರವಾಗಿ ಈ ಸದನದ ಮೂಲಕ ಆ ಭಾಗದ ಜನತೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ವಿವಂಚನೆ ಬೇಡ, ಕಳಕಳಿ ಬೇಡ, ಯಾರ ಮನಸ್ಸಿನಲ್ಲೂ ಆತಂಕ ಬೇಡ. ಈ ನೀರನ್ನು ಹೇಗೆ ಉಳಿಸಿಕೊಳ್ಳಬೇಕು ಎನ್ನತಕ್ಕದ್ದು ನನ್ನ ಬುದ್ಧಿಯ ತಿಳುವಳಿಕೆಗೆ ಎಷ್ಟು ಸಾಧ್ಯತೆ ಇದೆಯೋ, ಅವೆಲ್ಲ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿ ಈ 69ರ ನಿಯಮಾವಳಿ

ಚರ್ಚೆಯಲ್ಲಿ ಅವರೇನು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆಲ್ಲಾ ನಾನು ಅಭಾರಿ ಆಗಿದ್ದೇನೆ. ಇಷ್ಟು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೆ, ಸದನದ ಕಾರ್ಯಕಲಾಪ ಪ್ರಾರಂಭ ಆದ ಮೊದಲನೆಯ ದಿವಸವೇ ಕೃಷ್ಣಾ ಜಲಾನಯನ ಪ್ರದೇಶದ ಬಗ್ಗೆ ರೂಲ್ 69ರ ಕೆಳಗಡೆ ಚರ್ಚೆ ಆಗಬೇಕು ಎಂದು ನೋಟೀಸ್ ಕಳಿಸಿಕೊಟ್ಟಿದ್ದೆ. ಹಿಂದೆ ಏಕೆ ಮಾಡಲಿಲ್ಲ, ಯಾರು ಮಾಡಲಿಲ್ಲ. ಅದೇನು ಕಾರಣ ಇತ್ತು? ಅಥವಾ ನಾನು ಮೂಲೆಯಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರ ಪಕ್ಕದಲ್ಲೇ ನಾವು ಕುಳಿತಾಗಲೂ ಸಹ ಕಾವೇರಿ, ಕೃಷ್ಣಾ ಪ್ರಶ್ನೆ ಬಂದಾಗ ನಾವೇನು ಮಾತನಾಡಿದ್ದೇವೆಂದು ದಾಖಲೆಯಲ್ಲಿದೆ. ಯಾವ ಕಾಲದಲ್ಲಿ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗಲಿಂದ ಇವತ್ತಿನವರೆಗೆ ರೈತನ ಪ್ರಶ್ನೆ ಬಂದಾಗ, ಯಾವ ಮುಲಾಜಿಗೂ ಈ ಯಡಿಯೂರಪ್ಪ ತಲೆ ಬಾಗಲಿಲ್ಲ. ನೇರವಾಗಿ ಇರುವುದನ್ನು ಇದ್ದ ಹಾಗೆ ಹೇಳಿದ್ದೇನೆ. ನಮ್ಮ ಮುಖ್ಯ ಮಂತ್ರಿ ದೇವೇಗೌಡರಿಗೆ ಎಲ್ಲ ವಿಷಯಗಳೂ ಗೊತ್ತಿದೆ. ಏಕೆಂದರೆ ಒಂದು ತರಹ ಸರ್ವಜ್ಞರು ಇದ್ದ ಹಾಗೆ. ಅದರಿಂದ ಅದರ ಬಗ್ಗೆ ಎರಡು ಮಾತಿಲ್ಲ. ನನ್ನದೇನೂ ಪ್ರಶ್ನೆ ಇಲ್ಲ. ಒಂದೇ ಒಂದು ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ವಿನಂತಿ ಮಾಡುವಂತಹದು ಒತ್ತಾಯ ಮಾಡುವಂತಹದು, ನಾವೇನೂ ನಿಮಗೆ ಒತ್ತಾಯ ಮಾಡಿ, ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಎಂದು ಈ ಸದನದಲ್ಲಿ ಒಳಗಡೆ ಹೊರಗಡೆ ಹೇಳಿಲ್ಲ. ತಾವು ಹೇಳಿದಿರಿ; ಸಂಪನ್ಮೂಲವನ್ನು ಅರ್ಥ ಮಾಡಿಕೊಂಡು ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿ, ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಆ ಭಾಗದ ಜನರಿಗೆ ಅನ್ಯಾಯ ಆಗಿದೆ, ನಾನು ರೈತನ ಮಗನಾಗಿ ಅದನ್ನು ಮಾಡಿ ತೀರಿಸುತ್ತೇನೆಂದು, ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇನೆಂದು ತಾವು ಹೇಳಿದ್ದೀರಿ. ಆದರೆ ಇವತ್ತು ನಿಮ್ಮ ಮಾತನ್ನು ಕೇಳಿದಾಗ, ಆ ವಚನ ಬದ್ಧರಾಗಿದ್ದೇವೆ, ಕಾಲ ಬದ್ಧರಾಗಿದ್ದೇವೆ ಇದೆಲ್ಲಾ ಹಳೆಯ ಮಾತು ಎನ್ನುವಂತಹ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದೀರಿ. ನಾನು ನಿಮ್ಮನ್ನು ಇಷ್ಟೇ ನೇರವಾಗಿ ಕೇಳುವುದು. ತಾವೇನು ಚುನಾವಣಾ ಪ್ರಣಾಳಿಕೆಯಲ್ಲಿ ಈ ಸದನದಲ್ಲಿ ಮುಖ್ಯ ಮಂತ್ರಿಗಳಾದ ಮೇಲೆ ಒಂದು ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ, ಈಗ ಸುಮಾರು 400 ಕೋಟಿ ರೂಪಾಯಿ ಮಾರ್ಚ್‌ವರೆಗೆ ಖರ್ಚು ಮಾಡಿದರೆ ಆಗಬಹುದು. ಉಳಿದ ಹಣವನ್ನು ಜೂನ್ ಒಳಗಡೆ 95-96ರ ಲೆಕ್ಕದಲ್ಲಿ ಖರ್ಚು ಮಾಡುತ್ತೀರಾ? 1996-97ಕ್ಕೆ ಕನಿಷ್ಟ ಒಂದು ಸಾವಿರದ ಐದು ಕೋಟಿ ಖರ್ಚು ಮಾಡುವುದಕ್ಕೆ ಏನಾದರೂ ತಮ್ಮ ಕಣ್ಮುಂದೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತೀರೋ, ಇದು ಒಂದು. ಎರಡನೆಯದು, ಅದು ಹೇಮಾವತಿ ಇರಬಹುದು, ಹಾರಂಗಿ ಇರಬಹುದು, ಮತ್ತೊಂದು ಇರಬಹುದು. ಅದಕ್ಕೆ ಖರ್ಚು ಮಾಡುವಂತಹ ಕಾಲದಲ್ಲಿ ವರ್ಲ್ಡ್ ಬ್ಯಾಂಕ್ ಏಡ್ ನಮಗೆ ಇರಲಿಲ್ಲ. ನಮಗೆ ಕಳಕಳಿ ಇತ್ತು, ಕಮಿಟ್‌ಮೆಂಟ್ ಇತ್ತು, ಅಲ್ಲಿ ಕುಳಿತಂತಹ ಜನಕ್ಕೆ ಇದನ್ನು ಮಾಡಿಯೇ ತೀರಬೇಕು ಎನ್ನುವಂತಹ ಪ್ರಾಮಾಣಿಕ ಪ್ರಯತ್ನ ಇತ್ತು, ಅದನ್ನು ಮಾಡಿದ್ದೇವೆ. ಇದು ಒಂದು ರೀತಿಯ ಆ ಭಾಗದ ಜನರಿಗೆ ಮಲತಾಯಿ ಧೋರಣೆ ಮಾಡುತ್ತಿದ್ದೇವೆನೋ ಎನ್ನುವಂತಹ ಭಾವನೆ ಮೂಡಿದೆ. ಹಾಗಾಗಿ ತಾವು ಏನು ಈ ಸದನದಲ್ಲಿ ಹೇಳಿದ್ದೀರಿ ಅದನ್ನು ಈಡೇರಿಸಿಕೊಳ್ಳಬೇಕು. ತಾವು ಹೇಳಿದಿರಿ, ನಾನು ಹಿಂದಿನ ಕಾಲದಲ್ಲಿ ಇದ್ದಂಗೆ ಓವರ್ ಡ್ರಾಫ್ಟ್ ತೆಗೆದುಕೊಳ್ಳಲಿಲ್ಲ, ಪಿಯರ್‌ಲೆಸ್‌ನಿಂದ ಸಾಲ

ತರಲಿಲ್ಲ, ಎಂದು ಹೇಳಿದಿರಿ. ಸ್ವಾಮಿ ಇದೇನು? ಬಾಂಡ್ ಮೂಲಕ 180 ಕೋಟಿ ತೆಗೆದುಕೊಳ್ಳುವುದು ಸಾಲವಲ್ಲವಾ? ನಮ್ಮ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಕೊಡುತ್ತಾರೋ? ಅದಕ್ಕೆ ಬಡ್ಡಿ ಕೊಡುವುದಿಲ್ಲವಾ? ಅದು ಆ ಕಡೆ ತೆಗೆದುಕೊಳ್ಳುವ ಬದಲು ಈ ಕಡೆ ತೆಗೆದುಕೊಂಡಿದ್ದೀರಿ. ಸಾಲದಲ್ಲಿ ವ್ಯತ್ಯಾಸವೇನೂ ಇಲ್ಲಾ, ಅದೇ ಸಾಲ. ಆದರೆ ಇನ್ನೂ ಯಾವುದೇ ರೀತಿಯಲ್ಲಿ ಬೇಕಾದರೆ ಮಾಡಿ, ಬೇರೆ ಕಾರ್ಯಕ್ರಮಗಳನ್ನು ಬದಿಗೊತ್ತಿ, ನಾವು ಸಹಕಾರ ಕೊಡುವುದಕ್ಕೆ ರೆಡಿ ಇದ್ದೇವೆ. ಅದು ಪೂರ್ಣ ಮಾಡಿ ಎನ್ನುವಂತಹ ಒತ್ತಾಯವನ್ನು ನಾವು ಮಾಡಿದ್ದೇವೆ. 1959ರಲ್ಲಿ ಘಟಪ್ರಭಾ ಯೋಜನೆ ಪ್ರಾರಂಭ ಆಯಿತು. ಯಾರು ಕಾರಣ ಎಂದು ನಾನು ಹೇಳುವುದಿಲ್ಲ. ಆದರೆ ಏಕೆ ಇವತ್ತಿನವರೆಗೂ ಆಗಲಿಲ್ಲ. ನಾನು ಭಾಷಣ ಮಾಡುತ್ತಿಲ್ಲ. ನಾನು ಎದ್ದು ನಿಂತ ತಕ್ಷಣ ನಿಮಗೆ ಭಾಷಣ ಎಂದು ಅನಿಸುತ್ತದೆ, ಅದೇ ಸಮಸ್ಯೆ ಆಗಿರುವುದು. ಏಕೆಂದರೆ ನಮ್ಮ ಡಾ|| ರಾಜರಾವ್ ಇಲ್ಲಿ ಕೆಲಸ ಮಾಡುತ್ತಿದ್ದರು. ತುಂಬಾ ಪ್ರಾಮಾಣಿಕರು ಎಂದು ನೀರಾವರಿ ಸಭೆಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಅವರನ್ನು ಏಕೆ ಬದಲಾವಣೆ ಮಾಡಿದರೋ ಗೊತ್ತಿಲ್ಲ. ಸ್ವಾಮಿ ಏನಾದರೂ ನಿಷ್ಠೆ ಕಡಿಮೆ ಆಯಿತೇನೋ ಗೊತ್ತಿಲ್ಲ. ನಮಗೆ ಇದು ಗೊಂದಲವಾಗಿದೆ. ನೀವು ಕ್ಲಾರಿಫಿಕೇಷನ್ ಕೇಳಿದಿರಿ, ನನ್ನ ಪ್ರಶ್ನೆಗೆ ಒಂದಕ್ಕೂ ಉತ್ತರ ನೀವು ಕೊಡಲಿಲ್ಲ. ನಾನು ಮಾತನಾಡಿದ್ದೇ ನಿಮಗೆ ಕೇಳುತ್ತೇನೆ. ತಾವು ಹೇಳಿದಂತಹ ಸಾವಿರ ಕೋಟಿ, ಈ ಸದನದಲ್ಲಿ ಮುಖ್ಯ ಮಂತ್ರಿಗಳಾಗಿ ಹೇಳಿದಂತಹ ಮಾತು. ಹೊರಗಡೆ ಎಲ್ಲೋ ಪತ್ರಿಕಾ ಹೇಳಿಕೆ ಅಲ್ಲ. ಅದನ್ನು ಮಾಡೇ ತೀರಬೇಕು, ಹಣವನ್ನು ತೆಗೆದು ಇಡಬೇಕು. ಇದು ನಮ್ಮ ಒತ್ತಾಯ. ಮಾಡದೇಇದ್ದರೆ ನೀವು ಮುಖ್ಯ ಮಂತ್ರಿಯಾಗಿ ಜನತೆಗೆ ಕೊಟ್ಟಂತಹ ಭರವಸೆಯಿಂದ ವಿಫಲತೆ ಹೊಂದಿದಂತೆ ಆಗುತ್ತದೆ. ಜೂನ್ ಒಳಗಡೆ ಏನಾದರೂ ಖರ್ಚು ಮಾಡುತ್ತೀರೋ? ಮತ್ತೆ 1996-97ನೇ ಸಾಲಿಗೆ ಕನಿಷ್ಟ 1500 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ನಿಮ್ಮ ಕಣ್ಮುಂದೆ ಏನಾದರೂ ಕಾರ್ಯಕ್ರಮ ಇದೆಯೋ? ಜುರಾಲಾ ಆಣೆಕಟ್ಟು ಬಗ್ಗೆ ನಾನು ಇಲ್ಲಿ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಪ್ರತಿಪಕ್ಷದ ನಾಯಕನಾಗಿ ರೂಲ್ 69ನಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದಾಗ, ಪ್ರಮುಖವಾದಂತಹ ವಿಷಯಕ್ಕೆ ಸರಿಯಾದಂತಹ ಉತ್ತರವನ್ನು ನಾಡಿನ ಜನರ ಪರವಾಗಿ ನಾನಿಲ್ಲಿ ಪ್ರತಿಪಕ್ಷದ ಸ್ಥಾನದಲ್ಲಿ ನಿಂತುಕೊಂಡು ನಿರೀಕ್ಷೆ ಮಾಡುತ್ತೇನೆ. ಜುರಾಲಾ ಆಣೆಕಟ್ಟು ಕಟ್ಟುವ ಸ್ಥಳಕ್ಕೆ ನಾನು ಹಾಗೂ ಡಾ| ತುಂಗಾ ಹೋಗಿ ಬಂದೆವು. ಲೋಕ ಸಭೆಯಲ್ಲಿ ನೀರಾವರಿ ಸಚಿವರು ಒಪ್ಪಿಕೊಂಡಿದ್ದಾರೆ, ಎತ್ತರ ಕಟ್ಟಿದ್ದೇವೆ ಎಂದು. ತಮ್ಮ ಉತ್ತರದಲ್ಲಿ ಒಂದು ಮಾತೂ ಇಲ್ಲ. ಅದಕ್ಕಾಗಿ ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಜುರಾಲಾ ಆಣೆಕಟ್ಟು ಎಷ್ಟು ಮೀಟರ್ ಎತ್ತರ ಇದೆ? ಜಾಸ್ತಿ ಯಾರು ಕಟ್ಟಿದರು? ಯಾರು ಜವಾಬ್ದಾರರು? ಇದು ನಿಜವಾಗಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತೆ ಅಲ್ಲಿ ಮುಳುಗಡೆ ಆಗುವಂತಹ ಪ್ರದೇಶ ಜಾಸ್ತಿ ಆಗುತ್ತಿದೆ, ಪವಿತ್ರವಾದಂತಹ ಕೆಲವು ಯಾತ್ರಾ ಕ್ಷೇತ್ರಗಳೇನು ಮುಳುಗಡೆ ಆಗುತ್ತಿವೆ, ಅದನ್ನು ನಮ್ಮ ಹಣದಿಂದ ಕೆಲಸ ಪ್ರಾರಂಭ ಮಾಡುತ್ತೇವೆಂದು ತಾವು ಈ ಸದನದಲ್ಲಿ ಭರವಸೆ ಕೊಟ್ಟಿದ್ದೀರಿ. ಕೆಲಸ ಪ್ರಾರಂಭವಾಗಿದೆಯೇ? ಎಷ್ಟು ಹಣ ಖರ್ಚಾಗಿದೆ? ಇದರ ಬಗ್ಗೆ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ನೇರವಾಗಿ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಿದ್ದರೂ ತಾವು ಉತ್ತರ ಕೊಡುವಾಗ ಅದರ ಬಗ್ಗೆ ಒಂದೂ ಶಬ್ದವನ್ನು ಹೇಳಿಲ್ಲ. ಹಾಗೆಯೇ

ಭದ್ರಾ ಬಲದಂಡೆ ಕಾಮಗಾರಿ ಕೆಲಸ ಮುಗಿಯದೆ ಆ ಭಾಗದ ಜನರು ಕಳೆದ 4-5 ವರ್ಷಗಳಿಂದ ಗೊಂದಲದಲ್ಲಿ ಸಿಲುಕಿ ಸಾಯುತ್ತಿದ್ದಾರೆ. ತಾವು ಈಗ ಉತ್ತರಿಸಬೇಕಾಗಿರುವುದು ಒಂದು ಜುರಾಲಾ ಯೋಜನೆ, ಇನ್ನೊಂದು ತುಂಗಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ನಿಮ್ಮ ಕಾರ್ಯಕ್ರಮಗಳೇನು? ಮತ್ತೊಂದು ಭದ್ರಾ ಬಲದಂಡೆ ಕಾಲುವೆ ಕಾಮಗಾರಿ ಬಗ್ಗೆ ನಿಮ್ಮ ಮಾತುಗಳೇನು? ನೀವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ಯಾವಾಗ ಮುಗಿಸುತ್ತೀರಿ? ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ನೀವು ಏನು ಭರವಸೆ ಕೊಟ್ಟಿದ್ದಿರಿ, ಈ ಭರವಸೆಯನ್ನು ಈಡೇರಿಸುವುದಕ್ಕೆ ಆಗುವುದಿಲ್ಲವೆನ್ನುವುದಾದರೆ ಅದಕ್ಕೆ ಕಾರಣವೇನು? ಸರ್ಕಾರ ತನ್ನ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು, ಇಷ್ಟು ದೊಡ್ಡ ಪ್ರಮಾಣದಲ್ಲಿ ತೆರಿಗೆ ಹಣ ಬಂದಾಗ ನೀರಾವರಿಗೆ ನೀವು ಹಣ ಖರ್ಚು ಮಾಡುತ್ತಿದ್ದೀರೆಂದು ಜನರು ನಂಬಿದ್ದರು. ಇಲ್ಲದಿದ್ದರೆ, ಜನತೆಗೆ ನೀವು ಏನು ವಚನ ಕೊಟ್ಟಿದ್ದಿರಿ, ಅದರಿಂದ ಹಿಂತೆಗೆದಂತಾಗುತ್ತದೆ. ನಾವು ಈ ಕಡೆ, ನೀವು ಆ ಕಡೆ ಯಾರೇ ಮಾತನಾಡಿದರೂ ನಿಂತುಕೊಂಡು ಹೇಳಬಹುದು. ನೀವು ಒಬ್ಬ ಮುಖ್ಯ ಮಂತ್ರಿಯಾಗಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಕಳಕಳಿಯೇನೂ ಇಲ್ಲವೆಂಬ ಪರಿಸ್ಥಿತಿಗೆ ನೀವು ತರಬೇಡಿ. ಈ ಮೂರು ಪ್ರಮುಖವಾದ ವಿಷಯಗಳ ಬಗ್ಗೆ ಸ್ಪಷ್ಟವಾದ ಸ್ಪಷ್ಟೀಕರಣ ಕೊಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಜುರಾಲಾ ಯೋಜನೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅವರ ಭಾಷಣದ ವರದಿಯನ್ನು ನಾನು ಪೂರ್ತಿ ಓದಿಲ್ಲ, ಅದನ್ನು ನನ್ನ ಬಳಿಯೇ ಇಟ್ಟುಕೊಂಡಿದ್ದೇನೆ. ಅವರು ಒಂದು ಪಾಸಿಂಗ್ ರಿಮಾರ್ಕ್ಸ್ ಮಾಡಿರುವುದನ್ನು ನಾನು ನೋಡಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಿ ಚರ್ಚಿಸುವಾಗ ಅವರ ಹರಿತವಾದ ಮಾತುಗಳನ್ನೊಳಗೊಂಡ ಭಾಷಣದ ವರದಿಯನ್ನು ಓದಿದ್ದೇನೆ. ಜುರಾಲಾ ಬಗ್ಗೆ ಹೇಳುವುದಾದರೆ, ಅಲ್ಲಿ ಇದುವರೆವಿಗೂ ಸೇತುವೆಗಳು ಇಲ್ಲದೆ ಜನರು ದೋಣಿಗಳಲ್ಲಿ ಹೋಗುತ್ತಿದ್ದರು. ಈಗ ಅಲ್ಲಿ ಮೂರು ಸೇತುಫೆಗಳನ್ನು ಕಟ್ಟಬೇಕೆನ್ನುವುದರ ಬಗ್ಗೆ ನಮಗೂ ಹಾಗೂ ಆಂಧ್ರ ಪ್ರದೇಶ ಸರ್ಕಾರದ ನಡುವೆ ಮಾತುಕತೆ ನಡೆದ ನಂತರ ಮೂರು ಸೇತುವೆಗಳನ್ನು ನಿರ್ಮಿಸುವುದಕ್ಕೋಸ್ಕರ ಸುಮಾರು 17 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ, ಅಲ್ಲದೆ, ಸದರಿ ಯೋಜನೆಯಿಂದ ಮುಳುಗಡೆಯಾಗುವ ಜಮೀನುಗಳಿಗೂ ಪರಿಹಾರ ಕೊಡುತ್ತೇವೆಂದೂ ಒಪ್ಪಿದ್ದಾರೆ. ಜುರಾಲಾ ಆಣೆಕಟ್ಟನ್ನು ಹೆಚ್ಚಿಸುವ ಕಾರ್ಯದಲ್ಲಿ 0.6 ಮೀಟರಿನಷ್ಟು ವ್ಯತ್ಯಾಸಗೊಂಡಿದ್ದು, ಈ ಬಗ್ಗೆ ಸರ್ವೆ ಆಫ್ ಇಂಡಿಯಾದವರಿಗೆ ರೆಫರ್ ಮಾಡುತ್ತೇವೆಂದು ಕೂಡ ಒಪ್ಪಿಕೊಂಡಿದ್ದಾರೆ. ಇವೊತ್ತು ನಮ್ಮ ಲೆಕ್ಕ ಹಾಗೂ ಅವರ ಲೆಕ್ಕಕ್ಕೂ ಆಣೆಕಟ್ಟು ಎತ್ತರದಲ್ಲಿ 0.6 ಮೀಟರ್‌ನಷ್ಟು ವ್ಯತ್ಯಾಸ ಬಂದಿದ್ದು ಹೆಚ್ಚುವರಿ ನೀರನ್ನು ಹಿಡಿದಿಟ್ಟುಕೊಳ್ಳತಕ್ಕಂಥಾದ್ದು ಇಲ್ಲ. ಇದರ ಬಗ್ಗೆಯೂ ಕೂಡ ನಾವು ಸರ್ವೆ ಆಫ್ ಇಂಡಿಯಾದವರಿಗೆ ಬರೆಯುತ್ತೇವೆ, ಅವರೇ ಬಂದು ಸಮೀಕ್ಷೆ ಕಾರ್ಯ ಕೈಗೊಳ್ಳಲೆಂದು ಹೇಳಿದ್ದಾರೆ. ಜುರಾಲಾ ಆಣೆಕಟ್ಟಿನ ಎತ್ತರದಲ್ಲಿ ವ್ಯತ್ಯಾಸವಾಗಿರುವುದು 0.6 ಮೀಟರ್ ಎಂದು ಹೇಳಿದೆ. ಅದರ ಹೆಚ್ಚುವರಿ ಎತ್ತರ 0.62 ಮೀಟರ್. ನಾನು ಒಂದು ಸಲ ಚರ್ಚಿಸಿದ ನಂತರ ಮರೆಯುವುದಿಲ್ಲ, ಜ್ಞಾಪಕದಲ್ಲಿಟ್ಟುಕೊಂಡಿರುತ್ತೇನೆ. ಇದಕ್ಕಿಂತ

ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲವೆಂದು ಜುರಾಲಾ ಬಗ್ಗೆ ಇಷ್ಟು ಮಾತನ್ನು ಮಾತ್ರ ಹೇಳಬಯಸುತ್ತೇನೆ. ಇನ್ನು ತುಂಗಭದ್ರಾ ಬಲದಂಡೆ ಕಾಲುವೆ ಏನು ಒಡೆದು ಹೋಗಿತ್ತು, ಅದರ ಕಾಮಗಾರಿ ಕೆಲಸ ವೇಗದಿಂದ ನಡೆಯುತ್ತಿದ್ದು, ಸಿಮೆಂಟ್, ಉಕ್ಕು, ಹಣ, ಎಲ್.ಓ.ಸಿ. ಮುಂತಾದ ಯಾವುದೇ ತೊಂದರೆ ಇಲ್ಲ. ಸದರ ಕಾಮಗಾರಿಯನ್ನು ಮಾರ್ಚ್ ಅಂತ್ಯದೊಳಗೆ ಅಥವಾ ಎಪ್ರಿಲ್ ತಿಂಗಳಿನಲ್ಲಿ ಮುಕ್ತಾಯಗೊಳಿಸಿ ಈ ವರ್ಷವೇ ರೈತರಿಗೆ ಯಾವುದೇ ಆತಂಕವಿಲ್ಲದೆ ನೀರು ಕೊಡುತ್ತೇವೆ. ತುಂಗಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಅವರೇ ಹೇಳಿದಂತೆ ಅತ್ತ ಕಡೆ ನಮ್ಮ ಪ್ರದೇಶವೂ ಮುಳುಗಡೆಯಾಗುತ್ತದಾದ್ದರಿಂದ ನಮ್ಮನ್ನೂ ಹಾಳು ಮಾಡಬೇಡಿ ಎಂದರು. ಇದರ ಬಗ್ಗೆ ಇನ್ನೊಂದು ವಿಷಯ ಹೇಳಬೇಕಾಗುತ್ತದೆ. ನಾನೂ ಸಹ ಅದನ್ನೇ ಹೇಳಿದೆ. ವಾಟರ್ ಪ್ಲಾನ್‌ನಲ್ಲಿಯೇ ಹೀಗೆ ಬದಲಾವಣೆಯಾಗಿದೆ, ಇದನ್ನು ಯಾರು ಬದಲಾವಣೆ ಮಾಡಿದ್ದರು? ಏಕೆ ಬದಲಾವಣೆ ಮಾಡಿದರು? ಇದೆಲ್ಲವನ್ನೂ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ. ಇನ್ನೊಂದು ಮಾತು ಹೇಳಬೇಕೆಂದಿದ್ದೆ. ಮುಂದಿನ ವರ್ಷ ಒಂದೂವರೆ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಿದ್ದೀರಲ್ಲಾ, ಸಾಲ ಯಾವುದಕ್ಕೆ ತಂದಿದ್ರೀ? ಎಂದು ಕೇಳಿದ್ದಾರೆ. ನೀರಾವರಿ ಬಾಂಡ್ ನನ್ನ ಕಲ್ಪನೆಯ ಕೂಸು. ಇದರ ಬಗ್ಗೆ ನನಗೆ ಯಾರೂ ಹೇಳಿಕೊಡಲಿಲ್ಲ. 1984ರಲ್ಲಿ ಅಂದು ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ನಡೆದ ಎಲ್ಲಾ ರಾಜ್ಯಗಳ ನೀರಾವರಿ ಮಂತ್ರಿಗಳ ಸಭೆಯಲ್ಲಿ ಮೊಟ್ಟ ಮೊದಲ ಬಾರಿಗೆ ಇರಿಗೇಶನ್ ಬಾಂಡನ್ನು ಫ್ಲೋಟ್ ಮಾಡಬೇಕೆಂಬ ಪ್ರಸ್ತಾವವನ್ನು ಈ ರಾಷ್ಟ್ರದ ಜನತೆ ಮುಂದಿಟ್ಟೆ. ಅಷ್ಟೇ ಅಲ್ಲದೆ, ವಿಶ್ವಬ್ಯಾಂಕಿನಿಂದ ಬರತಕ್ಕಂಥ ಹಣದಲ್ಲಿ ಅಧಿಕಾರ ನಡೆಸಿದಂಥ..... ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಸದನದಲ್ಲಿದ್ದಾರೆ. ವಿಶ್ವಬ್ಯಾಂಕಿನಿಂದ ಹಣದ ಸಹಾಯ ಬರುತ್ತಿದ್ದುದು ಕೇವಲ ಶೇಕಡ 60 ಭಾಗ, ಅದರಲ್ಲಿ ಶೇಕಡ 40 ಭಾಗದಷ್ಟು ಹಣವನ್ನು ಕೇಂದ್ರ ಸರ್ಕಾರವೇ ಉಳಿಸಿಕೊಳ್ಳುತ್ತಿತ್ತು. ವಿಶ್ವಬ್ಯಾಂಕ್ ನಮ್ಮ ರಾಜ್ಯದ ಯೋಜನೆಗಳಿಗೆ ಕೊಡತಕ್ಕಂಥ ಸಾಲದ ಹಣದಲ್ಲಿ ನೀವು ಶೇಕಡ 40 ಭಾಗದಷ್ಟು ಉಳಿಸಿಕೊಳ್ಳುವುದು ಸರಿಯಲ್ಲವೆಂದು ನೂರಕ್ಕೆ ನೂರರಷ್ಟು ಭಾಗದ ಹಣವನ್ನು ಕೊಡಬೇಕೆಂಬ ಹಾದವನ್ನು ಮಂಡಿಸಿ ಯಶಸ್ವಿಯಾಗಿದ್ದು ಕರ್ನಾಟಕ ಸರ್ಕಾರವೆನ್ನುವ ಮಾತನ್ನು ಈ ಸಂದರ್ಭದಲ್ಲಿ ವಾದವನ್ನು ಮಂಡಿಸಿ ಯಶಸ್ವಿಯಾಗಿದ್ದು ನಾವು ಸಾಲ ತಂದಿದ್ದು ಸಂಬಳ ಕೊಡುವುದಕ್ಕಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸಾಲ ತಂದಿದ್ದೇ ವಿನಾ ಮತ್ತಾವುದೋ ಸರ್ಕಾರದ ಒಂದು ಲಯಾಬಿಲಿಟೀಸ್ ಅನ್ನು ತುಂಬಿ ಕೊಡುವುದಕ್ಕಲ್ಲ. ತಂದ ಹಣವನ್ನು ಕೃಷ್ಣ ಜಲಭಾಗ್ಯ ನಿಗಮದಲ್ಲಿಟ್ಟಿದ್ದೇವೆ. ಈ ಅವಕಾಶ ಕೊಡುವುದಿಲ್ಲವೆಂದು ಇಷ್ಟು ಮಾತನ್ನು ಹೇಳುತ್ತಾ, ವಿರೋಧ ಪಕ್ಷದ ನಾಯಕರು ನಮ್ಮನ್ನು ಕುರಿತು ಎಲುಬಿಲ್ಲದ ನಾಲಿಗೆಯೆಂದು ಹೇಳಿದ್ದಾರೆ. ಅವೊತ್ತೇ ಒಂದು ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಾಗಿ ಹೇಳಿಲ್ಲವೆಂದು ಅವರೇ ಒಪ್ಪಿಕೊಂಡಿದ್ದು, ನಾನೇನು ಹೇಳಿಲ್ಲ ನೀವೇ ಹೇಳಿದಿರಿ ಎಂದರು. ಹೌದು, ನಾನು ಹೇಳಿದೆ. ನನ್ನ ಎಲುಬಿಲ್ಲದ ನಾಲಿಗೆಯಿಂದ ಅವೊತ್ತು ಏನು ಹೇಳಿದ್ದೆನೋ ಈಗ ಮತ್ತೆ ಅದೇ ಎಲುಬಿಲ್ಲದ ನಾಲಿಗೆಯಲ್ಲಿ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುವುದಕ್ಕಾಗುತ್ತದೆಯೇ? ಹೇಳುವುದಕ್ಕಾಗುವುದಿಲ್ಲ. ನನಗೆ ಖರ್ಚು ಮಾಡುವುದಕ್ಕೆ ಎಷ್ಟು

ಯೋಗ್ಯತೆ ಇದೆಯೆನ್ನುವುದನ್ನು ಈ ರಾಜ್ಯದ ಜನತೆ ಮುಂದೆ ಕಾದು ನೋಡುತ್ತಾರೆ, ತೀರ್ಮಾನ ಮಾಡೋಣ. ಅವರೂ ಸ್ವಲ್ಪ ದಿವಸ ಕಳೆದ ನಂತರ ಬೀದಿಗಿಳಿಯುತ್ತಾರೆ. ಮಾನ್ಯ ಅಧ್ಯಕ್ಷರೆ, ಅವರು ಒಂದು ಹಸ್ತ ಪತ್ರಿಕೆ ಹೊರಡಿಸಿರುವುದನ್ನು ಇವೊತ್ತು ನಾನು ನೋಡಿದೆ. ಆದರಲ್ಲಿ ''ಎಲಬಿಲ್ಲದ ನಾಲಿಗೆ'' ''ವಿಶ್ವಾಸ ದ್ರೋಹ''...... ಮುಂತಾದುವೆಲ್ಲಾ ಇದೆ. ಇನ್ನು 60 ದಿವಸಗಳು ಕಳೆದ ನಂತರ ನಾನು ಈ ಸದನಕ್ಕೆ ವಾಪಸ್ಸು ಬರುತ್ತೇನೆ. ಆಗ ಜನರು ಅವರದನ್ನೂ ತೀರ್ಮಾನ ಮಾಡುತ್ತಾರೆ, ನಮ್ಮದನ್ನೂ ತೀರ್ಮಾನ ಮಾಡುತ್ತಾರೆ. ಅವೊತ್ತು ನಾವಿಬ್ಬರೂ ಈ ಸವಾಲನ್ನು ಒಪ್ಪಿಕೊಳ್ಳೋಣವೆಂದು ಅವರ ಮಾತಿಗೆ ನಾನು ಗೌರವದಿಂದ ಇಷ್ಟೇ ಉತ್ತರ ಕೊಡುತ್ತೇನೆ. ತಮಗೆ ವಂದನೆಗಳು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ತಾವು ಪತ್ರಿಕೆ ನೋಡಿರಬಹುದು. ಲೋಕಸಭೆಯಲ್ಲಿ ನೀರಾವರಿ ಸಚಿವರಾದ ಶ್ರೀ ರಂಗಯ್ಯನಾಯ್ಡುರವರು ಜುರಾಲಾ ಆಣೆಕಟ್ಟು ಯೋಜನೆ ಬಗ್ಗೆ ತಿಳಿಸುತ್ತಾ ಆಣೆಕಟ್ಟಿನ ಎತ್ತರ 1.06 ಮೀಟರ್‌ಗಳಷ್ಟು ಹೆಚ್ಚಳವಾಗಿದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಆದರೆ, ಇಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಜುರಾಲಾ ಆಣೆಕಟ್ಟಿನ ಎತ್ತರ ಕೇವಲ 0.62 ಮೀಟರಿನಷ್ಟು ಹೆಚ್ಚಳವಾಗಿದೆಯೆಂದು ಹೇಳುತ್ತಿದ್ದಾರೆ. ಲೋಕಸಭೆಯಲ್ಲಿ ಅಧಿಕೃತವಾಗಿ ನೀರಾವರಿ ಸಚಿವರೇ ಹೇಳಿಕೆ ಕೊಟ್ಟ ನಂತರ ಈ ಕುರಿತು ಅಂಕಿ-ಅಂಶಗಳನ್ನು ಮುಚ್ಚಿಡುವಂಥ ಒಂದು ಪ್ರಯತ್ನವನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಏಕೆ ಮಾಡುತ್ತಿದ್ದಾರೆ? ಇದು ಅರ್ಥವಾಗದಿರುವ ಸಂಗತಿ. ಎರಡನೆಯದಾಗಿ, ರಾಜ್ಯದ ಜನರ ಮುಂದೆ ಹೋಗಿ ಹೇಳಬೇಕು, ಸದನದಲ್ಲಿ ಹೇಳಬೇಕು. ಈ ತರಹದ ಕೆಲಸವನ್ನು 1983ನೇ ಇಸವಿಯಿಂದಲೇ ನನ್ನದೇ ಆದ ರೀತಿಯಿಂದ ಮಾಡಿಕೊಂಡು ಬರುತ್ತಿದ್ದೇನೆ. ತಾವು ಏನು ಹೇಳಿದ್ದೀರಿ, ಆ ಸವಾಲನ್ನು ನಾನು ಸ್ವೀಕರಿಸಲು ಸಿದ್ಧನಿದ್ದೇನೆ. ನಿಮ್ಮ ಹತ್ತಿರ ದೊಡ್ಡ ದೊಡ್ಡ ಕೋಟ್ಯಾಧಿಪತಿಗಳಿರಬಹುದು, ಹಣದ ಬಲವಿರಬಹುದು, ಹೆಂಡದ ಬಲವಿರಬಹುದು, ತೋಳ್ಬಲವಿರಬಹುದು. ಆದರೆ, ನಾವು ನಾಡಿನ ಜನರ ಮನೆ-ಮನೆಗಳಿಗೆ ಹೋಗಿ ಕೈ ಮುಗಿದು ಜನರ ಮನಸ್ಸನ್ನು ಒಲಿಸಿ ನಾನೂ ಇಲ್ಲಿಗೆ ವಾಪಸ್ಸು ಬರುತ್ತೇನೆ. ಅವೊತ್ತು ಇಬ್ಬರೂ ಪರಸ್ಪರ ಕುಳಿತುಕೊಂಡು ಮಾತನಾಡೋಣ. ಈ ರಾಜ್ಯದ ಜನತೆಗೆ ವಂಚನೆ ಮಾಡಿದಂಥ, ರೈತರಿಗೆ ದ್ರೋಹವೆಸಗಿದಂತಹ ಈ ಸರ್ಕಾರಕ್ಕೆ ಸರಿಯಾದ ಪಾಠ ಕಲಿಸಬೇಕೆಂಬುದು ಅವರ ಮನಸ್ಸಿನಲ್ಲಿದೆಯೆಂಬ ಮಾತನ್ನು ನಾನು ಮುಖ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಇನ್ನು 60 ದಿವಸಗಳಾದ ನಂತರ ಈ ಸದನಕ್ಕೆ ಇಬ್ಬರೂ ಬಂದು ಮಾತನಾಡೋಣ.

ಶ್ರೀ ಎಂ.ನಾರಾಯಣಸ್ವಾಮಿ:- ಇಟ್ಟಿಗೆ ಹಣ ಹಾಗೂ ರಾಮನ ಹಣ ಎಲ್ಲಿ ಹೋಯಿತು? ದಯವಿಟ್ಟು ಅದನ್ನು ಹೇಳಬೇಕು. ಇಟ್ಟಿಗೆಯಿಂದ ಎಷ್ಟು ಕೋಟಿ ರೂಪಾಯಿಗಳನ್ನು ಮಾಡಿದ್ದೀರಿ? ರಾಮನ ಹೆಸರಿನಲ್ಲಿ ಎಷ್ಟು ದುಡ್ಡು ಸಂಗ್ರಹಿಸಿದ್ದೀರಿ? ತಿಳಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೋರಮಂಗಲದಲ್ಲಿ ಕ್ರೀಡಾಗ್ರಾಮ ನಿರ್ಮಿಸಲು ಮುಂಗಡ ಹಣ ಕೊಟ್ಟು ದುಡ್ಡು ತೆಗೆದುಕೊಂಡಿದ್ದೀರಲ್ಲಾ, ಪ್ರತಿನಿತ್ಯ ಐವತ್ತು ಸಾವಿರ ರೂಪಾಯಿಗಳಷ್ಟು ದಂಡ ಹಾಕುತ್ತೇನೆಂದು ಸುಮಾರು 37-38 ಲಕ್ಷ ರೂಪಾಯೀಗಳನ್ನು ತೆಗೆದುಕೊಳ್ಳದೆ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿದ್ದೀರಲ್ಲಾ, ಆ ದುಡ್ಡಿನ ಲೆಕ್ಕವನ್ನೂ ಕೊಡುವಿರಂತೆ,

ನಾನು ಬಂದು ಕೇಳುತ್ತೇನೆ. ಪ್ರತಿನಿತ್ಯ ಐವತ್ತು ಸಾವಿರ ರೂಪಾಯಿಗಳಷ್ಟು ದಂಡ ಹಾಕುತ್ತೇನೆಂದು ಹೇಳಿ ಏಕೆ ವಾಪಸ್ಸು ತೆಗೆದುಕೊಳ್ಳಲಿಲ್ಲ? ಹಿಂಬಾಗಿಲಿನಿಂದ ತೆಗೆದುಕೊಂಡಿರಾ? ಅದೆಲ್ಲವನ್ನೂ ನೀವು ಲೆಕ್ಕ ಕೊಡಬೇಕಾಗುತ್ತದೆ. ಅದನ್ನು ಎಲ್ಲಿ ಕೇಳಬೇಕು? ಯಾವಾಗ ಕೇಳಬೇಕು? ಎಂಬುದು ನನಗೆ ಗೊತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಕೇಳುವುದಿಷ್ಟೆ. ಮಾನ್ಯ ಮುಖ್ಯ ಮಂತ್ರಿಯವರು ಕೊನೆ ತನಕ ಉತ್ತರಗಳನ್ನು ಚೆನ್ನಾಗಿ ಕೊಡುತ್ತಾ ಬಂದಿದ್ದಾರೆ. ಅವರು ತಮಗೆ ಏನು ಹೇಳಿಕೊಳ್ಳಬೇಕೋ ಅದನ್ನು ಹೇಳಿಕೊಳ್ಳುತ್ತಾರೆ. ಇವೊತ್ತು ಅವರು ಒಪ್ಪಿಕೊಳ್ಳಲಿ, ಬಿಡಲಿ. ಅವರು ಒಂದು ಮಾತನ್ನು ಹೇಳಿದ್ದಂತೂ ನಿಜ. ಸದನದ ಹೊರಗಡೆ ಹೇಳಿದ್ದು ಮತ್ತು ಅದನ್ನು ಪುನಃ ಸಭೆಯಲ್ಲೂ ಕೂಡ ಪ್ರಸ್ತಾಪಿಸಿದ್ದು ಏನೆಂದರೆ, ಏಪ್ರಿಲ್ ತಿಂಗಳೊಳಗೆ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದರು. ಇದಾದ ನಂತರ ಪುನಃ ಬಾಗಲಕೋಟೆ ಮತ್ತು ಭೀಮರಾಯನ ಗುಡಿಯಲ್ಲಿ ಈ ಕುರಿತು ರಿವ್ಯೂ ಮಾಡಿದಾಗ, ಪ್ರಗತಿ ಸರಿಯಾದ ರೀತಿಯಲ್ಲಿ ನಡೆಯದಿರುವುದನ್ನು ಕಂಡು ಹಾಕಿಕೊಂಡಿದ್ದ ಗುರಿಯನ್ನು ಬದಲಾಯಿಸಿ ಮಾರ್ಚ್ ಅಂತ್ಯದವರೆಗೆ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದರು. ಮತ್ತು ಜೂನ್ ಅಂತ್ಯದವರೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದರೆ ಹಾಕಿಕೊಂಡಿದ್ದ ಗುರಿ ಮುಟ್ಟುತ್ತದೆಂದು ಜೂನ್ ತಿಂಗಳ ಅಂತ್ಯದವರೆಗೆ ಕಾಲಾವಧಿ ವಿಸ್ತರಿಸಿಕೊಂಡರು. ಅಂದರೆ ಒಟ್ಟಾರೆ ಹೋದ ವರ್ಷದ ಬಜೆಟ್ ಸಾವಿರ ಕೋಟಿ ಜೂನ್ ಅಂತ್ಯದವರೆಗೆ ಟಾರ್ಗೆಟ್. ಹೋದ ವರ್ಷವೇ ಸಾವಿರ ಕೋಟಿ ಎಂದ ಮೇಲೆ ಈ ವರ್ಷ 1200, 1500 ಹೆಚ್ಚಿಗೆ ಇಡಬೇಕಲ್ಲ? ನೀವು ಈ ವರ್ಷ ಇಟ್ಟಿದ್ದ ಹಣದಲ್ಲೇ ಸುಮಾರು 500 ಕೋಟಿ ಉಳಿದಿದೆಯೆಂದು ಮೊನ್ನೆ ಅವರು ಹೇಳಿದರು. ಅಂದರೆ ಆ 450 ಕೋಟಿ ಮತ್ತು ಉಳಿದ ಹಣ 650 ಕೋಟಿ ಪ್ಲಸ್ ಈ ವರ್ಷದ್ದು ಸಾವಿರ ಕೋಟಿನೇ ಇಡಿ ಅಂದರೆ 1500 ಕೋಟಿ ನೀವು ಖರ್ಚು ಮಾಡಬೇಕಾಗುತ್ತದೆ. ಬಜೆಟ್‌ನಲ್ಲಿ ಪ್ಲಾನ್ ಅಲೋಕೇಶನ್ ಏನು ಮಾಡಿದ್ದು ಅಂದರೆ 1050 crores on major and medium irrigation ಎಂದು ಮಾಡಿದ್ದಿರಿ 300 ಕೋಟಿ ನಾನ್ ಪ್ಲಾನ್‌ನಲ್ಲಿ ಇರುವುದು ಕಾವೇರಿ ಬೇಸಿನ್‌ನಲ್ಲಿ ಅದು ನಾನ್‌ಪ್ಲಾನ್‌ನಲ್ಲಿದೆ. ಅಂದರೆ ತಮ್ಮ ಮಾತಿನ ಪ್ರಕಾರ ಯು.ಕೆ.ಪಿ. ಒಂದಕ್ಕೇ 1500 ಕೋಟಿ ಈ ಮಾರ್ಚಿಯಿಂದ ಮುಂದಿನ ಮಾರ್ಚಿವರೆಗೆ ನೀವು ಖರ್ಚು ಮಾಡಬೇಕಾಗುತ್ತದೆ. Leave it, other plan programmes what you have stated in your annual budget ಎರಡನೆಯದೆಂದರೆ ಸಾಲ ಎಲ್ಲರೂ ತೆಗೆದುಕೊಳ್ಳುತ್ತಾರೆ. ನಮ್ಮ ಸಿದ್ಧರಾಮಯ್ಯನವರು ಮಂಡಿಸಿದಂತಹ ಇಡೀ ಬಜೆಟ್‌ನಲ್ಲಿ ನಿಮ್ಮ ಸ್ವಂತ ದುಡ್ಡು ಇರುವುದು ಕೇವಲ 49 ಪರ್ಸೆಂಟ್ ಮಾತ್ರ. For 51% you are depending upon NABARD, Central assistances, World Bank and several other agencies. ಈ ಜೇಬಿಲ್ಲ ಆ ಜೇಬಿಗೆ ಕೈ ಹಾಕುವುದು, ಅದನ್ನು ನಾವು ಪದೇ ಪದೇ ಹೇಳಿಕೊಳ್ಳುವುದು ಬೇಡ. 51% depends on other resources. ಅದಕ್ಕೇ ಅದರಲ್ಲಿ ಹೇಳಿಕೊಳ್ಳುವುದು ನನಗೇನೂ ಅಷ್ಟೂ ದೊಡ್ಡ ಸಮಸ್ಯೆಯಾಗಿ ಕಾಣಲಿಲ್ಲ.

ಎರಡನೆಯದೇನೆಂದರೆ 729 ಟಿ.ಎಂ.ಸಿ.(ಎ) ಸ್ಕೀಂನಲ್ಲಿದೆ. ಒಂದು ವೇಳೆ 2000 ಅಡಿ ಒಳಗಾಗಿ ನಾವು ಈ ನೀರನ್ನು ಉಳಿಸಿಕೊಳ್ಳದೇ ಹೋದರೆ (ಬಿ) ಸ್ಕೀಂನಲ್ಲಿ ನಮಗೆ ಅಲೋಕೇಶನ್ ಇರುವುದು ಬಚಾವತ್ ತೀರ್ಪು ಪ್ರಕಾರ 50 ಪರ್ಸೆಂಟ್. ಅದನ್ನು ನಾವು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ನಮಗೆ (ಬಿ) ಅವಾರ್ಡ್ ಪ್ರಕಾರ 50 ಪರ್ಸೆಂಟ್ ಸಿಗುತ್ತದೆಯೋ ಹೇಗೆ? ಅಥವಾ ಅದಕ್ಕೇನಾದರೂ ತೊಂದರೆಯಾಗುತ್ತದೆಯೋ ಹೇಗೆ? ನಾವು ಕಾಂಪೌಂಡ್ ಮಾಡಿಕೊಳ್ಳಬಹುದು ಅಥವಾ ನೀವು ಕನಿಷ್ಟ ಒಂದು ಆಣೆಕಟ್ಟು ಕಟ್ಟಿಸಿ ನೀರು ನಿಲ್ಲಿಸಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದೀರಿ. 729 ಟಿ.ಎಂ.ಸಿ.ಗಿಂತ ಒಂದು ತೊಟ್ಟು ನೀರನ್ನು ಸಹ ಬಿಡುವುದಿಲ್ಲವೆಂದು ಹೇಳಿದ್ದೀರಿ. ಸಂತೋಷ. ಆದರೆ ನಾವು ಉಪಯೋಗ ಮಾಡಿಕೊಳ್ಳದೆ ಹೋದರೆ 2000 ಅಡಿ ನಂತರ ಮತ್ತೆ ರಿವ್ಯೂ ಆಗುತ್ತದೆ. ಆಗ (ಬಿ) ಸ್ಕೀಂ ಪ್ರಕಾರ ನಮಗೆ ಬರುವುದು 50 ಪರ್ಸೆಂಟ್, 15 ಪರ್ಸೆಂಟ್ ಮಹಾರಾಷ್ಟ್ರ ಇರಬಹುದು. ಆಂದ್ರದವರಿಗೆ ಬಾಕಿ ಭಾಗ ಹೋಗುತ್ತದೆ. ಆ ನೀರನ್ನು ನಾವು ಯಾವ ರೀತಿ ಉಳಿಸಿಕೊಳ್ಳಲು ಸಾಧ್ಯವಿದೆ ಎನ್ನುವುದರ ಬಗ್ಗೆ ಹೇಳಬೇಕು. ಮೂರನೆಯದೆಂದರೆ ತುಂಗಭದ್ರಾ ಬಲದಂಡೆ ಎಚ್.ಎಲ್.ಸಿ. ಮತ್ತು ಎಲ್.ಎ.ಎಲ್.ಸಿ. ಕಾಲುವೆ ಸುಮಾರು 1.5 ಮತ್ತು ಕೆಳಗಡೆ ಇರುವುದು 2 ಲಕ್ಷ ಎಕರೆ ಸುಮಾರು ಮೂರೂವರೆ ಲಕ್ಷ ಎಕರೆಗೆ ಇವತ್ತು ನೀರು ಬಿಡಬೇಕಾಗುತ್ತದೆ. ಆದರೆ ಈಗಾಗಲೇ ತಾವು ಒಂದು ಆದೇಶ ಕೊಟ್ಟಿದ್ದೀರೆಂದು ಗೊತ್ತಾಗಿದೆ, 10ನೇ ಎಪ್ರಿಲ್ ನಂತರ ನೀರು ಬಿಡುವುದಿಲ್ಲವೆಂದು ಹೇಳಿದ್ದೀರಂತೆ. ಅದರಿಂದೇನಾಗುತ್ತಿದೆ ಎಂದರೆ ಮೂರುವರೆ ಲಕ್ಷ ಎಕರೆಯಲ್ಲಿ ರೈತರು ಭತ್ತ ಕಬ್ಬು ಅದು ಇದು ಹಾಕಿಕೊಂಡಿದ್ದಾರೆ, ಅವರಿಗೆಲ್ಲರಿಗೂ ತೊಂದರೆಯಾಗುತ್ತದೆ. ಅದಕ್ಕೆ ಹೋದ ಸಲವು ಚರ್ಚೆಯಾದಾಗ, ಸರ್ಕಾರದವರು ಮನಸ್ಸು ಮಾಡಿ ನೀರು ಬಿಡಿಸುವ ವ್ಯವಸ್ಥೆ ಮಾಡಿಸಿದ್ದರು. ಅದಕ್ಕೇ ದಯಮಾಡಿ ತುಂಗಭದ್ರೆಯ ಬಲದಂಡೆಯ ಹೈಲೆವೆಲ್ ಕೆನಾಲ್‌ನಿಂದ, 10ರ ನಂತರವೂ ನೀರನ್ನು ಬಿಡುವ ಬಗ್ಗೆ ಏನು ಮಾಡುತ್ತೀರಿ? ಬಳ್ಳಾರಿ ರಾಯಚೂರುಗಳ ರೈತರ ಬೇಡಿಕೆ ಇದೆ. ತಾವು ಇದರ ಬಗ್ಗೆ ಚಿಂತನೆ ಮಾಡಿ, ಸೂಕ್ತವಾದ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಅಧ್ಯಕ್ಷರೇ, ತುಂಗಭದ್ರಾ ನದಿ ನೀರಿನ ಬಳಕೆ ಬಗ್ಗೆ ಡಿಸೆಂಬರ್ 15ಕ್ಕೆ ರೈಟ್ ಬ್ಯಾಂಕ್ ಹೈಕೆನಾಲ್‌ಗೆ ನಾವು ನೀರು ನಿಲ್ಲಿಸಿದೆವು. ಈಗ ನಾವು ಮಾರ್ಚಿ 11ನೇ ತಾರೀಖಿನಲ್ಲಿದ್ದೇವೆ. ಇವತ್ತು ಬೋರ್ಡಿನ ರೆಗ್ಯುಲೇಶನ್ ಏನಿದೆ ಅದರ ಪ್ರಕಾರ ತುಂಗಭದ್ರ ಬಲದಂಡೆ ಹೈ ಲೆವೆಲ್ ಕೆನಾಲ್‌ಗೆ ನೀರು ನಿಲ್ಲಿಸಬೇಕಾಗಿರುವುದು ಡಿಸೆಂಬರ್ 15ಕ್ಕೆ. ಆದರೆ ಅಲ್ಲ ಬೆಳೆ ಇನ್ನೂ ರೈಪಾಗಿಲ್ಲ ಎಂಬ ಕಾರಣಕ್ಕೆ 1 ಟಿ.ಎಂ.ಸಿ. ನೀರನ್ನು ಇವತ್ತು ಎಡದಂಡೆ ನಾಲೆಗೆ ಬಿಟ್ಟು, ಅಲ್ಲಿನ ಬೆಳೆ ಉಳಿಸುವ ಪ್ರಯತ್ನ ಮಾಡಿದ್ದೇವೆ. ಇವತ್ತು ನಾನು ಬಳ್ಳಾರಿಯಿಂದಲೇ ಬರುತ್ತಿದ್ದೇನೆ. ರಾಯಚೂರು ಮತ್ತು ಬಳ್ಳಾರಿಗಳ ಎರಡೂ ಕಡೆಯ ಜನರು ನನ್ನ ಬಳಿ ಬಂದು ಹೇಳಿದ್ದಾರೆ. ಅಲ್ಲಿ ಹೆಚ್ಚು ತೊಂದರೆಯಾಗುವುದು ತುಂಗಭದ್ರ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲೇ ಇನ್ನೂ ನಮಗೆ ನೀರು ಬಿಡದೇ ಹೋದರೆ ಕಷ್ಟವಾಗುತ್ತದೆ. ನೀವು ನಮ್ಮ ನೀರನ್ನು ರೈಟ್‌ಬ್ಯಾಂಕ್ ರೈತರ ಒತ್ತಡಕ್ಕೆ ಮಣಿದು ಕೊಟ್ಟು ಪರಿಣಾಮ ನಮಗೆ 15ರವರೆಗೆ ನೀರು ಬಿಡದೇ ಇದ್ದರೆ ಅಪಾಯವಾಗುತ್ತದೆಂದು ಹೇಳಿದ್ದಾರೆ. ಆದರ ಬಗ್ಗೆ ನಮ್ಮ ನೀರಾವರಿ ಕಾರ್ಯದರ್ಶಿಗಳನ್ನು ಕಳುಹಿಸಿ ಚರ್ಚೆ ನಡೆದಿದೆ. ಇವತ್ತು ಎಡದಂಡೆ ಕಾಲುವೆ ಭಾಗದಲ್ಲಿ ಬೆಳೆದು ನಿಂತಿರುವ ಬೆಳೆಯನ್ನು ಉಳಿಸಲಿಕ್ಕೆ ಶಕ್ತಿ ಮೀರಿ ಪ್ರಯತ್ನಪಡುತ್ತೇವೆ. ಇದು

ಇರತಕ್ಕಂತಹ ವಸ್ತುಸ್ಥಿತಿ. ಇನ್ನು ಶ್ರೀ ಖರ್ಗೆಯವರು ಹೇಳಿದರು 648 ಕೋಟಿ ರಿವೈಸ್ಡ್ ಪ್ಲಾನ್ ಮಾಡಿದಿರಿ ನೀವು ಅದನ್ನು ಕೂಡ ಖರ್ಚು ಮಾಡಲಿಲ್ಲ. ಹಣ ಇಲ್ಲವೆಂದು ಖರ್ಚು ಮಾಡಲಿಲ್ಲ ಎಂದಲ್ಲ, ನಾನು ಮೊದಲೇ ಹೇಳಿದೆ ಎರಡು ತಿಂಗಳು ಟೆಂಡರ್ ಷೆಡ್ಯೂಲ್ಸನ್ನು ಅಪ್ರೂವ್ ಮಾಡಲಿಲ್ಲ, ಅದರಿಂದಲೇ ಈ ನಿರ್ಣಯ ನಾನು ತೆಗೆದುಕೊಂಡಿದ್ದುದು. ಆ ಕಾರಣದಿಂದ ಏನು 650 ಕೋಟಿ ಖರ್ಚು ಮಾಡಲೋಸುಗ ಟೆಂಡರ್ ಕರೆಯಬೇಕೆಂದು ಹಿರಿಯ ಅಧಿಕಾರಿಗಳ ಸಭೆಯಲ್ಲಿ ನಾವು ನಿರ್ಣಯ ಮಾಡಿದೆವೋ, ಆ ಟೆಂಡರ್ ಶೆಡ್ಯೂಲ್ಸನ್ನು ಅಪ್ರೂವ್ ಮಾಡುವುದರಲ್ಲಿ 2 ತಿಂಗಳು ವಿಳಂಬವಾದ ಪರಿಣಾಮ ಕೆಲಸ ವಿಳಂಬ ಆಗಲಿಕ್ಕೆ ಕಾರಣವಾಯಿತು. ನಾನು ಯಾವ ಅಧಿಕಾರಿಯ ಹೆಸರನ್ನೂ ಇಲ್ಲಿ ಪ್ರಸ್ತಾಪಿಸಿ ಚರ್ಚೆ ಮಾಡುವುದಿಲ್ಲ.

SRI M.MALLIKARJUNA KHARGE:- You take action against him. Either you should own responsibility or you take action against the official.

SRI H.D.DEVEGOWDA:- That is a secondary issue. ಮಾನ್ಯ ಖರ್ಗೆಯವರೇ ಅದು ಸೆಕೆಂಡರಿ ಇಶ್ಯೂ. ನಾನು ಈಗ ಏನಾಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದಕ್ಕೋಸ್ಕರವೇ ಇವತ್ತು ಟೆಂಡರ್ ಅನ್ನು ಕರೆಯತಕ್ಕಂತಹ ವಿಧಾನದಲ್ಲಿ ನಾವು ಬದಲಾವಣೆ ಮಾಡಿ ಈಗ ಏನು 130 ಕಿ.ಮೀ.ನಲ್ಲಿ ವೇಗದಲ್ಲಿ ಕೆಲಸ ಆಗುತ್ತಿದೆಯೋ, ಇದನ್ನು ನಾನು ಹೇಳಿದೆ ನನಗೆ ಸಮಾಧಾನ ಇದೆ ಅಂತ; ನಾನೇ ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ, ನನಗೆ ಸಮಾಧಾನ ಇದೆ ಅಂತ. ಈಗ ಇರತಕ್ಕಂತಹ ವೇಗ ಏನಿದೆಯೋ ಅದನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಿದ್ದೇನೆ.

ಶ್ರೀ ಶ್ರೀರಂಗದೇವರಾಯಲು:- ಈಗ ತುಂಗಭದ್ರಾ ಎಡದಂಡೆ ಕಾಲುವೆಗೆ ಶುಗರ್‌ಕೇನ್ ಗೋಸ್ಕರ 2 ಟಿ.ಎಂ.ಸಿ. ನೀರು ಯಾವಾಗಲೂ ಸ್ಪೇರ್ ಇರುತ್ತಿತ್ತು. ಯಾವಾಗಲೂ ಮೇ 10ರವರೆಗೆ ನೀರನ್ನು ಕೊಡುತ್ತಿದ್ದರು. 1983ರಲ್ಲಿ ತಾವು ನೀರಾವರಿ ಮಂತ್ರಿಯಾಗಿದ್ದಾಗ, ಕೂಡ ಅಲ್ಲಿಗೆ ಬಂದಿದ್ದಿರಿ. ಮೊನ್ನೆ ಇನ್ನರ್ ಸ್ಟ್ರೆಂತ್‌ನಿಂಗ್ ಮಾಡುತ್ತೇವೆ ಎಂದು ಹೇಳಿ ಮಾರ್ಚಿ 31ರವರೆಗೆ ಮಾತ್ರ ನೀರು ನೋಟಫಿಕೇಶನ್ ಇಶ್ಯೂ ಆಯಿತು. ಆದರೆ ಯಾವುದೇ ಟೆಂಡರ್ ಕಾಲ್ ಆಗಲಿಲ್ಲ. ಆಮೇಲೆ ಅದನ್ನು ಇನ್ನೂ ಮುಂದಕ್ಕೆ ಹಾಕುತ್ತಿದ್ದಾರೆ. ನಮ್ಮಲ್ಲಿ ಒಂದು ಲಕ್ಷ ಎಕರೆ ಟನ್ ಶುಗರ್‌ಕೇನ್ ಕೆಟ್ಟು ಹೋಗುತ್ತದೆ ಮತ್ತು ಸಾವಿರಾರು ಎಕರೆ ಪ್ಯಾಡಿ ಹಾಳಾಗುತ್ತದೆ. ದಯಮಾಡಿ, ಕನಿಷ್ಟ ಎಪ್ರಿಲ್ 20ರವರೆಗಾದರೂ ನಮಗೆ ನೀರು ಕೊಡಲೇಬೇಕು ಎಂದು ನಾವು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೇ, ಇನ್ನರ್ ಸ್ಟ್ರೆಂದನಿಂಗ್ ಮಾಡುವುದು ಒಂದು ಭಾಗ, ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡುವುದು ಇನ್ನೊಂದು ಭಾಗ, ಅದರ ಜೊತೆಗೆ ಬೆಳೆ ಉಳಿಸುವುದು ಮತ್ತೊಂದು ಭಾಗ. ಇವು ಮೂರು ಪರಿಸ್ಥಿತಿ ಮಧ್ಯೆ ನಾವು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಬೆಳಿಗ್ಗೆ ಅಲ್ಲಿ ಸೇರಿದ್ದಂತಹ ರೈತ ಬಾಂಧವರೇ ಈ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ರೈತರಿಗೆ ಇರತಕ್ಕಂತಹ ಬೆಳೆಯನ್ನು ಹಾಳು ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮಿಂದ

ಏನು ಸಾಧ್ಯವಾಗುತ್ತದೆಯೋ ಅದನ್ನು ಮಾಡುತ್ತೇವೆ. ಇರತಕ್ಕಂತಹ ನೀರನ್ನು ನಾನು ವಾಪಸ್ಸು ಬೇರೆ ಕಡೆ ತೆಗೆದುಕೊಂಡು ಹೋಗುವುದಿಲ್ಲ. ಈ ವರ್ಷದ ಪರಿಸ್ಥಿತಿ ನಿಮಗೆ ಗೊತ್ತಿದೆ. ನಿಮಗೆ ಗೊತ್ತಿರತಕ್ಕದ್ದು ಬಲದಂಡೆಯ ಹೈ ಲೆವೆಲ್ ಕ್ಯಾನಲ್‌ನಲ್ಲಿ ಡಿಸೆಂಬರ್ 15ಕ್ಕೆ ಕ್ಲೋಸ್ ಮಾಡುವುದಕ್ಕೆ ಬದಲಾಗಿ ಅದನ್ನು ಮುಂದುವರೆಸತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕಾಗಿ ಬಂದಿದ್ದು, ಅಲ್ಲಿರುವ ರೈತರುಗಳಿಂದ. ಇದುವರೆವಿಗೂ, ಎಂದೂ, ಡಿಸೆಂಬರ್ 15ನೇ ತಾರೀಖು ಆದಮೇಲೆ ಬಲದಂಡೆ ನಾಲೆಗೆ ನೀರು ಕೊಟ್ಟಿಲ್ಲ. ಈ ಸಾರಿ ಕೊಟ್ಟಿದ್ದೇವೆ. 1 ಟಿ.ಎಂ.ಸಿ. ನೀರು ಬಿಟ್ಟಿದ್ದೀರಿ. ಅದೇ ಅಂತೇ ಹೇಳಿ ಗಲಾಟೆ ಮಾಡುತ್ತಿದ್ದೀರಿ. ನಿಮ್ಮ ಭಾಗದ ರೈತರುಗಳೆಲ್ಲಾ ಇವತ್ತು ನನ್ನ ಮೇಲೆ ಒತ್ತಡ ತೆಗೆದುಕೊಂಡು ಬಂದರು. ರಾತ್ರಿ ಅಲ್ಲೇ ಇದ್ದೆ ನಾನು. ಇಷ್ಟನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇನ್ನರ್ ಸ್ಟ್ರೆಂತನಿಂಗ್ ಕೆಲಸ ಮಾಡತಕ್ಕಾಂಥದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಅಷ್ಟೇ ಅಲ್ಲ, ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಕೆಲಸ ಕೂಡ ಪೂರೈಸತಕ್ಕಂಥದ್ದಕ್ಕೆ ಸರ್ಕಾರ ಕಟಿಬದ್ಧವಾಗಿದೆ. ಎಷ್ಟರ ಮಟ್ಟಿಗೆ ಬೆಳೆಯನ್ನು ಉಳಿಸತಕ್ಕಾಂಥದ್ದರಲ್ಲಿ ಎಷ್ಟು ನೀರನ್ನು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ, ಅದನ್ನು ಆಂಧ್ರದ ಸಹಕಾರವನ್ನು ತೆಗೆದುಕೊಂಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಶ್ರೀಮಾನ್ ಖರ್ಗೆಯವರು ಹೇಳಿದ ಒಂದು ಮಾತಿಗೆ ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನನಗೆ ಈ ಬಗ್ಗೆ ಎಲ್ಲಾ ವಿಷಯ ಗೊತ್ತಿದೆ. ನಾನು ಈಗ ತಾನೇ ಅಲ್ಲಿಂದಲೇ ಬರುತ್ತಿದ್ದೇನೆ. ನಾನು ರಾತ್ರಿ ತುಂಗಭದ್ರಾ ಡ್ಯಾಮ್‌ನಲ್ಲೇ ಇದ್ದೆ. ರೈತರು ಆ ಬಗ್ಗೆ ಎಲ್ಲಾ ಹೇಳಿದರು. ನಾನು ವಿಷಯವನ್ನೆಲ್ಲಾ ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ಎಷ್ಟು ಮಾತನಾಡಿದರೂ ಅಷ್ಟೆ. ಸನ್ಮಾನ್ಯ ಅಧ್ಯಕ್ಷರೇ, ಈ ವರ್ಷ ಕೃಷ್ಣಾ ಜಲ ಭಾಗ್ಯ ನಿಗಮದಿಂದ 500 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಬೇಕೆಂದು ಮಾಡಿದ್ದೇವೆ. ಬಜೆಟ್‌ನಲ್ಲಿ ಸುಮಾರು 250-260 ಕೋಟಿ ರೂ.ಗಳನ್ನು ಯು.ಕೆ.ಪಿ.ಗೆ ಇಟ್ಟಿದ್ದೇವೆ. ಆದರೆ ಒಂದು ಮಾತನ್ನು ಹೇಳುತ್ತೇನೆ, ಇನ್ನು ಎಷ್ಟು ಹಣವನ್ನು ಕೂಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ, ಈಗ ಮಾರ್ಚ್, ಎಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳು ವರ್ಕಿಂಗ್ ಪೀರಿಯಡ್ ಆಗಿರುತ್ತದೆ, ಆ ಕಾರಣದಿಂದ ಹೇಳಿದನೇ ಹೊರತು, ನಾವು ಈಗ ಏನು ಹಣ ಶೇಕಡ 17 1/2 ಬಡ್ಡಿಯಲ್ಲಿ ಎತ್ತುತ್ತೇವೆ, ಅದನ್ನು ಮುಗಿಸತಕ್ಕಾಂಥದಕ್ಕೆ ಈ ವರ್ಕಿಂಗ್ ಪೀರಿಯಡ್‌ನಲ್ಲಿ ಹೆಚ್ಚು ಉತ್ತೇಜಕ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಅಂದ ಮಾತ್ರಕ್ಕೆ 1996-97ರಲ್ಲಿ ನಾವು 500 ಕೋಟಿ ರೂ.ಗಳಿಗೇ ನಿಲ್ಲಿಸುತ್ತೇವೆ, 750 ಕೋಟಿ ರೂ.ಗಳಿಗೆ ನಿಲ್ಲಿಸುತ್ತೇವೆ ಅಂತ ನಾನು ಹೇಳಲಿಲ್ಲ. ಅದಕ್ಕೆ ನಾವು ಸಂಪನ್ಮೂಲ ರೂಢಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತೇವೆ. ಈಗ ಬಜೆಟ್‌ನಲ್ಲಿ 700 ಕೋಟಿ ರೂ.ಗಳು ಇದ್ದರೆ 1000 ಕೋಟಿ ರೂ. ಖರ್ಚು ಮಾಡಬೇಡ ಅಂತ ಯಾರೂ ಹೇಳುವುದಿಲ್ಲ. ಇವತ್ತು ನಮ್ಮ ಸಂಪನ್ಮೂಲಗಳನ್ನು ರೂಢಿಸಿಕೊಳ್ಳತಕ್ಕಂಥದಕ್ಕೆ ನಾವು ಜನಗಳ ಸಹಕಾರದಿಂದ ಪ್ರಯತ್ನ ಮಾಡುತ್ತೇವೆ. ಈ ಯೋಜನೆಗೆ ನಾವು ಏನು ಹಣವನ್ನು ತೊಡಗಿಸಬೇಕು ಅನ್ನುವುದು ಸರ್ಕಾರಕ್ಕೆ ಸೇರಿದ್ದು, ಎಷ್ಟು ಹಣವನ್ನು ಕೂಡಿಸಬೇಕೋ ಅದನ್ನು ಶಕ್ತಿ ಮೀರಿ ಕೂಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರು ಇನ್ನೊಂದು ಮಾತನ್ನು ಕೇಳಿದರು. ನೀರು ಹೋಗುತ್ತದೋ, ಇರುತ್ತದೋ ಅಂತ ಕೇಳಿದರು. ನನ್ನ ದೃಷ್ಟಿಕೋನದಲ್ಲಿ ನೀರು ಎಲ್ಲಿಗೂ ಹೋಗುವುದಿಲ್ಲ. ಯಾರೂ ತೆಗೆದುಕೊಂಡು ಹೋಗಲಿಕ್ಕೆ ಆಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ನೀರು.........

ಶ್ರೀ ಹೆಚ್.ಡಿ.ದೇವೇಗೌಡ:- ನಾನು ಅದೇ ವಿಷಯಕ್ಕೆ ಬರುತ್ತಿದ್ದೇನೆ. ತಾವು ಹೇಳಿದ್ದುದು ನನಗೆ ಅರ್ಥವಾಗಿದೆ. I have understood. I have sufficiently exercised on this irrigation issue. ಬಾಕಿ ವಿಷಯಗಳ ಬಗ್ಗೆ ನನಗೆ ಬುದ್ಧಿ ಇಲ್ಲದೇ ಇದ್ದರೂ.....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಮರೆತು ಹೋಗಿರಬಹುದು ಎಂದು ಆ ವಿಷಯ ಜ್ಞಾಪಿಸಲು ಪ್ರಯತ್ನಿಸಿದೆ. ನಿಮಗೆ ಬುದ್ಧಿ ಇಲ್ಲದಿದ್ದರೆ ನೀವು ಸಿ.ಎಂ. ಆಗುತ್ತಿರಲಿಲ್ಲ.

ಶ್ರೀ ಹೆಚ್.ಡಿ.ದೇವೇಗೌಡ:- ದಯಮಾಡಿ ಸ್ವಲ್ಪ ಕುಳಿತುಕೊಂಡರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಸ್ಕೀಮ್-(ಬಿ) ವಿಷಯ ಬೇರೆ. ಸ್ಕೀಮ್-(ಬಿ) ವಿಷಯ ಇವತ್ತು ಪಬ್ಲಿಷ್ ಆಗಿಲ್ಲ. ಅದು ನಿಮಗೂ ಗೊತ್ತಿರುವುದೇ, ನಮಗೂ ಗೊತ್ತಿರುವುದೇ. ಆ ಬಗ್ಗೆ ಕೇಂದ್ರ ಸರ್ಕಾರ ನೋಟಿಫಿಕೇಶನ್ ಹೊರಡಿಸಬೇಕು. ಕೇಂದ್ರ ಸರ್ಕಾರಕ್ಕೆ ನಾವು ಆ ಬಗ್ಗೆ ಅಪ್ಲೈ ಮಾಡಿದ್ದೇವೆ. ಸ್ಕೀಮ್-(ಬಿ) ಪಬ್ಲಿಷ್ ಮಾಡುವವರೆಗೆ ಅದರ ಬಗ್ಗೆ ಚರ್ಚೆ ಮಾಡತಕ್ಕಾಂಥದ್ದರಿಂದ ನನ್ನ ಮನಸ್ಸಿಗೆ ಅಷ್ಟೊಂದು ಫಲ ಸಿಗತಕ್ಕಾಂಥದ್ದು ಸಾಧ್ಯವಾಗಲಾರದು. Scheme 'B' must be notified by the Government of India ಇದಾದ ಮೇಲೆನೇ ಯಾವ ರೇಶಿಯೋನಲ್ಲಿ ಹಂಚಿಕೆ ಮಾಡಿಕೊಳ್ಳಬೇಕು, ಆಮೇಲೆ ಮತ್ತೆ ಇನ್ನೊಂದು ಟ್ರಿಬ್ಯುನಲ್ ಅನ್ನು with the consent of all the concerned States ಅದನ್ನು ಮತ್ತೆ ಕಾನ್ಸ್‌ಟಿಟ್ಯೂಟ್ ಮಾಡುವುದು. ಇವೆಲ್ಲವನ್ನೂ ಬಚಾವತ್ ಅವಾರ್ಡ್‌ನಲ್ಲೇ ಹೇಳಿದ್ದಾರೆ. ಅಂದರೆ 729 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳಲಿಕ್ಕೆ ಈ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ.ಎಸ್.ಪಾಟೀಲ್:- 25 ಎಕರೆಗಿಂತ ಹೆಚ್ಚಾಗಿ ಇದ್ದವರಿಗೆ ಯಾವ ಪ್ರಯೋಜನ ಸಿಗುವುದಿಲ್ಲ. ಫ್ಲಾಟೂ ಕೊಡುವುದಿಲ್ಲ ಮತ್ತು ದುಡ್ಡೂ ಕೊಡುವುದಿಲ್ಲ. ಅವರು ಏನು ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅನಂತರ ಮನೆಗಳ ಕಿಮ್ಮತ್ತು ಮಾಡುವಾಗ ಸವಕಳಿ ತೆಗೆಯಬಾರದು ಎಂದು ಹೇಳಿದ್ದಾರೆ. ಅದರ ಬಗ್ಗೆ ಸಹ ಇನ್ನೂ ಏನೂ ಆಗಲಿಲ್ಲ. ಬಾಗಲಕೋಟೆಯ ಜನ ತಮಗೆ ಅನ್ಯಾಯವಾಗಿದೆ ಅಂತ ತಿಳಿದುಕೊಂಡು ಸರದಿ ಉಪವಾಸ ನಡೆಸಿದ್ದಾರೆ. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಿ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿರುವ ಬಗ್ಗೆ ವರ್ಲ್ಡ್ ಬ್ಯಾಂಕಿನವರು ಎಲ್ಲಾ ಕಡೆ ಹೋಗಿ ನೋಡಿಕೊಂಡು ಬಂದು ಅವರು ಕೊಟ್ಟಿರತಕ್ಕ ಅಭಿಪ್ರಾಯವನ್ನು ನಾನು ಓದಿದೆ. ಈಗ ಆ ಅಧಿಕಾರಿಗೆ ಎಲ್ಲಾ ಜವಾಬ್ದಾರಿ ಕೊಟ್ಟಿದ್ದೇನೆ. ಏನಾದರೂ ನ್ಯೂನತೆಗಳು ಇದೆ ಎಂದು ಹೇಳಿದರೆ, ಅದನ್ನು ಸರಿಪಡಿಸಲಿಕ್ಕೆ ನಾನು ಆ ಸಂಬಂಧಪಟ್ಟಂತಹ ಅಧಿಕಾರಿಗೆ ಸೂಚನೆ ಕೊಡುತ್ತೇನೆ. ಮತ್ತೆ ಅದಕ್ಕಿಂತ ಮತ್ತೆ ಏನು ಹೇಳಬೇಕು?

ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ತುಮಕೂರು ಮತ್ತು ಚಿತ್ರದುರ್ಗ ಭಾಗಕ್ಕೆ ಬರತಕ್ಕಂತಹ ಭದ್ರಾ ಮೇಲ್ದಂಡೆ ಕಾಲುವೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. 1976ರಲ್ಲಿ ಬಚಾವತ್ ತೀರ್ಪು ಕೊಡುವಂತಹ

ಸಂದರ್ಭದಲ್ಲಿ ಅಪ್ಪರ್ ಕೃಷ್ಣಾ ಸ್ಪೆಸಿಫಿಕ್ ಆಗಿ ಇಷ್ಟೇ ನೀರು ಅನ್ನತಕ್ಕ ಅಲಾಟ್‌ಮೆಂಟ್ ಅನ್ನು ಟ್ರಿಬ್ಯೂನಲ್‌ನಲ್ಲೇ ಮಾಡಲಿಲ್ಲ. ಆದಕಾರಣ ಏನು ಮಾಡಿದರು ಎಂದರೆ, ಸ್ಕೀಮ್-(ಬಿ) ನಲ್ಲಿ 8 ಟಿ.ಎಂ.ಸಿ.ಯನ್ನು ಮತ್ತು ಮಾಸ್ಟರ್ ಪ್ಲಾನ್‌ನಲ್ಲಿ 20 ಟಿ.ಎಂ.ಸಿ. ನೀರನ್ನು ಅಲಾಟ್ ಮಾಡುವುದು ಜೊತೆಗೆ ಇದರ ಮೇಲೆ ನೀವು ವರ್ಕ್ ಔಟ್ ಮಾಡಿ ಎಂದು ಹೇಳಿದಾಗ, ರಾಜ್ಯ ಸರ್ಕಾರದವರು ಸುಮಾರು 4-5 ಪ್ರಪೋಸಲ್ ಕೇಂದ್ರ ಸರ್ಕಾರಕ್ಕೆ ಕೊಟ್ಟಂತಹ ಸಂದರ್ಭದಲ್ಲಿ, ಅದು ಟೆಕ್ನಿಕಲ್ ಫೈನಾನ್ಷಿಯಲ್ ನಾಟ್ ಫಿಸಿಬಲ್ ಅನ್ನತಕ್ಕ ತೀರ್ಮಾನಕ್ಕೆ ಬರಲಾಗಿದೆ. ಅದರ ಜೊತೆಗೆ ಮಾಗುಂದಿ, ಚಿಕ್ಕಮೊಗಳು ಭಾಗದಲ್ಲಿ ಇರತಕ್ಕಂತಹ ರೈತರ ವಿರುದ್ಧವಾದಂತಹ ಹೋರಾಟವನ್ನೇ ಕಾರಣ ಮಾಡಿಕೊಂಡು, ಇನ್ನೂ ನೀರು ಹೆಚ್ಚು ಅಲಾಟ್ ಮಾಡಲಿಲ್ಲ. ದಯಮಾಡಿ ತುಮಕೂರು ಮತ್ತು ಚಿತ್ರದುರ್ಗ ಭಾಗದಲ್ಲಿ ಇವತ್ತು ರೈತರ ಪರಿಸ್ಥಿತಿ ಏನು? ನೀರಿನ ಬವಣೆ ಎನ್ನತಕ್ಕಾಂಥದ್ದು ತಮ್ಮ ಅರಿವಿಗೆ ಬಂದಿರತಕ್ಕ ದೃಷ್ಟಿಯಿಂದ 8 ಟಿ.ಎಂ.ಸಿ. ಆಧರಿಸಿ ನೀವು ಇವತ್ತು ಪ್ರಾಜೆಕ್ಟ್ ಮಾಡುವುದಕ್ಕೆ ಹೋದಾಗ, ಅದು ಇನ್‌ಫಿಸಿಬಲ್ ಆಗುತ್ತದೆ. ಕನಿಷ್ಟ 45-50 ಟಿ.ಎಂ.ಸಿ. ನೀರು ಕೊಡತಕ್ಕ ಪ್ರಯತ್ನವನ್ನು ನೀವು ಮಾಡಿದರೆ, ನಿಜಕ್ಕೂ ಅದು ಫಿಸಿಬಲ್ ಆಗುತ್ತದೆ. ದಯಮಾಡಿ ನಾನು ಕೇಳತಕ್ಕಾಂಥದ್ದು, ತಾವು ಮುಖ್ಯಮಂತ್ರಿಗಳು ಆಗಿರಬೇಕಾದರೆ ಏನಾದರೂ ಒಂದು ಹೊಸ ಪ್ರಾಜೆಕ್ಟ್ ಮಾಡುವುದಕ್ಕೆ ಅವಕಾಶ ಇದೆ ಎಂದರೆ, ನೀವು ಇದೊಂದು ಪ್ರಾಜೆಕ್ಟ್ ಮಾಡುವುದಕ್ಕೆ ಆಗುತ್ತದೆ. ದಯವಿಟ್ಟು ಕನಿಷ್ಟ 50 ಟಿ.ಎಂ.ಸಿ. ನೀರನ್ನಾದರೂ ಸೇವ್ ಮಾಡಿ ಕೊಡುತ್ತೀವಿ ಎನ್ನತಕ್ಕಂತಹ ಒಂದು ಆಶ್ವಾಸನೆಯನ್ನು ನೀವು ಮಾಡಬೇಕು. ಎರಡನೆಯದಾಗಿ, ಇದುವರೆವಿಗೂ ನೀವು ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕಂತಹ ಪ್ರಪೋಸಲ್‌ಗಳೇನಿವೆ, ಅವು ಕೇವಲ ಟೋಪೋಷೀಟ್ಸ್ ಸ್ಟಡೀಸ್ ಮಾತ್ರ. ಹಿಂದೆಯೂ ಕೂಡ 4-5 ಪ್ರಪೋಸಲ್ಸ್ ಮಾಡಿ ಕೊಟ್ಟಿದ್ದಾರೆ. 15 ಟಿ.ಎಂ.ಸಿ. ಆದರೆ ಎಷ್ಟು? 20 ಟಿ.ಎಂ.ಸಿ. ಆದರೆ ಎಷ್ಟು? 45 ಟಿ.ಎಂ.ಸಿ. ಆದರೆ ಎಷ್ಟು? ಅಂತ ಹೇಳಿ ಪ್ರಪೋಸಲ್ ಕೊಟ್ಟರು. ಆದರೆ ಪ್ರಪೋಸಲ್ ಕೊಟ್ಟರೂ ಸಹಿತ ಇದುವರೆವಿಗೂ ಯಾವುದೂ ಒಪ್ಪಿಗೆ ಆಗಲಿಲ್ಲ. ದಯಮಾಡಿ ನಾನು ಹೇಳತಕ್ಕದ್ದು ಕನಿಷ್ಟ 50 ಟಿ.ಎಂ.ಸಿ. ನೀರನ್ನು ನಾನು ಕೊಡುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ಮತ್ತು ಅಲ್ಲಿ ಸ್ಟಡಿ ಮಾಡಿ ಅದನ್ನು ಕೊಡತಕ್ಕಂತಹ ತೀರ್ಮಾನವನ್ನು ನೀವು ಮಾಡುತ್ತೀರೋ? ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಏಕೆಂದರೆ ತಾವು ಚಿತ್ರದುರ್ಗಕ್ಕೆ ಹೋದಂತಹ ಸಂದರ್ಭದಲ್ಲಿ ಕೂಡ ಸಾಕಷ್ಟು ಅದರ ಬಗ್ಗೆ ಮಾತನ್ನು ಆಡಿದ್ದೀರಿ. ದಯಮಾಡಿ ಸ್ಪೆಸಿಫಿಕ್ ಆಗಿ ತಮ್ಮ ಸರ್ಕಾರದ ತೀರ್ಮಾನ ಏನು ಎನ್ನತಕ್ಕಾಂಥದನ್ನು ಈ ಯೋಜನೆ ಬಗ್ಗೆ ತಾವು ಪ್ರಕಟಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ನಾನು ಮೊದಲೇ ಸೂಕ್ಷ್ಮವಾಗಿ ಹೇಳಿದೆ. ವಾಟರ್ ಪ್ಲಾನ್‌ನಲ್ಲಿ 1993ರಲ್ಲಿ ರಿವೈಸ್ ಮಾಡಿದ್ದಾರೆ. ಆ 8 ಟಿ.ಎಂ.ಸಿ. ನೀರು ಹಿಂದೆ ಏನು ನಾವು ಇಟ್ಟಿದ್ದಿವಿ ಅದನ್ನು ಕೂಡ ಬದಲಾವಣೆ ಮಾಡಿದ್ದಾರೆ ಅಂತ ನಾನು ಹೇಳಿದೆ. 1993ರಲ್ಲಿ ವಾಟರ್ ಪ್ಲಾನ್ ಅನ್ನು ರಿವೈಸ್ ಮಾಡಿದಾಗ, ಭದ್ರಾಕ್ಕೆ 8 ಟಿ.ಎಂ.ಸಿ. ನೀರು ಹಿಂದೆ ಏನು ಇಟ್ಟಿತ್ತು ಅದನ್ನು ಮಾರ್ಪಾಡು ಮಾಡಿ ಇವತ್ತು ಗೋದಾವರಿ ಡೈವರ್ಶನ್‌ನಿಂದ ಮುಂದೆ ಏನು ನಮಗೆ ನೀರು ಸಿಕ್ಕಿತ್ತೋ, 22-23 ಟಿ.ಎಂ.ಸಿ. ಅದರಲ್ಲಿ ತೆಗೆದುಕೊಳ್ಳಬಹುದು ಅನ್ನತಕ್ಕಾಂಥ ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡಿ, ವಾಟರ್

ಪ್ಲಾನ್ ಅನ್ನು ಮಾರ್ಪಾಡು ಮಾಡಿದ್ದಾರೆ ಎಂದು ಹೇಳಿದೆ. ಅದಕ್ಕೆ ಕಾರಣವೇನು ಅಂತ ಹೇಳಲಿಲ್ಲ. ಅಷ್ಟಕ್ಕೆ ಅದನ್ನು ನಿಲ್ಲಿಸುತ್ತೇನೆ. ಈಗ ನೀವು ಏನು ಹೇಳಿದಿರಿ, 50ಟಿ.ಎಂ.ಸಿ. ನೀರನ್ನು ಎಲ್ಲಾದರೂ ತಂದು ಕೊಡಿರಿ ಎಂದರೆ ಎಲ್ಲಾದರೂ ತಂದು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಭದ್ರಾದಲ್ಲಿ ಬರುವ ನೀರನ್ನೇ ನಿಮಗೆ ತರಬೇಕು. ಈಗ ಏನು ಕೃಷ್ಣಾ ನೀರನ್ನು ತಂದು ಕೊಡಲಿಕ್ಕೆ ಆಗಲಿಲ್ಲ. ಅಥವಾ ಗೋದಾವರಿ ನೀರನ್ನು........... ನಾನು ನಮ್ಮ ಅಧಿಕಾರಿಗಳಿಗೆ ಕೇಳಿದೆ, ಏನ್ರೀ ಗೋದಾವರಿ ಡೈವರ್ಶನ್‌ನಿಂದ ಅಲ್ಲಿಗೆ ನೀರು ತರುವುದು ಹೇಗೆ? ಈ ವ್ಯಾಲಿ ಒಳಗೆ ಮೊದಲು ನೀರು ಇಲ್ಲದೇ ಇದ್ದರೆ, ಯೀಲ್ಡ್ ಇಲ್ಲದೇ ಇದ್ದರೆ, ಇರುವ 8 ಟಿ.ಎಂ.ಸಿ. ನೀರನ್ನು ಬೇರೆ ಉಪಯೋಗ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದಾಗ, ಏನು ಆಗಬಹುದು ಅಂತ ನಾನು ನಮ್ಮ ಅಧಿಕಾರಿಗಳಿಗೆ ಕೇಳಿದೆ. ತುಂಗಾ ಮತ್ತು ಭದ್ರಾ ಎರಡೂ ಸೇರಿ ನಾವು ಎಷ್ಟು ಉಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕಂತಹ ನಿಬಂಧನೆ, ನಿರ್ಬಂಧವನ್ನು ಇವತ್ತು ಕೇಂದ್ರ ಸರ್ಕಾರದವರು ವಿಧಿಸಿದ್ದಾರೆ. ಅದಕ್ಕಿಂತ ಮುಂದೆ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಅಪ್ಪರ್ ತುಂಗಾಗೆ 3 1/2 ಲಕ್ಷ ಎಕರೆ ಅಂತ ಹೇಳಿ 22-23 ಟಿ.ಎಂ.ಸಿ. ಇವತ್ತು ಲೆಕ್ಕ ಹೇಳಿಕೊಂಡಿದ್ದಾರೆ. ನಾನು ಆ ಹಳೇ ಗೌರ್ನಮೆಂಟ್ ಆರ್ಡರ್ ಅನ್ನು ನೋಡಿದ್ದೇನೆ. 22 ಟಿ.ಎಂ.ಸಿ. ನೀರಿಗೆ 3 1/2 ಲಕ್ಷ ಎಕರೆ ನೀರು ಆಗುವುದಿಲ್ಲ. ಅದು ಹೇಗೆ ಮಾಡಿದರು ಅಂತ ನಾನೇ ಪ್ರಶ್ನೆ ಮಾಡಿ ಹಿಂದೆ ನಾನು ಸದನದಿಂದ ಹೊರಗಡೆ ಇದ್ದಾಗ ಒಂದು ಹೇಳಿಕೆಯನ್ನು ಕೊಟ್ಟಿದ್ದೆ. ಇವತ್ತು ಆ 8 ಟಿ.ಎಂ.ಸಿ. ನೀರು ಇದರಲ್ಲಿ ನುಂಗಿಕೊಂಡು ಹೋಗಿದೆ, ಅಥವಾ ಮರ್ಜ್ ಆಗಿದೆ ಎಂದು ಇಟ್ಟುಕೊಳ್ಳಿ. ಆದರೆ ಒಂದು, ನಿನ್ನೇ ಕೂಡ ನಾನು ಚಿತ್ರದುರ್ಗದಲ್ಲಿ ಮಾತನಾಡುವಾಗ ಒಂದು ಮಾತು ಹೇಳಿದ್ದೇನೆ. ಹೇಳಿರತಕ್ಕಂತಹ ಮಾತು ಏನೆಂದರೆ......ನಾನು ಹೇಳಿದೆ ಗೋದಾವರಿ ಡೈವರ್ಷನ್ ಇಲ್ಲಿಗೆ ತರುವುದಕ್ಕೆ ಆಗುವುದಿಲ್ಲ. ಭದ್ರಾ ನೀರನ್ನು ಏನಾದರೂ ಮಾಡಬೇಕು. ಅದರಲ್ಲಿ ಸನ್ಮಾನ್ಯ ಹಿರಿಯರಾದ ನಿಜಲಿಂಗಪ್ಪನವರು ನಿನ್ನೆ ಸ್ವಾತಂತ್ರ್ಯ ಹೋರಾಟಗಾರರ ಸಭೆಯಲ್ಲಿ ಈ ಮಾತನ್ನು ಹೇಳಿದರು. ಆದರೆ ಒಂದನ್ನು ನಾವು ಯೋಚನೆ ಮಾಡಬಹುದು, ನಮ್ಮ ತುಂಗ ಭದ್ರಾದಲ್ಲಿ ಸಿಲ್ಟ್ ಅಪ್ ಆಗಿ ಸುಮಾರು 32-33 ಟಿ.ಎಂ.ಸಿ. ನೀರು ಶೇಖರಣೆ ಗಾತ್ರ ಕಡಿಮೆಯಾಗಿದೆ. ಆ ಶೇಖರಣೆ ಗಾತ್ರ ಕಡಿಮೆ ಆಗಿರುವುದರಿಂದ ಆ ನೀರನ್ನು ನಾವು ಮೇಲ್ಭಾಗದಲ್ಲಿ ಬಳಕೆ ಮಾಡಿಕೊಳ್ಳುವ ಬಗ್ಗೆ ಸಾಧ್ಯವಾ ಅನ್ನುವುದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಒಂದು ಕಡೆ ಪರಿಸರದ ಸಮಸ್ಯೆ ಇದೆ, ಇನ್ನೊಂದು ಕಡೆ ಈ ಭಾಗದ ಜನತೆಯ ಕಷ್ಟದ ಸಮಸ್ಯೆ ಕೂಡ ಇದೆ. ಅದು ಎಷ್ಟರ ಮಟ್ಟಿಗೆ ಎರಡರ ಮಧ್ಯೆ ಕಾರ್ಯಗತ ಮಾಡತಕ್ಕಂತಹ ಒಂದು ಯೋಜನೆಯನ್ನು ರೂಪಿಸಿಕೊಳ್ಳತಕ್ಕಂಥದ್ದಕ್ಕೆ ಸಾಧ್ಯತೆ ಇದೆ ಅನ್ನುವುದನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಎಸ್.ಪಾಟೀಲ್:- ಅಲ್ಲಿ ನಾವು ಕೇಳಿದರೆ, ಸರ್ಕಾರಕ್ಕೆ ನಾವು ಬರೆದಿದ್ದೇವೆ, ನನಗೆ ಇನ್ನು ಸರ್ಕಾರದಿಂದ ಉತ್ತರ ಬಂದಿಲ್ಲ, ಸರ್ಕಾರದಿಂದ ಉತ್ತರ ಬಂದ ನಂತರ ನಾವು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಮಹತ್ವದ ವಿಷಯ ಇದೆ. ಇದಕ್ಕೆ ಏನು ಎಂದು ಕ್ಲಿಯರ್ ವಿಚಾರ ಹೇಳಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಹೇಳುವುದು 25 ಎಕರೆಯಿಂದ ಮೇಲಿರತಕ್ಕಂತಹ ಭೂಮಿ ಏನು ಕಳೆದುಕೊಂಡಿದ್ದಾರೆ ಅಂತಹವರು ದೊಡ್ಡ ಭೂ ಹಿಡುವಳಿದಾರರು

ಎಂದು, ಅಂತಹವರಿಗೆ ರಿಹ್ಯಾಬಿಲಿಟೇಷನ್ ಪ್ರೊಗ್ರಾಂನಲ್ಲಿ ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಡಿ.ಎಸ್.ಪಾಟೀಲರೇ, ತಮಗೆ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಆಶ್ವಾಸನೆ ಕೊಟ್ಟಿದ್ದಾರೆ, ಆ ಅಧಿಕಾರಿಗೆ ಸೂಕ್ತ ನಿರ್ದೇಶನ ಕೊಟ್ಟು ನಿಮ್ಮ ಸಮಸ್ಯೆ ಏನಿದೆ ಅದನ್ನು ಈಡೇರಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೆ, ಎರಡು ಸಾವಿರ ಇಸವಿ ಒಳಗೆ ನಾವು ಈ ನೀರಿನ ಬಳಕೆ ಮಾಡತಕ್ಕಂತಹ ಎಲ್ಲಾ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಮಧ್ಯೆ ಸಂಬಂಧಪಟ್ಟಂತಹ ಮುಖ್ಯ ಮಂತ್ರಿಗಳ ಸಭೆ ಒಂದೆರಡು ಸಾರಿ ನಡೆದಿದೆ. ಒಂದು ಸಾರಿ ಮೈಸೂರಿನಲ್ಲೂ ಆಯಿತು, ಮತ್ತೊಂದು ಸಾರಿ ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ನಡೆಯಿತು. ಇದು ಮಾತುಕತೆ ಮೂಲಕ ಬಗೆಹರಿಯುವುದಾದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮತ್ತೊಮ್ಮೆ ಮಾತುಕತೆಗೆ ಸೇರತಕ್ಕಂತಹ ಉದ್ದೇಶ ಹೊಂದಿದ್ದಾರೆಯೇ? ಹಾಗೆ ಹೊಂದಿದ್ದರೆ, ಮತ್ತೊಂದು ಸಭೆ ಸೇರಿಸುವುದಕ್ಕೆ ಮುಂದಾಗತಕ್ಕಂಥದ್ದು ಒಳ್ಳೆಯದು ಅಲ್ಲವೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆ.

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೆ, ಹಿಂದೆ ಹಿಂದಿನ ಮುಖ್ಯ ಮಂತ್ರಿಗಳ ಸಭೆ ಆಯಿತು ಎಂದು ಹೇಳಿದರು, ಆ ಸಭೆಯಾದ ಮೇಲೆ ಅಲ್ಲಿಂದ ಮುಂದಕ್ಕೆ ನಾಲ್ಕು ವರ್ಷಗಳು ಕಳೆದು ಹೋಗಿದೆ. ಆ ರೀತಿ ಚರ್ಚೆಯಲ್ಲಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುವುದು ಸೂಕ್ತ, ಆ ಪ್ರಯತ್ನವನ್ನು ಮುಂದುವರೆಸುವುದು ಸೂಕ್ತ ನೀವು ಹೇಳಿದಂತಹ ರೀತಿಯಲ್ಲಿ ಹಿಂದೆ ಏನು ಮಾತುಕತೆ ನಡೆದಿತ್ತು ಅದನ್ನು ಮರು ಪ್ರಯತ್ನ ಮಾಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ. ಏಕೆಂದರೆ ಒಂದು ವಿಷಯ ಹೇಳುತ್ತೇನೆ, ಮೊದಲೂ ಹೇಳಿದ್ದೇನೆ, ಹಿರಿಯರಾದ ಖರ್ಗೆಯವರು ಕೇಳುವಂತಹ ಕಾಲದಲ್ಲಿ (ಬಿ) ಸ್ಕೀಮ್ ಗವರ್ನ್‌ಮೆಂಟ್ ಆಫ್ ಇಂಡಿಯಾದಲ್ಲಿ ಪಬ್ಲಿಕೇಷನ್ ಮಾಡದೇ, ನೋಟಿಫಿಕೇಷನ್ ಮಾಡದೆ ನಾವು ಏನೇ ಮಾತನಾಡಿದರೂ ನಮ್ಮ ಹಂತದಲ್ಲಿ ಅಷ್ಟು ಸುಲಭವಾಗಿ ಬಗೆಹರಿಯುವುದಿಲ್ಲ. ಅದು ನೆಗೋಸಿಯೇಷನ್ ಮುಖೇನ ಚರ್ಚೆ ಮಾಡುವುದಕ್ಕೆ ಆತಂಕ ಏನು ಇಲ್ಲ, ಅಡ್ಡಿ ಇಲ್ಲ ಪ್ರಯತ್ನ ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ಬಹಳ ಸೂಕ್ಷ್ಮವಾಗಿ ಒಂದು ವಿಚಾರ ಹೇಳಿದರು, ತುಂಗಾ ಮತ್ತು ಭದ್ರಾ, ಡ್ಯಾಮ್‌ನಲ್ಲಿ ಸಿಲ್ಟ್ ಆಪ್ ಆಗಿ ಅಲ್ಲಿ ಸ್ಟೋರೇಜ್ ಕೆಪ್ಯಾಸಿಟಿ ಕಡಿಮೆಯಾಗಿದೆ. ಆದುದರಿಂದ ಮತ್ತೆ ಪರಿಶೀಲನೆ ಮಾಡುತ್ತಿದ್ದೇನೆ, ಅದನ್ನು ಎತ್ತರಿಸುವುದು, ಇನ್ನು ಏನೋ ಒಂದು ಯೋಜನೆಯ ಬಗ್ಗೆ ಬಹಳ ಸೂಕ್ಷ್ಮವಾಗಿ ಇವರು ಹೇಳಿದ ಹಾಗೆ ನನಗನ್ನಿಸಿತು, ದಯಮಾಡಿ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಇದು ಮಲೆನಾಡಿನ ರೈತರ ಮತ್ತು ನಮ್ಮ ಬದುಕಿನ ಪ್ರಶ್ನೆ. ಅಳಿವು ಉಳಿವಿನ ಪ್ರಶ್ನೆ ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾಲತಿ ರಿಸರ್ವಾಯರ್ ನೀವು ಏನಾದರೂ ಹಾಕುವುದಾದರೆ, ನನ್ನ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಜನರ ಶವದ ಮೇಲೆ ಹಾಕಬೇಕಾಗುತ್ತದೆ. ನಮ್ಮ ಮಲೆನಾಡು ಎವರಗ್ರೀನ್ ಫಾರೆಸ್ಟನ್ನು ನೀವು ಮತ್ತೊಮ್ಮೆ ಮುಳುಗಿಸುವುದಕ್ಕೆ, ಬೇರೆಯವರಿಗೆ ಒಳ್ಳೆಯದು ಮಾಡುವುದಕ್ಕಾಗಿ

ನಮ್ಮ ಬದುಕನ್ನು ಕಸಿಯುವುದಕ್ಕೆ ಯಾರಿಗೂ ಕೂಡ ಅಧಿಕಾರ ಇಲ್ಲ, ಖಂಡಿತ ಅದಕ್ಕೆ ಬಿಡುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಅಂತಹ ಯೋಚನೆಯನ್ನು ದಯಮಾಡಿ ಕೈ ಬಿಡಬೇಕು.

ಶ್ರೀ ಹೆಚ್.ಡಿ.ದೇವೇಗೌಡ:- ಈ ರಾಜ್ಯದ ಅಭಿವೃದ್ಧಿ ಮಾಡತಕ್ಕಂತಹ ಕಾಲದಲ್ಲಿ ಯಾರ ಶವದ ಮೇಲೆ ಮಾಡಬೇಕಾದ ಅವಶ್ಯಕತೆ ಇಲ್ಲ. ನಮಗೆ ಸರ್ಕಾರಕ್ಕೆ ಪರಿಜ್ಞಾನ ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇವತ್ತು ರಾಜ್ಯದ ಜಲಸಂಪತ್ತನ್ನು ಬಳಕೆ ಮಾಡತಕ್ಕಂಥದ್ದು ಯಾವ ಕಾಲದಲ್ಲಿ ಎಷ್ಟು ಇವತ್ತು ಅದರ ಉಪಯುಕ್ತತೆಯನ್ನು ನಾವು ಮಾಡಿಕೊಳ್ಳಬೇಕು, ಹಾಗೆ ಮಾಡುವಾಗ ಯಾವುದೇ ಭಾಗಕ್ಕೆ ಭಾರಿ ಅನಾಹುತ ಆಗದಂತೆ ನೋಡಿಕೊಳ್ಳುತ್ತೇವೆ. ಅವರು ಏನು ಹೇಳಿದರು ಮಾಲತಿ ಕೆಲಸ ಇಲ್ಲಿ ಏನು ನಡೆಯುತ್ತಿಲ್ಲ, ಆ ಕಾರ್ಯಕ್ರಮ ಇವತ್ತು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ನೀವು ನಮ್ಮ ಶಬ್ದ ಮೇಲೆ, ನಮ್ಮ ತಾಲ್ಲೂಕಿನ ಶವದ ಮೇಲೆ, ಯಾವ ಶವನೂ ಬೇಡ ಜೀವಂತವಾಗಿರಿ, ನಿಮ್ಮ ತಾಲ್ಲೂಕು ಜೀವಂತವಾಗಿರಲಿ, ಏನೂ ಕೆಲಸ ಪ್ರಾರಂಭವಾಗಿಲ್ಲ ಅಲ್ಲಿ. ಆವೇಶದ ಭರದಲ್ಲಿ ಏನೂ ಹೇಳುವುದು ಬೇಡ. ಭದ್ರಾ ಯೋಜನೆಯಲ್ಲಿ ಇವತ್ತು ಚಿತ್ರದುರ್ಗ ಮತ್ತು ತುಮಕೂರಿಗೆ ಏನು ಅವರ ಬವಣೆ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಪ್ರಯತ್ನ ಮಾಡಬಹುದು ಎನ್ನುವ ಪ್ರಶ್ನೆ ಇದೆ, ಹಾಗೆ ಮಾಡತಕ್ಕಂತಹ ಕಾಲದಲ್ಲಿ ಇವತ್ತು ಸಾಧಕ ಬಾಧಕ ಎಲ್ಲವನ್ನು ಯೋಚನೆ ಮಾಡುತ್ತೇವೆ. ಅದಕ್ಕೆ ಇಟ್ಟಿದ್ದಂತಹ ನೀರಿನ ಪ್ಲಾನ್ ಏನಿದೆ ಅದನ್ನು ಬದಲಾವಣೆ ಮಾಡಿದ್ದಾರೆ. ಇವತ್ತು ಸ್ಟೋರೇಜ್ ಏನು ಕಡಿಮೆಯಾಗಿದೆ ಅದರಲ್ಲಿ ಉಳಿತಾಯದ ನೀರಿನಲ್ಲಿ ಬಳಕೆ ಮಾಡುವುದಕ್ಕೆ ಸಾಧ್ಯ ? ಎಂದು ನೋಡುತ್ತಿದ್ದೇವೆ. ಅದು ಭದ್ರಾಗೆ ಸಂಬಂಧಪಟ್ಟಿದೆಯೇ ಹೊರತು, ಅದು ಅಪ್ಪರ್ ಕೃಷ್ಣಾ ತುಂಗಾಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದು ಹೇಳುತ್ತೇವೆ.

ಅಧ್ಯಕ್ಷರು:- ಚರ್ಚೆ ಮುಕ್ತಾಯವಾಯಿತು.

ವರದಿಗಳನ್ನೊಪ್ಪಿಸುವುದು

ಡಾ|| ಎ.ಬಿ.ಮಲಕರೆಡ್ಡಿ (ಯಾದಗಿರಿ):- ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನ ಆರೋಗ್ಯ ಇಲಾಖೆಯ ವಿಷಯ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನೊಪ್ಪಿಸಲಾಯಿತು.

ಪ್ರಕಟಣೆ

1996-97ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ನಾಮ ಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ವಿವಿಧ ಸಮಿತಿಗಳಿಗೆ ಈ ಕೆಳಗೆ ಸೂಚಿಸಿರುವ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ:-

1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

ಶ್ರೀಯುತರುಗಳಾದ:-